
ಜುಲೈ 6, 2025
41ನೇ ವರ್ಷದಲ್ಲಿ
www.facebook.com/firstcrimenewspaper/
ಸ್ಥಾಪಕ ಸಂಪಾದಕ : ದಿ||ಎಂ. ಮಲ್ಲಿಕಾರ್ಜುನಯ್ಯ

# ಪೊಲೀಸ್ ನ್ಯೂಸ್

1992
ಪರಿಶೋಧನೆ, ಪತ್ತೇದಾರಿಕೆ ಮತ್ತು ರೋಚಕ ಸುದ್ದಿಗಳ ಸಚಿತ್ರ ಕನ್ನಡ ವಾರಪತ್ರಿಕೆ
ಬೆಲೆ : ₹20/-

## ಬೆಳ್ಳಂದೂರು ಮಹಿಳೆಗೆ 'ಬೆತ್ತಲೆ' ಬ್ಲ್ಯಾಕ್‌ಮೇಲ್

# ಮಾಟ-ಮಂತ್ರ ತೆಗೆಯುವ ನೆಪದಲ್ಲಿ ಕಾಮದಾಟ!



ಕೇರಳದ ಮಾಂತ್ರಿಕರು ಬೆಂಗಳೂರಲ್ಲಿ ಅರೆಸ್ಟ್!



## ಸಿದ್ದರಾಮಯ್ಯಗೆ 'ಅಗ್ನಿಪರೀಕ್ಷೆ' ಶುರುವಾಯ್ತು!

## ಮರ್ಡರ್ ಮಾಡಿ ಹೆಣದೊಂದಿಗೆ ಮಲಗಿದ್ರು!







## ಕೊಳ್ಳೇಗಾಲದ ಕಾಮಿನಿ ಗೆಣೆಕಾರನಿಂದಲೇ ಕೊಲೆಯಾದಳು!

## ಫೇಸ್ಬುಕ್ ಪ್ರಿಯಕರನಿಂದ 'ಪ್ರೀತಿ' ಫಿನಿಶ್!



**2023ರ ವಿಧಾನಸಭಾ ಚುನಾವಣೆಯಲ್ಲಿ ಅಂದು ಅಧಿಕಾರದಲ್ಲಿದ್ದ ಬಿಜೆಪಿ ಸರ್ಕಾರದ ವಿರುದ್ಧ ಫಾರ್ಟಿ ಪರ್ಸೆಂಟ್ ಕಮೀಷನ್ ಆರೋಪವನ್ನು ಮುಂದಿಟ್ಟುಕೊಂಡು ರಾಜ್ಯದಾದ್ಯಂತ ಜನವಿರೋಧಿ ಅಲೆಯನ್ನು ಸೃಷ್ಟಿಸಿ, ಗ್ಯಾರಂಟಿ ಯೋಜನೆಗಳನ್ನು ಘೋಷಿಸಿ, ನಿರೀಕ್ಷೆಗೂ ಮೀರಿದ ಸ್ಥಾನಗಳಲ್ಲಿ ಗೆದ್ದು ಅಧಿಕಾರ ಹಿಡಿದ ಕಾಂಗ್ರೆಸ್ ಇವತ್ತು ದಿನ ಬೆಳಗಾದರೆ ಹಗರಣದ ಆರೋಪ, ಅಭಿವೃದ್ಧಿ ಕಾರ್ಯಗಳ ನಿರ್ಲಕ್ಷ್ಯ, ಸಿಎಂ ಸ್ಥಾನ ಬದಲಾವಣೆಯ ಚರ್ಚೆ, ಸ್ವಪಕ್ಷದ ಶಾಸಕರ ಆಕ್ರೋಶ... ಹೀಗೆ ಹತ್ತು ಹಲವು ಕಿರಿಕಿರಿಗಳೊಂದಿಗೆ ಆಡಳಿತ ನಡೆಸುವ ಸ್ಥಿತಿಗೆ ಸಿಎಂ ಸಿದ್ದರಾಮಯ್ಯ ಬಂದಿರುವುದು ನಿಜಕ್ಕೂ ಆಶ್ಚರ್ಯ ಮೂಡಿಸುತ್ತಿದೆ. ಜತೆಗೆ ಖಡಕ್ ಸಿಎಂ ತಣ್ಣಗಾಗಿದ್ದೇಕೆ ಎಂಬ ಪ್ರಶ್ನೆಗಳು ಜನಮನದಲ್ಲಿ ಹುಟ್ಟಿಕೊಳ್ಳಲಾರಂಭಿಸಿವೆ...**



# ಸಿಎಂ ಸಿದ್ದರಾಮಯ್ಯಗೆ ಅಗ್ನಿಪರೀಕ್ಷೆ ಆರಂಭ!

✍ ಬಿ.ಎಂ. ಲವಕುಮಾರ್

ಕಾಂಗ್ರೆಸ್ ಆಡಳಿತಕ್ಕೆ ಬಂದರೆ ಸಿಎಂ ಸಿದ್ದರಾಮಯ್ಯ ಕರ್ನಾಟಕವನ್ನು ಸಿಂಗಾಪುರ ಮಾಡುತ್ತಾರೆ ಎಂದು ನಂಬಿದ್ದವರಿಗೆ ನೆನೆಗುದಿಗೆ ಬಿದ್ದ ಅಭಿವೃದ್ಧಿ ಕಾಮಗಾರಿಗಳು, ಗುಂಡಿಬಿದ್ದ ರಸ್ತೆಗಳು, ಬಿಡುಗಡೆಯಾಗದ ಅನುದಾನದ ಬಗೆಗಿನ ಆರೋಪಗಳ ಜತೆಗೆ ಬೆಲೆ ಏರಿಕೆಯ ಬಿಸಿಯಲ್ಲಿ ಜನಸಾಮಾನ್ಯರು ಹಿಡಿಶಾಪ ಹಾಕುತ್ತಿರುವುದು ಕಂಡು ಬರುತ್ತದೆ. ಅದರಲ್ಲೂ ಸ್ವತಃ



ಸಿಎಂ ಸಿದ್ದರಾಮಯ್ಯ ಅವರ ವಿರುದ್ಧವೇ ಭ್ರಷ್ಟಾಚಾರದ ಆರೋಪ ಬಂದಿರುವುದು, ಮುಡಾ ಹಗರಣದಲ್ಲಿ ನಿವೇಶನಗಳನ್ನು ಹಿಂತಿರುಗಿಸಿದ್ದು, ವಾಲ್ಮೀಕಿ ಹಗರಣದಲ್ಲಿ ಸಚಿವರು ಜೈಲ್‌ಗೆ ಹೋಗಿ ಬಂದಿರುವುದು, ಈಗಾಗಲೇ ಮನಿ ಕೊಡು ಮನಿ ಪಡಿ ಆರೋಪಗಳು ಸಚಿವ ಜಮೀರ್‌ಖಾನ್ ಮೇಲೆ ಕೇಳಿ ಬಂದಿರುವುದು ಎಲ್ಲವೂ



ಕಾಂಗ್ರೆಸ್ ಸರ್ಕಾರಕ್ಕೆ ಸದ್ಯ ಅಂಟಿಕೊಂಡಿರುವ ಕಪ್ಪುಚುಕ್ಕೆಗಳಾಗಿವೆ. ಇದರಾಚೆಗೆ ಸರ್ಕಾರದ ಬಗ್ಗೆ ಸ್ವತಃ ಆಡಳಿತ ಪಕ್ಷದವರೇ ಮಾತನಾಡುವಂತಾಗಿದೆ.

ಗ್ಯಾರಂಟಿ ಯೋಜನೆಗಳ ಹೊಡೆತ ಸರ್ಕಾರವನ್ನು ಹಿಂಡಿ ಹಿಪ್ಪೆ ಮಾಡುತ್ತಿದೆ. ಅಧಿಕಾರ ಪಡೆಯುವ ಸಲುವಾಗಿ ಮತದಾರರಿಗೆ ಗ್ಯಾರಂಟಿ ಯೋಜನೆಗಳನ್ನು ಘೋಷಿಸಿದ ಕಾಂಗ್ರೆಸ್ ನಾಯಕರು ಅದರ ಸಾಧಕ ಬಾಧಕಗಳ ಬಗ್ಗೆ ಯೋಚಿಸಿರಲಿಲ್ಲ. ಅಧಿಕಾರಕ್ಕೆ ಬಂದ ಮೇಲೆ ನೋಡಿಕೊಂಡರಾಯಿತು ಎಂದು ಆಲೋಚಿಸಿದ್ದರು. ಸರ್ಕಾರಕ್ಕೆ ಒಂದಷ್ಟು ಆದಾಯ ತಂದು ಕೊಡುತ್ತಿದ್ದ ಮೂಲವನ್ನೇ ಮುಚ್ಚಿ ಇದೀಗ ಬೊಕ್ಕಸ ತುಂಬಿಸಲು ಸರ್ಕಸ್ ಮಾಡುವಂತಾಗಿದೆ.

ಈಗಾಗಲೇ ಸರ್ಕಾರದ ಬೊಕ್ಕಸ ಖಾಲಿಯಾಗಿದೆ. ಅದನ್ನು ತುಂಬಿಸುವ ಸಲುವಾಗಿ ಬೇರೆಲ್ಲಾ ಮೂಲಗಳಿಂದ ಹಣ ಸಂಗ್ರಹಕ್ಕೆ ಇಳಿಯಲಾಗಿದೆ. ಅಭಿವೃದ್ಧಿ ಕೆಲಸಗಳನ್ನು ನಿಲ್ಲಿಸಲಾಗಿದೆ. ಶಾಸಕರಿಗೆ ನೀಡಬೇಕಾದ ಅನುದಾನಗಳಿಗೆ ಬ್ರೇಕ್ ಹಾಕಲಾಗಿದೆ. ಹೀಗಾಗಿ ಕ್ಷೇತ್ರಗಳಲ್ಲಿ ಯಾವುದೇ ಅಭಿವೃದ್ಧಿಯಾಗುತ್ತಿಲ್ಲ. ಇದರಿಂದ ಕ್ಷೇತ್ರದಲ್ಲಿ ಶಾಸಕರು ಇದ್ದು ಇಲ್ಲದಂತಹ ಪರಿಸ್ಥಿತಿ ನಿರ್ಮಾಣವಾಗಿದ್ದು, ಜನ ಕ್ಷೇತ್ರದ ಶಾಸಕರಿಗೆ ಹಿಡಿಶಾಪ ಹಾಕುತ್ತಿದ್ದಾರೆ.

ಇದೆಲ್ಲದರ ನಡುವೆ ಸರ್ಕಾರ ಮಾತ್ರ ಸರ್ಕಾರದ ಬೊಕ್ಕಸ ಸುಸ್ಥಿತಿಯಲ್ಲಿದೆ. ಯಾವುದೇ ರೀತಿಯ ತೊಂದರೆಯಿಲ್ಲ ಎಂಬ ಮಾತುಗಳನ್ನಾಡುತ್ತಿದೆ. ಆದರೆ ಪರಿಸ್ಥಿತಿ ನೆಟ್ಟಗಿಲ್ಲ ಎಂಬುದನ್ನು ಅರಿಯದಷ್ಟು ಜನ ದಡ್ಡರಲ್ಲ.

2013ರಿಂದ 2018ರವರೆಗೆ ಆಡಳಿತ ನಡೆಸಿದ ಸಿಎಂ ಸಿದ್ದರಾಮಯ್ಯರಿಗೂ ಈಗ ಆಡಳಿತ ನಡೆಸುತ್ತಿರುವ ಸಿದ್ದರಾಮಯ್ಯರಿಗೂ ಅಜಗಜಾಂತರ ವ್ಯತ್ಯಾಸಗಳಿವೆ. ಒಬ್ಬ ಸಿಎಂ ಅಧಿಕಾರದಲ್ಲಿದ್ದಾಗ ಅದರಲ್ಲೂ ಸಿದ್ದರಾಮಯ್ಯರಂತಹ ಖಡಕ್ ನಾಯಕ ಸಿಎಂ ಸ್ಥಾನದಲ್ಲಿ ಕುಳಿತಿರುವಾಗಲೇ ಸಿಎಂ ಬದಲಾವಣೆಯ ಮಾತುಗಳು ಸ್ವಪಕ್ಷದ ಶಾಸಕರಿಂದಲೇ ಕೇಳಿ ಬರುತ್ತಿದೆ ಎನ್ನುವುದಾದರೆ ಸಿದ್ದರಾಮಯ್ಯ ಅವರ ವರ್ಚಸ್ಸಿನ ಬಗ್ಗೆ ಅನುಮಾನ ಮೂಡುವುದಂತು ನಿಜ. ಅದಕ್ಕಿಂತ ಹೆಚ್ಚಾಗಿ ಅವರ ನಡೆ ನುಡಿಗಳು ಕೂಡ ಅಚ್ಚರಿ ಮೂಡಿಸುತ್ತಿವೆ. ಅವರಲ್ಲಿ ಅಸಹಾಯಕತೆ ಎದ್ದು ಕಾಣಿಸುತ್ತಿದೆ.



ಸಿಎಂ ಅಧಿಕಾರ ಹಂಚಿಕೆ ವಿಚಾರಗಳು ಸಿದ್ದರಾಮಯ್ಯ ಅವರು ಅಧಿಕಾರ ವಹಿಸಿಕೊಂಡ ದಿನದಿಂದಲೇ ಕೇಳಿ ಬರುತ್ತಿವೆ. ಅದನ್ನು ವಿರೋಧ ಪಕ್ಷದವರು ಮಾಡಿದ್ದರೆ ರಾಜಕೀಯವೆಂದು ತಳ್ಳಿ ಹಾಕಬಹುದಿತ್ತು. ಆದರೆ ಸ್ವತಃ ತಮ್ಮದೇ ಪಕ್ಷದವರು ಮಾಡುತ್ತಿದ್ದಾರೆ ಎಂದರೆ ಸಿದ್ದರಾಮಯ್ಯ ದುರ್ಬಲರಾಗಿದ್ದಾರಾ? ಎಂಬ ಪ್ರಶ್ನೆ ಮೂಡುತ್ತದೆ. ಒಂದು ವೇಳೆ ಅಧಿಕಾರ ಹಂಚಿಕೆಯ ಮಾತುಕತೆಗಳು ಹೈಕಮಾಂಡ್ ಮಟ್ಟದಲ್ಲಿ ನಡೆದಿದೆ ಎನ್ನುವುದಾದರೆ ನವೆಂಬರ್ ವೇಳೆಗೆ ಸಿದ್ದರಾಮಯ್ಯರವರು ಅಧಿಕಾರ ಹಸ್ತಾಂತರಿಸುವುದು ಅನಿವಾರ್ಯವಾಗುತ್ತದೆ.

ಒಟ್ಟಾರೆ ಗೊಂದಲದಲ್ಲಿಯೇ ಆಡಳಿತ ನಡೆಸುತ್ತಿರುವ ಸಿದ್ದರಾಮಯ್ಯ ಅವರು ಒಂದೆಡೆ ಗ್ಯಾರಂಟಿ ಯೋಜನೆಗಳಿಗೆ ಹಣ ಒದಗಿಸಬೇಕು. ಮತ್ತೊಂದಡೆ ಅಭಿವೃದ್ಧಿ ಕಾರ್ಯಗಳನ್ನು ಮಾಡಬೇಕು. ಇಷ್ಟೇ ಅಲ್ಲದೆ ಮುಂದಿನ ಬಿಹಾರದ ವಿಧಾನಸಭಾ ಚುನಾವಣೆಗೂ ಹೈಕಮಾಂಡ್‌ಗೆ ಇಲ್ಲಿಂದಲೇ ಸಂಪನ್ಮೂಲ ಕ್ರೋಢೀಕರಿಸಬೇಕಾದ ಒತ್ತಡವೂ ಇರುವುದರಿಂದಾಗಿ ಇದೆಲ್ಲವನ್ನು ಒಟ್ಟೊಟ್ಟಿಗೆ ಮಾಡಬೇಕಾದ ಅನಿವಾರ್ಯತೆಗೆ ಸಿಕ್ಕಿ ಒದ್ದಾಡಬೇಕಾಗಿದೆ. ಗ್ಯಾರಂಟಿ ಯೋಜನೆಗಳಿಂದಾಗಿ ಆರ್ಥಿಕ ಮುಗ್ಗಟ್ಟು ಕಾಣಿಸುತ್ತಿದೆ. ಮುಂದಿನ ದಿನಗಳಲ್ಲಿ ತೈಲಬೆಲೆ ಗಗನಕ್ಕೇರಿದರೆ ಆಗ ಕೆಎಸ್‌ಆರ್‌ಟಿಸಿ ಪರಿಸ್ಥಿತಿ ಏನಾಗುತ್ತದೆ ಎಂಬುದನ್ನು ಊಹಿಸಲು ಸಾಧ್ಯವಿಲ್ಲದಂತಾಗಿದೆ.

ಈಗಾಗಲೇ ಬಸ್ ದರ ಏರಿಕೆ ಬಿಸಿ ಪುರುಷ ಪ್ರಯಾಣಿಕರಿಗೆ ತಟ್ಟಿದೆ. ಅದರಾಚೆಗೆ ಅಗತ್ಯ ವಸ್ತುಗಳ ಬೆಲೆಗಳು ದಿನದಿಂದ ದಿನಕ್ಕೆ ಗಗನಕ್ಕೇರುತ್ತಿವೆ. ಸಣ್ಣಪುಟ್ಟ ಕೆಲಸ ಮಾಡಿಕೊಂಡು ಜೀವನ ನಡೆಸುವ ಕಾರ್ಮಿಕರು, ಕೂಲಿ ಕೆಲಸಗಾರರು ಈಗಾಗಲೇ ಸಂಕಷ್ಟಕ್ಕೀಡಾಗಿದ್ದಾರೆ.






ಮುಂದಿನ ದಿನಗಳಲ್ಲಿ ಇಂಧನಕ್ಕೆ ಕೊರತೆಯುಂಟಾದರೆ ಆಗ ಹೇಗೆ ನಿಭಾಯಿಸುತ್ತಾರೆ ಎಂಬುದು ಸದ್ಯದ ಪ್ರಶ್ನೆಯಾಗಿದೆ. ಇದೆಲ್ಲ ಜಂಜಾಟಗಳ ನಡುವೆ ಈಗಿನ ಪರಿಸ್ಥಿತಿಯಲ್ಲಿ ಕಾಂಗ್ರೆಸ್ ಹೈಕಮಾಂಡ್‌ಗೆ ದೇಶದಲ್ಲಿ ಆಶ್ರಯತಾಣವೇನಾದರೂ ಇದ್ದರೆ ಅದು ಕರ್ನಾಟಕ ಮಾತ್ರ.

ಕಾಂಗ್ರೆಸ್ ಪಕ್ಷ ರಾಷ್ಟ್ರೀಯ ಪಕ್ಷ ಎಂದು ಹೇಳಿಕೊಳ್ಳುತ್ತಿದ್ದರೂ ಕರ್ನಾಟಕ ಮತ್ತು ತೆಲಂಗಾಣ ಹೊರತು ಪಡಿಸಿದರೆ ಬೇರೆಲ್ಲೂ ಅಧಿಕಾರದಲ್ಲಿಲ್ಲ. ಹೀಗಾಗಿ ಪಕ್ಷಕ್ಕೆ ನಿಧಿ ಸಂಗ್ರಹವನ್ನು ಕರ್ನಾಟಕದಿಂದಲೇ ಮಾಡಬೇಕಾಗುತ್ತದೆ. ತೆಲಂಗಾಣದಿಂದ ಹೆಚ್ಚಿನ ನಿರೀಕ್ಷೆ ಮಾಡುವುದು ಕಷ್ಟವೇ. ಅಲ್ಲಿ ಗ್ಯಾರಂಟಿ ಯೋಜನೆಗಳನ್ನು ತಂದು ಅದರ ಪರಿಣಾಮ ಏನಾಗಿದೆ ಎಂಬುದರ ಬಗ್ಗೆ ಸ್ವತಃ ಸಿಎಂ ರೇವಂತ್ ರೆಡ್ಡಿಯೇ ಕಾರ್ಯಕ್ರಮವೊಂದರಲ್ಲಿ ಅಳಲು ತೋಡಿಕೊಂಡಿದ್ದನ್ನು ಮಾಧ್ಯಮಗಳಲ್ಲಿ ಜನಸಾಮಾನ್ಯರು ನೋಡಿದ್ದಾರೆ. ಹೀಗಿರುವಾಗ ಅಲ್ಲಿಂದ ಹೆಚ್ಚಿನ ಸಂಪನ್ಮೂಲಗಳನ್ನು ನಿರೀಕ್ಷಿಸುವುದು ಹೈಕಮಾಂಡ್ ಗೆ ಕಷ್ಟವಾಗಿದೆ.

ಸದ್ಯಕ್ಕೆ ಹೈಕಮಾಂಡ್ ಕರ್ನಾಟಕದತ್ತ ಆಸೆಕಣ್ಣಿನಿಂದ ನೋಡುತ್ತಿದೆ. ಅದರ ಒತ್ತಡಗಳು ಸಿಎಂ ಸಿದ್ದರಾಮಯ್ಯ ಮತ್ತು ಡಿಸಿಎಂ ಸಿದ್ದರಾಮಯ್ಯರವರ ಮೇಲೆ ಬೀಳುತ್ತಿದೆ.

☞ 10

## ನವೆಂಬರ್‌ನಲ್ಲಿ ಸಿದ್ದು ಭವಿಷ್ಯ ಬಯಲು!

ಸಿದ್ದರಾಮಯ್ಯ ಈ ಬಾರಿ ಸಿಎಂ ಸ್ಥಾನವನ್ನು ಹಠ ಮಾಡಿ ಪಡೆದುಕೊಂಡಿದ್ದಾರೆ ಎನ್ನುವುದು ಎಲ್ಲರಿಗೂ ಗೊತ್ತಿರುವ ವಿಚಾರವೇ. ಚುನಾವಣೆ ಬಳಿಕ ತಾನೇ ಸಿಎಂ ಆಗಬೇಕೆಂದು ಡಿ.ಕೆ. ಶಿವಕುಮಾರ್ ಪಣತೊಟ್ಟಿದ್ದರು. ಇಬ್ಬರು ನಾಯಕರು ಸಿಎಂ ಸ್ಥಾನಕ್ಕಾಗಿ ನಡೆಸಿದ ಜಗ್ಗಾಟವನ್ನು ರಾಜ್ಯದ ಜನ ನೋಡಿದ್ದಾರೆ. ಹೀಗಾಗಿ ಸಿದ್ದರಾಮಯ್ಯನವರು ಸಿಎಂ ಸ್ಥಾನವನ್ನು ಬಲವಂತವಾಗಿ ಪಡೆದುಕೊಂಡಿದ್ದಾರೆ ಎನ್ನುವುದು ಗೊತ್ತಿರುವ ವಿಚಾರವೇ. ಆದರೆ ಸಿಎಂ ಸ್ಥಾನ ಐದು ವರ್ಷದ ತನಕ ಮುಂದುವರೆಯುತ್ತಾ? ಈ ವರ್ಷವೇ ಅಂತ್ಯವಾಗುತ್ತಾ? ಎಂಬ ಭವಿಷ್ಯವನ್ನು ನವೆಂಬರ್ ತಿಂಗಳು ಹೇಳಲಿದೆ...

ಸಿಎಂ ಆದ ಎರಡು ವರ್ಷದ ಅವಧಿಯಲ್ಲಿ ಅವರ ಮೇಲೆ ಮುಡಾ ಹಗರಣ ತಗಲಾಕಿಕೊಂಡು ತಮ್ಮದೇ ಸರ್ಕಾರದ ಕೆಳಮಟ್ಟದ ಅಧಿಕಾರಿಯಿಂದ ವಿಚಾರಣೆಗೊಳಗಾಗಿದ್ದು, ಆ ನಂತರ ಐಎಎಸ್ ಅಧಿಕಾರಿ ಮೇಲೆ ಗದರಿ ವೇದಿಕೆಯಿಂದ ಆಚೆಗೆ ಕಳಿಸಿದ್ದು, ಸಮಾವೇಶದಲ್ಲಿ ಪೊಲೀಸ್ ಅಧಿಕಾರಿ ಮೇಲೆ ಕೈ ಎತ್ತಿದ್ದು, ಕಾಲು ತುಳಿತದ ಪ್ರಕರಣದಲ್ಲಿ ಪೊಲೀಸರನ್ನು ತಲೆ ದಂಡ ಮಾಡಿ ಸಸ್ಪೆಂಡ್ ಮಾಡಿರುವುದು, ಜಾತಿಗಣತಿಯನ್ನು ಜಾರಿಗೆ ತರುವಲ್ಲಿ ವಿಫಲರಾಗಿರುವುದು, ಹಿಂದೂ ವಿರೋಧಿ ಧೋರಣೆ, ಮುಸ್ಲಿಂ ಸಮುದಾಯದ ಓಲೈಕೆ ಸೇರಿದಂತೆ ಹತ್ತು ಹಲವು ಆರೋಪಗಳು ಸಿದ್ದರಾಮಯ್ಯ ಅವರ ಮೇಲಿದೆ.

ತಮ್ಮದೇ ಶಾಸಕರ ವಿರೋಧದ ನಡುವೆ, ಈಗಿರುವ ಸವಾಲ್‌ಗಳೆಲ್ಲವನ್ನು ಎದುರಿಸಿ ಮುಂದಿನ ದಿನಗಳಲ್ಲಿ ಸಿದ್ದರಾಮಯ್ಯ ಅವರು ಸಿಎಂ ಆಗಿ ಮುಂದುವರೆಯುತ್ತಾರಾ? ಎಂಬುದು ಸದ್ಯಕ್ಕಿರುವ ಪ್ರಶ್ನೆ. ಮುಂದಿನ ನವೆಂಬರ್ ನಂತರ ಏನಾಗುತ್ತದೆ ಎಂಬುದೇ ಎಲ್ಲರ ಕುತೂಹಲವಾಗಿದೆ. ಎಲ್ಲದಕ್ಕೂ ನವೆಂಬರ್ ತನಕ ಕಾದು ನೋಡುವುದು ಅನಿವಾರ್ಯವಾಗಿದೆ. ☯

# ಅತ್ತಿಗೆ ಜೊತೆ ಐಸ್ ಪೈಸ್ ಆಡುತ್ತಿದ್ದವನ ಹತ್ಯೆ!
# ಕೊಲೆ ಮಾಡಿ ಇಡೀ ರಾತ್ರಿ ಶವದ ಪಕ್ಕದಲ್ಲೇ ನಿದ್ರಿಸಿದ್ದ ಹಂತಕರು!!

**ಅತ್ತಿಗೆ ಜತೆ ಸಲುಗೆ ಬೆಳೆಸಿಕೊಂಡು ಸರಸ ಆಡುತ್ತಿದ್ದ ಧುರುಳನೊಬ್ಬ ಅದನ್ನು ಬ್ರೇಕಿಂಗ್ ನ್ಯೂಸ್ ಎಂಬಂತೆ ಊರಿಗೆಲ್ಲಾ ಹೇಳಿಕೊಂಡು ತಿರುಗುತ್ತಿದ್ದ! ಈ ವಿಚಾರ ಅತ್ತಿಗೆ ಗಂಡ ಅಣ್ಣನಿಗೆ ಗೊತ್ತಾಗಿದೆ! ತನ್ನ ಪತ್ನಿಯನ್ನು ಪಂಡರಿ ಬಾಯಿ ರೇಂಜ್‌ಗೆ ನಂಬಿ ಪ್ರೀತಿಸುತ್ತಿದ್ದ ಅವನಿಗೆ ಸೋದರ ದ್ರೋಹಿಯ ವರ್ತನೆ ಹಿಡಿಸಲಿಲ್ಲ!! ದಿನಾಂಕ 18-06-2025ರಂದು ಸ್ನೇಹಿತ ಸತೀಶ್‌ನ ಮನೆಯಲ್ಲಿ ಬಾಡೂಟ ಏರ್ಪಡಿಸಿ, ಶೈಲೇಶ್ ನನ್ನು ಹಾಗೂ ಇನ್ನೊಬ್ಬ ಮಿತ್ರ ಅರುಣ್‌ನನ್ನು ಅಲ್ಲಿಗೆ ಕರೆಸಿಕೊಂಡಿದ್ದಾನೆ! ಬಾಡು ನೆಂಚಿಕೊಂಡು ಎಣ್ಣೆ ಹೊಡಿತಾ ಹೊಡಿತಾ... ಅಸಲಿ ಮ್ಯಾಟರ್ ಓಪನ್ ಆಗಿದೆ!! ಮುಂದ...??!**

ಬೆಂಗಳೂರು ಮಹಾ ನಗರಿಯ ತುಂಬಾ ಉತ್ತರದವರೇ ತುಂಬಿ ತುಳುಕುತ್ತಿದ್ದಾರೆ! ಅಲ್ಲಿ ತಿನ್ನೋಕೆ ಗತಿ ಇಲ್ಲದೆ ಇಲ್ಲಿಗೆ ಬಂದು ಗಾರ್ಮೆಂಟು, ಫ್ಯಾಕ್ಟರಿ ಸೇರಿಕೊಂಡು ಹೊಟ್ಟೆ ತುಂಬಾ ಉಣ್ಣುವುದರ ಜೊತೆಗೆ, ಹಿಂದಿಮೇ ಬೋಲ್... ಎಂದು ಕನ್ನಡಿಗರಿಗೇ ಅವಾಜ್ ಬಿಡುತ್ತಾರೆ! ಈ ಉತ್ತರದ ಬೆವಾರಸುಗಳಿಗೆ ಇನ್ನೊಂದು ಖಯಾಲಿ ಇದೆ. ಕಷ್ಟಪಟ್ಟು ದುಡಿಯೋದು, ರಾತ್ರಿ ಕಂಠ ಮಟ್ಟ ಕುಡಿಯೋದು, ಸಣ್ಣ ಪುಟ್ಟ ವಿಚಾರಕ್ಕೂ ಹಿಂದೆ ಮುಂದೆ ಯೋಚಿಸದೆ ಚುಚ್ಚುವುದು! ಇತ್ತೀಚಿಗೆ ಎಲೆಕ್ಟ್ರಾನಿಕ್ಸ್ ಸಿಟಿ ಕಡೆ ಬಾರ್ ಒಂದರಲ್ಲಿ ಎಣ್ಣೆ ಏರಿಸುತ್ತಿದ್ದಾಗ, ಪಕ್ಕದ ಟೇಬಲ್‌ನವನು, ಕೂಗಾಡ ಬೇಡಿ ಮೆತ್ತಗೆ ಮಾತಾಡ್ರಯ್ಯ... ಎಂದು ಬುದ್ದಿ ಹೇಳಿದ್ದಕ್ಕೆ, ಅವನನ್ನು ಎತ್ತಿ ನೆಲಕ್ಕೆ ಬಡಿದು ಸೈಜ್‌ಗಲ್ಲು ಎತ್ತಿ ತಲೆ ಜಜ್ಜಿ ಭೀಕರವಾಗಿ ಕೊಂದಿದ್ರು! ಬೇರೇನೂ ಇಲ್ಲ ಕಣ್ರೀ, ಮೆತ್ತಗೆ ಮಾತಾಡ್ರಿ ಅಂದಿದ್ದಕ್ಕೆ...!!?


ಕೊಲೆಯಾದ ಶೈಲೇಶ್‌ಯಾದವ್

**ಇಬ್ಬರು ಅರೆಸ್ಟ್!**

ಅದಿರಲಿ, ಇದೀಗ ಬೆಂಗಳೂರಿನ ಬಂಡೆಪಾಳ್ಯ ಪೊಲೀಸರು ಉತ್ತರಪ್ರದೇಶದ ಗೋರಖ್‌ಪುರ ಜಿಲ್ಲೆಯ ಸತೀಶ್ ಯಾದವ್, ಅರುಣ್ ಯಾದವ್ ಎಂಬಿಬ್ಬರು ಕೊಲೆಗಾರರನ್ನು ಬಂಧಿಸಿದ್ದಾರೆ. ಇವರು ತಮ್ಮದೇ ಊರಿನ


ಡಿಸಿಪಿ ಸಾರಾ ಫಾತಿಮಾ


ಇನ್ಸ್‌ಪೆಕ್ಟರ್ ಮಹೇಶ್ ಕನಕಗಿರಿ

ತಮ್ಮ ಸ್ನೇಹಿತನೇ ಆಗಿದ್ದ ಶೈಲೇಶ್ ಯಾದವ್ (30) ಎಂಬ ಹುಡುಗನನ್ನು ಭಯಾನಕವಾಗಿ ಕೊಂದು ಎಸ್ಕೇಪ್ ಆಗಿದ್ದರು! ಈ ಪಾಪಿಗಳಿಂದ ಈ ಕೊಲೆ ಮಾಡಿಸಿರುವ ಪ್ರಮುಖ ಆರೋಪಿ ಬೀರೇಂದ್ರ ಯಾದವ್ ಇನ್ನೂ ಪೊಲೀಸರ ಕೈಗೆ ಸಿಕ್ಕಿಲ್ಲ!! ಡಿಸಿಪಿ ಸಾ. ರಾ. ಫಾತಿಮಾ, ಎಸಿಪಿ ಬಿ.ಎಸ್. ಸತೀಶ್ ನೇತೃತ್ವದಲ್ಲಿ ಬಂಡೆಪಾಳ್ಯ ಪೊಲೀಸ್ ಇನ್ಸ್‌ಪೆಕ್ಟರ್ ಮಹೇಶ್ ಕನಕಗಿರಿ ತಲೆಮರೆಸಿಕೊಂಡಿರೋ ಮೇನ್ ಆರೋಪಿ ಬೀರೇಂದ್ರ ಯಾದವ್ ಪತ್ತೆ ಕಾರ್ಯ ಸಾಗಿದೆ.

**ಅತ್ತಿಗೆ ಜೊತೆ ಸಲುಗೆ...**

ಇವರೆಲ್ಲಬೊಮ್ಮನಹಳ್ಳಿ ಸಮೀಪದ ಬಂಡೇಪಾಳ್ಯದ ಅಂಬೇಡ್ಕರ್ ನಗರ ಸ್ಲಂನಲ್ಲಿ ಬೇರೆ ಬೇರೆ ಬಾಡಿಗೆ ಮನೆಗಳಲ್ಲಿ ನೆಲೆಸಿದ್ದರು. ನಾಲ್ವರೂ ಪೇಂಟಿಂಗ್ ಕೆಲಸ ಮಾಡಿಕೊಂಡಿದ್ದರು.ಹಗಲೆಲ್ಲಪೇಂಟಿಂಗ್ ಕೆಲಸ ಮಾಡಿ ಒಳ್ಳೆ ಹಣ ಸಂಪಾದಿಸಿ, ರಾತ್ರಿ ಹತ್ತಿರದ ಬಾರ್‌ನಲ್ಲಿ ಅಗ್ಗದ ರಮ್ ಹೊಡೆಯುತ್ತಿದ್ದರು. ಬಾಸ್ ಬೀರೇಂದ್ರ ಯಾದವ್ ಇದ್ದಾನಲ್ಲ, ಅವನ ಪತ್ನಿ ಜೊತೆ ಶೈಲೇಶ್ ಯಾದವ್ ಸಲುಗೆ ಹೊಂದಿದ್ದನಂತೆ! ಬೀರೇಂದ್ರನೂ ಶೈಲೇಶನೂ ದಾಯಾದಿಗಳು ಮತ್ತು ಸೋದರ ಸಂಬಂಧಿಗಳು. ಅದೇನು ಬರೀ ಸಲುಗೆಯೋ ಅಥವಾ ಸರಸವಾಡುತ್ತಿದ್ದನೋ ಏನೋ, ಭಗವಂತನೇ ಬಲ್ಲ!

ಈ ಶೈಲೇಶ್ ಯಾದವ್, ತಾನು ಅತ್ತಿಗೆ ಜೊತೆ ಮಜಾ ಮಾಡ್ತಿದ್ದೀನಿ... ಸಖತ್ ಹಾಟ್.... ಅವಳದ್ದು ಹಾಗೆ ಹೀಗೆ... ಅಂತೆಲ್ಲ ಊರು ಕೇರಿಯಲ್ಲಿ ರಸವತ್ತಾಗಿ ಹೇಳಿಕೊಂಡು ತಿರುಗುತ್ತಿದ್ದನಂತೆ! ಇದರಿಂದ ಬೀರೇಂದ್ರನ ಮಾನ ಮರ್ಯಾದೆ ಬೀದಿ ಪಾಲಾಗಿ ಆತ ಎರಡೆರಡು ಕ್ವಾರ್ಟರ್ ಓಲ್ಡ್ ಮಂಕ್ ಹೊಡೆದು ಥೇಟ್ ಮಂಕಿ ಯಂತೆ ಪಿಳಿ ಪಿಳಿ ಕಣ್ಣು ಬಿಡುತ್ತ ಕಣ್ಣೀರಿಡುತ್ತಿದ್ದನಂತೆ!

**ಬಾಡೂಟ ಏರ್ಪಡಿಸಿ ಬಲಿ ಹಾಕಿದ್ರು**

ಶೈಲೇಶ್ ಸ್ವಲ್ಪ ಜೋರಾಗಿದ್ದ ಕಟ್ಟುಮಸ್ತಾದ ಆಳು. ಬೀರನೋ ಪ್ಯಾದೆ. ಒಬ್ಬನಿಂದ ಹೊಡೆಯಲು ಸಾಧ್ಯವಿರಲಿಲ್ಲ, ಅಥವಾ ಆ ಧೈರ್ಯ ವಿರಲಿಲ್ಲ. ಪತ್ನಿಗೆ ಹಾಗೂ ಸೋದರ ಸಂಬಂಧಿ ಶೈಲೇಶನಿಗೆ ಒಂದೆರಡು ಸಲ ಬುದ್ದಿ ಹೇಳಿದ್ದಾನೆ. ಅವರು ಬದಲಾಗಿಲ್ಲ, ಅಥವಾ ಅವರು ಬದಲಾಗಿದ್ದರೂ ಅದು ಇವನಿಗೆ ಅರ್ಥವಾಗಿಲ್ಲ ಅನ್ಸುತ್ತೆ. ಯಾವಾಗ ನೋಡಿದ್ರು ಅತ್ತಿಗೆ ಮೈದುನ ಕಿಸ ಕಿಸ ನಗೋದು, ಕೈ ಸನ್ನೆ ಬಾಯಿ ಸನ್ನೆ ಮಾಡೋದು ನಡೆದೇ ಇತ್ತಂತೆ.

ಇದರಿಂದ ಬೀರೇಂದ್ರ ಅರೆಹುಚ್ಚನಾಗಿ ಅಲೆಯುತ್ತಿದ್ದನಂತೆ. ಆ ದೃಶ್ಯವನ್ನು ನೋಡಲಾಗದೆ ಅವನ ಸ್ನೇಹಿತರು, ನೀನು ಓಕೆ ಅನ್ನು, ಅವನನ್ನು ಮುಗಿಸಿ ಬಿಡ್ತೀವಿ ಎಂದಿದ್ದರಂತೆ... ಬೀರನಿಗೆ ಬೇಕಿದ್ದುದು ಇದೇನೇ. ಹೆಂಡತಿ... ಅದು..... ಶೈಲೇಶ... ಎಲ್ಲವನ್ನೂ ಒಟ್ಟೊಟ್ಟಿಗೆ ಕಲ್ಪಿಸಿಕೊಂಡು ಕಟ ಕಟ ಹಲ್ಲು ಕಡಿಯುತ್ತ, ಓಕೆ ಅಂದಿರುತ್ತಾನೆ.

ಕಳೆದ ಜೂನ್ 18ರಂದು ಸತೀಶ್ ಯಾದವ್ ಮನೆಯಲ್ಲಿ ಬಾಡೂಟ ಏರ್ಪಡಿಸಿ, ಶೈಲೇಶ್‌ನನ್ನು ಅಲ್ಲಿಗೆ ಕರೆಸಿಕೊಂಡಿದ್ದಾರೆ. ಜೊತೆಗೆ ಅರುಣನೂ ಸೇರಿಕೊಂಡಿದ್ದಾನೆ. ಬಾಡು ನೆಂಚಿಕೊಂಡು ಎಣ್ಣೆ ಹೊಡೆದಿದ್ದಾರೆ. ಮದ್ಯದ ಅಮಲಿನಲ್ಲಿ ಮೂವರೂ ಸೇರಿ ಜಗಳ ತೆಗೆದು, ಶೈಲೇಶ್ ಮೇಲೆ ಮುಗಿಬಿದ್ದು ಮಾರಕಾಸ್ತ್ರಗಳಿಂದ ಕತ್ತರಿಸಿ ಪೀಸ್ ಪೀಸ್ ಮಾಡಿದ್ದಾರೆ!


ಆರೋಪಿಗಳಾದ ಅರುಣ ಹಾಗೂ ಸತೀಶ

**ಇಡೀ ರಾತ್ರಿ ಶವದೊಂದಿಗೆ ಮಲಗಿದ್ರು!**

ಬಾಟ್ಲಿ ಮೇಲೆ ಬಾಟ್ಲಿ ಏರಿಸಿ ಮದ್ಯದ ನಶೆಯಲ್ಲಿದ್ದ ಹಂತಕರು ಆ ರಾತ್ರಿಯಿಡೀ ಮೃತದೇಹದ ಬಳಿಯೇ ಮಲಗಿದ್ದರಂತೆ! ಬೆಳಿಗ್ಗೆ ಎಚ್ಚರವಾಗಿ ಕಣ್ಬಿಟ್ಟು ನೋಡಿದಾಗ, ಶೈಲೇಶ ರಕ್ತದ ಮಡುವಲ್ಲಿ ನಿಸ್ತೇಜವಾಗಿ ಬಿದ್ದಿರುವ ದೃಶ್ಯ! ಆಸಾಮಿ ಬೀರೇಂದ್ರ, ದಡಕ್ಕನೆ ಎದ್ದು ಎತ್ತಲೋ ಪೇರಿಕಿತ್ತಿದ್ದ! ಇನ್ನಿಬ್ಬರು ಮಿತ್ರರು ಅವನ ಹಿಂದೆಯೇ ಪರಾರಿಯಾಗಿ ತಮ್ಮ ತಮ್ಮ ಮನೆ ಸೇರಿಕೊಂಡಿದ್ದರು!!

ಆ ಮನೆ ಸತೀಶ್‌ನದ್ದು, ಆತ ಅರುಣ್ ಮನೆ ಹೊಕ್ಕಿ ಅಲ್ಲಿ ಇಬ್ಬರೂ ಊರಿಗೆ ಎಸ್ಕೇಪ್ ಆಗೋದ.... ಅಥವಾ ಇಲ್ಲೇ ಇದ್ದು ಫೇಸ್ ಮಾಡೋದ... ಅಂತ ನಿರ್ಧರಿಸಲಾಗದೆ ಚಡಪಡಿಸ್ತಾ ಇದ್ರಂತೆ!! ಇದಾದ ಎರಡು ದಿನಗಳ ಬಳಿಕ ಆ ಮನೆ ಯಿಂದ ದುರ್ನಾತ ಹೊರ ಹೊಮ್ಮಿ ಅಕ್ಕಪಕ್ಕದ ನಿವಾಸಿಗಳು ಮೂಗು ಮುಚ್ಚಿಕೊಂಡು ವಾಸನೆಯ ಕಾರಣ ಹುಡುಕ ತೊಡಗಿದರು. ಅದು ಹೆಣದ ಕೊಳೆತ ವಾಸನೆಯೇ ಎಂಬುದು ಸದ್ಯಕ್ಕೆ ಗೊತ್ತಾಗಲಿಲ್ಲ ಅವರಿಗೆ. ವಿಷಯ ತಿಳಿದು ಅನುಮಾನಗೊಂಡ ಮನೆ ಮಾಲೀಕ, ಸತೀಶ್ ಯಾದವ್‌ನನ್ನು ಹುಡುಕಿ ಪ್ರಶ್ನಿಸಿದ್ದಾರೆ. ಆಗ ಸತೀಶ ನಿಜವಾದ ಮಾಹಿತಿ ನೀಡದೇ,

ರಾತ್ರಿ ತಮ್ಮ ಸ್ನೇಹಿತನೊಬ್ಬ ಮೃತಪಟ್ಟಿದ್ದಾನೆ, ಊರಿಗೆ ಒಯ್ಯಬೇಕು, ಯಾಕೋ ಗೊತ್ತಿಲ್ಲ... ವಾಸನೆ ಬರ್ತಿದೆ ಅಣ್ಣಾ ಎಂದು ಸುಳ್ಳು ಹೇಳಿದ್ದ! ಏನಾತಿ ಸತೀಶ ಯಾವಾಗ ಇಂಥ ಸುದ್ದಿ ಭಿತ್ತರಿಸಿದನೋ, ಕೆರಳಿ ಕೆಂಡವಾದ ಮನೆ ಮಾಲೀಕರು ಬಂಡೆ ಪಾಳ್ಯ ಪೊಲೀಸ್ ಠಾಣೆಗೆ ತೆರಳಿ ವಿಷಯ ತಿಳಿಸಿ ಒಂದು ದೂರು ನೀಡಿದ್ದಾರೆ.

ಮೊದಲು ಯುಡಿಆರ್ ನಂತರ ಮರ್ಡರ್ ಕೇಸ್

ಬಂಡೆಪಾಳ್ಯ ಪೊಲೀಸರು ಕೂಡಲೇ ಅಂಬೇಡ್ಕರ್ ನಗರ ಸ್ಲಂಗೆ ತೆರಳಿ, ಆ ಮನೆಯನ್ನು ಪರಿಶೀಲಿಸಿದ್ದು, ಕೊಳೆತ ಹೆಣವನ್ನು ತಮ್ಮ ಸುಪರ್ದಿಗೆ ತೆಗೆದುಕೊಂಡು ಪೋಸ್ಟ್‌ಮಾರ್ಟಂಗೆ ಕಳುಹಿಸಿ ಮೊದಲಿಗೆ,ಯುಡಿಆರ್ ಪ್ರಕರಣ ದಾಖಲಿಸಿಕೊಂಡಿದ್ದರು. ಮರಣೋತ್ತರ ಪರೀಕ್ಷೆ ವೇಳೆ ಕೊಲೆ ಎಂಬುದು ಗೊತ್ತಾಗಿದೆ! ಮರ್ಡರ್ ಕೇಸ್ ದಾಖಲಿಸಿಕೊಂಡು ತಡ ಮಾಡದೇ ಆರೋಪಿಗಳ ಎಡೆ ಮುರಿ ಕಟ್ಟಲಾಗಿದೆ!


ಅಂಬೇಡ್ಕರ್ ನಗರ

ಸ'ದ್ಯ, ಸ'ತೀಶ್ ಯಾ'ದ'ವ್ ಅ'ರು'ಣ್ ಯಾದವ್ ಇಬ್ಬರು ಅರೆಸ್ಟ್ ಆಗಿದ್ದಾರೆ. ಮೇನ್ ಲೀಡರ್ ಬೀರೇಂದ್ರ ಯಾದ'ವ್ ಪೊಲೀಸ್ ಕೈಗೆ ಸಿಗದೆ ಎಲ್ಲೋ ತಲೆ ಮರೆಸಿಕೊಂಡಿದ್ದಾನೆ! ಡಿಸಿಪಿ ಸಾರಾ ಫಾತಿಮಾ, ಎಸಿಪಿ ಬಿ.ಎಸ್. ಸತೀಶ್ ನೇತೃತ್ವದಲ್ಲಿ ಬಂಡೆ ಪಾಳ್ಯ ಪೊಲೀಸ್ ಇನ್ಸ್‌ಪೆಕ್ಟರ್ ಮಹೇಶ್ ಕನಕಗಿರಿ ತಲೆ ಮರೆಸಿಕೊಂಡಿರೋ ಮೇನ್ ಆರೋಪಿ ಬೀರೇಂದ್ರ ಯಾದವ್ ಪತ್ತೆ ಕಾರ್ಯ ಸಾಗಿದೆ... ☯




# ಬೆಳ್ಳಂದೂರು ಮಹಿಳೆ ಬೆತ್ತಲೆ ವಿಡಿಯೋ ಬ್ಲ್ಯಾಕ್‌ಮೇಲ್! ಕೇರಳದ ಪೆರಿಂಗೋಟ್ಟುಕ್ಕಾರದ ಮಾಟಗಾರ ಅರೆಸ್ಟ್!!

**ಕುಟುಂಬದಲ್ಲಿ ತುಂಬಾ ಕಷ್ಟ ಅನುಭವಿಸುತ್ತಿದ್ದ ಮಹಿಳೆ ಗೆ ವಿಶೇಷ ಪೂಜೆ ಹಾಗೂ ಮಾಟ-ಮಂತ್ರದ ಹೆಸರಿನಲ್ಲಿ ಮಹಿಳೆಗೆ ವಿಡಿಯೋ ಕಾಲ್ ಮಾಡಿ ನಗ್ನವಾಗಿಸಿ, ನಂತರ ಅದನ್ನೇ ಇಟ್ಟುಕೊಂಡು ಬ್ಲ್ಯಾಕ್ ಮೇಲ್ ಮಾಡುತ್ತ, ಕೇರಳಕ್ಕೆ ಕರೆಸಿಕೊಂಡು ವಿಶೇಷ ಪೂಜೆಯ ನೆಪದಲ್ಲಿ ಆಕೆಯನ್ನು ಕಾಡಿಗೆ ಕರೆದೊಯ್ದು ಅಸ್ವಾಭಾವಿಕ ಲೈಂಗಿಕ ಕ್ರಿಯೆಗೆ ಒತ್ತಾಯಿಸಿದ ಯತ್ನಿಸಿದ ಆರೋಪದಲ್ಲಿ ಕೇರಳದ ತ್ರಿಶ್ಯೂರ್‌ನ ಪೆರಿಂಗೋಟ್ಟುಕ್ಕಾರ ದೇವಸ್ಥಾನದ ಅರ್ಚಕ/ಮಾಟಗಾರ ಅರುಣ್‌ನನ್ನು ಬೆಂಗಳೂರಿನ ಬೆಳ್ಳಂದೂರು ಪೊಲೀಸರು ಬಂಧಿಸಿದ್ದಾರೆ! ಪ್ರಧಾನ ಅರ್ಚಕ ಬಾಸ್ ಉನ್ನಿ ದಾಮೋದರನ್ ಪರಾರಿಯಾಗಿದ್ದು, ಆತನಿಗಾಗಿ ನಮ್ಮ ಪೊಲೀಸರ ಹುಡುಕಾಟ ಸಾಗಿದೆ!!**



ಉನ್ನಿ ದಾಮೋದರನ್



ಅರುಣ್

ನಮ್ಮ ಕರ್ನಾಟಕ ರಾಜ್ಯದ ಹೆಂಗಸರು ಬೆಳಗಾಗೆದ್ದು ಸ್ನಾನ ಮಡಿ ಮಾಡಿಕೊಂಡು ಪೂಜೆ ಪುನಸ್ಕಾರ ಮಾಡ್ತಾರೋ ಇಲ್ವೋ... ಟಿವಿಗಳಲ್ಲಿ ಬರುವ ಜ್ಯೋತಿಷ್ಯ, ರಾಶಿಫಲ ಇತ್ಯಾದಿ ಡೋಂಗಿ ಬಾಲ್ ಪ್ರೋಗ್ರಾಮ್‌ಗಳನ್ನು ಬಾಯಿ ಬಿಟ್ಟುಕೊಂಡು ನೋಡುತ್ತಾರೆ! ಗಂಡನ ಮಾತು ಕೇಳುತ್ತಾರೋ ಇಲ್ವೋ, ಇಂದಿನ ಶುಭ ಅಶುಭ ಫಲದಲ್ಲಿ ಏನಾದರೂ ವ್ಯತ್ಯಾಸ ವಾದರೆ, ಆ ಬೋಸುಡಿಕೆ ಹೇಳಿದ ಪೂಜೆ, ದಾನ ಧರ್ಮ ಮಾಡಿ ನಿಟ್ಟುಸಿರು ಬಿಡ್ತಾರೆ!! ಹೀಗಂತೂ ಮೊಬೈಲ್ ದುನಿಯಾ. ಎಲ್ಲರ ಕೈಯ್ಯಲ್ಲೂ ಮೊಬೈಲ್ ಇದ್ದೇ ಇರುತ್ತದೆ. ಕೈಯ್ಯಲ್ಲಿ ಮೊಬೈಲ್ ಹಿಡ್ಕೊಂಡ್ರೆ, ಗಂಡ, ಮನೆ ಮಕ್ಕಳು, ಅಷ್ಟೇ ಏಕೆ? ಪ್ರಪಂಚವೇ ಮರೆತು ಹೋಗುತ್ತೆ!!

**ಇನ್‌ಸ್ಟಾಗ್ರಾಂನಲ್ಲಿ ಪೂಜೆ ಪುನಸ್ಕಾರ**

ಈ ಪ್ರಕರಣದಲ್ಲಿ, ಬೆಂಗಳೂರು ಬೆಳ್ಳಂದೂರ್ ಮಹಿಳೆ ಸಾವಿತ್ರಮ್ಮ (ಹೆಸರು ಬದಲಿಸಲಾಗಿದೆ) ಇನ್‌ಸ್ಟಾಗ್ರಾಂನಲ್ಲಿ ದೈವಾರಾಧನೆ,ಪೂಜೆ ಪುನಸ್ಕಾರವನ್ನು ನೋಡಿ ಪ್ರೇರಣೆಗೊಂಡು, ಭಕ್ತಿಯಿಂದ ವಿಶೇಷ ಪೂಜೆ ಮಾಡಿಸಿದರೆ ತನ್ನ ಮನೆಯ ಕಷ್ಟ ಕಾರ್ಪಣ್ಯಗಳೆಲ್ಲ ನಾಶವಾಗಿ ಶ್ರೀಮಂತಿಕೆ ಬಂದಪ್ಪಿಕೊಳ್ಳುತ್ತದೆ... ಎಂದ ವಾಕ್ಯವನ್ನು ಓದಿ ಹರ್ಷಿಸಿ, ಸದರಿ ಇನ್‌ಸ್ಟಾಗ್ರಾಂ ಕಮೆಂಟ್ ಬಾಕ್ಸ್‌ನಲ್ಲಿ ವಿಳಾಸ ಮತ್ತು ಅಪಾಯಿಂಟ್ ಮೆಂಟ್ ಕೇಳಿದ್ದಾಳೆ! ಅತ್ತಲಿಂದ ವಿಳಾಸ ಜೊತೆಗೆ ಈ ಕೂಡಲೇ ಬನ್ನಿ, ನಿಮಗಾಗಿ ದೇವಿ ಕೃಪೆ ಸದಾ ಸಿದ್ದ... ಎಂಬ ಮೆಸೇಜ್ ಬಂದಿದೆ!!



ಡಿಸಿಪಿ ಡಾ. ಶಿವಕುಮಾರ ಗುಣಾರಿ



ಇನ್‌ಸ್ಪೆಕ್ಟರ್ ರಮೇಶ್ ರೊಟ್ಟಿ

**ಕೇರಳಕ್ಕೆ ಹಾರಿದಳು!**

ಅದು ಕೇರಳದ ತ್ರಿಶ್ಯೂರ್ ನಲ್ಲಿರುವ ಪೆರಿಂಗೋಟ್ಟುಕ್ಕಾರ ದೇವಸ್ಥಾನ. ಅದರ ಪ್ರಧಾನ ಅರ್ಚಕ ಉನ್ನಿ ದಾಮೋದರನ್. ಅವನ ಶಿಷ್ಯ ಅರುಣ್. ಈತ ತಮಿಳುನಾಡಿನಿಂದ ಅಲ್ಲಿಗೆ ತೆರಳಿ ಉನ್ನಿ ಶಿಷ್ಯನಾಗಿ ಮಾಟ ಮಂತ್ರ ಕಲಿಯುತ್ತಿದ್ದ! ಇವರಿಬ್ಬರೂ ಬೆಂಗಳೂರಿನ ಬೆಳ್ಳಂದೂರು ನಿವಾಸಿ ಸಾವಿತ್ರಮ್ಮ ನಿಗೆ ಸ್ವಾಗತ ಕೋರಿ ಮೊದಲ ಸಲವಾದ್ದರಿಂದ ಬಹಳ ಗೌರವದಿಂದ ನೋಡಿಕೊಂಡಿದ್ದಾರೆ. ದೇವಿಯ ಪೂಜೆ ಮಾಡಿ ಆಶೀರ್ವಾದ ಕೊಡಿಸಿದ್ದಾರೆ. ಉನ್ನಿ ದಾಮೋದರನ ಮೈಮೇಲೆ ದೇವಿ ಅವಗಾಹನೆಯಾದಾಗ... ನೋಡು ಮೋಳೆ, ನಿನ್ನ ಮೇಲೆ ನಿನ್ನ ಕುಟುಂಬದ ಮೇಲೆ ಮಾಟ ಪ್ರಯೋಗವಾಗಿದೆ! ಅದನ್ನು ತೆಗೆಸದಿದ್ದರೆ ನಿನ್ನ ಕುಟುಂಬವೆ ಸರ್ವನಾಶವಾಗಲಿದೆ ಎಂದು ಹೆದರಿಸಿದ್ದಾರೆ!!

**24 ಸಾವಿರ ಕಾಣಿಕೆ!**

ಸಾವಿತ್ರಮ್ಮನಿಗೆ ಗಂಡ ಇಲ್ಲ, ಒಬ್ಬಳೇ ದುಡಿದು ಎರಡು ಮಕ್ಕಳನ್ನು ಸಾಕಬೇಕು. ಈಗಿನ ಕಾಲದಲ್ಲಿ ಎರಡು ಮಕ್ಕಳನ್ನು ಓದಿಸಿ ಹಿಟ್ಟು ಬಟ್ಟೆ ಹಾಕುವುದೆಂದರೆ ಸುಮ್ನೆ ಅದಿತಾ? ಬಹಳ ಕಷ್ಟ. ಮೊದಲೇ ಕೌಟುಂಬಿಕ ಸಮಸ್ಯೆ ಯಿಂದ ಬಳಲುತ್ತಿದ್ದ ಮಹಿಳೆ ಕೇರಳದ ಪೆರಿಂಗೋಟ್ಟುಕ್ಕಾರ ದೇಗುಲದ ಬಗ್ಗೆ ಇನ್‌ಸ್ಟಾಗ್ರಾಮ್ ನೋಡಿ ತಿಳಿದುಕೊಂಡು, ಇಲ್ಲಿ ಪೂಜಿಸಿ ಕಷ್ಟ ಕಾರ್ಪಣ್ಯ ತೀರಿಸಿಕೊಳ್ಳುವ ಹಂಬಲದಿಂದ, ಅಷ್ಟು ದೂರದಿಂದ ಬಂದಿದ್ದಳು. ಸಾಮಾಜಿಕ ಜಾಲತಾಣದಲ್ಲಿ ಈ ಮಾಟ ಮಂತ್ರದವರ ಅರ್ಭಟ ಹೇಗಿರುತ್ತೆ ಅಂತ ಗೊತ್ತಲ್ವಾ, ಅದನ್ನು ನೋಡಿ ಫಿದಾ ಆಗಿಯೇ ಈ ಮಹಿಳೆ ಕೇರಳಕ್ಕೆ ಹಾರಿ ಬಂದಿದ್ದಳು! ಈಗ ನೋಡಿದರೆ ಮಾಟ ಮಂತ್ರ, ವಿಶೇಷ ಪೂಜೆ ಅಂತೆಲ್ಲ ಹೇಳಿ, ಇದಕ್ಕಾಗಿ 24 ಸಾವಿರ ರೂ. ಕಾಣಿಕೆ ಕೇಳ್ತಿದ್ದಾಳೆ ದೇವಿ!!

☞ 12

## ಮಾಟ-ಮಂತ್ರದ ಸಹವಾಸಕ್ಕೆ ಹೋದೀರಿ ಹುಷಾರ್!

ವಾಮಾಚಾರದಂತಹ ಮಹಾಪಾಪ ಮತ್ತೊಂದಿಲ್ಲ! ಮಾಟ - ಮಂತ್ರ ಮಾಡುವುದು, ಅದನ್ನು ಪ್ರೋತ್ಸಾಹಿಸುವುದು ನಮ್ಮ ದೇಶದಲ್ಲಿ ನಿಷೇಧ! ಮನುಷ್ಯನ ದೇಹದಲ್ಲಿ ನಕಾರಾತ್ಮಕ ಹೆಚ್ಚಾಗುವುದರಿಂದ ಅವರ ಕೆಲಸದಲ್ಲಿ ಮತ್ತು ಕುಟುಂಬದಲ್ಲಿ ಪದೇ ಪದೇ ಸಮಸ್ಯೆಗಳನ್ನು ಎದುರಿಸುತ್ತಲೇ ಇರಬೇಕಾಗುತ್ತದೆ. ಕೆಲಸವು ಸರಾಗವಾಗಿ ಹೋಗುತ್ತಿರುವಾಗ ಕುಟುಂಬದಲ್ಲಿ ಯಾರಿಗಾದರು ಹಠಾತ್ ಅನಾರೋಗ್ಯ ಉಂಟಾಗುವುದು, ಎಷ್ಟೇ ಔಷಧಿಗಳನ್ನು ತೆಗೆದುಕೊಂಡರೂ ಕೂಡ ಅನಾರೋಗ್ಯ ಸರಿ ಹೋಗದಿರುವುದು... ಇವೇ ಮುಂತಾದ ತೊಂದರೆಗಳು.

ಮನೆಯಲ್ಲಿ ಈ ರೀತಿ ವಿನಾಕಾರಣ ಸಮಸ್ಯೆಗಳು ಎದುರಾಗುತ್ತಿರುವುದನ್ನು ಕಂಡು ನಮ್ಮ ಹಿರಿಯರು, ಯಾರಾದರೂ ತಮ್ಮ ಮೇಲೆ ಮಾಟ-ಮಂತ್ರ ಮಾಡಿಸಿರಬಹುದೆಂದು ಹೇಳುವ ಮಾತನ್ನು ನೀವು ಕೇಳಿರಬಹುದು. ಆದರೆ ಇತ್ತೀಚಿನ ದಿನಗಳಲ್ಲಿ ಇದನ್ನು ನಂಬುವವರು ಅತಿ ವಿರಳ. ಒಂದು ವೇಳೆ ವಾಮಾಚಾರ, ಮಾಟ - ಮಂತ್ರ ಇದ್ದರೂ ಕೂಡ ಅದನ್ನು ಮಾಡುವುದು, ಮಾಡಿಸುವುದು ಮಹಾ ಅಪರಾಧ, ಮಹಾ ಪಾಪವಾಗುತ್ತದೆ ಎಂಬುದನ್ನ ಮನಗಾಣಿರಿ. ಯಾರೇ ಆಗಲಿ,ಇನ್ನೊಬ್ಬರ ಕುಟುಂಬವನ್ನು ಹಾಳು ಮಾಡುವ ದುಷ್ಟರಿಂದ ದೂರವಿರಬೇಕು. ನಿಮ್ಮ ಅಕ್ಕಪಕ್ಕದಲ್ಲಿ ಯಾರಾದರೂ ಅಂತಹ ಕೆಲಸಕ್ಕೆ ಕೈ ಹಾಕಿದರೆ, ಅವರ ವಿರುದ್ಧ ದೂರು ನೀಡಿ ಅವರಿಗೆ ಕಾನೂನು ರೀತ್ಯಾ ಶಿಕ್ಷೆ ಆಗುವಂತೆ ಮಾಡಬೇಕು. ಅಂದಹಾಗೆ, ಯಾರಾದರೂ ತಂತ್ರ ಅಥವಾ ಮಾಟಮಂತ್ರವನ್ನು ಬಳಸಿದರೆ ಅದನ್ನು ಬಹಳ ಸುಲಭವಾಗಿ ತಿಳಿಯಬಹುದು! ಇದಕ್ಕಾಗಿ, ರಾತ್ರಿಯಲ್ಲಿ ಹಾಸಿಗೆಯ ಕೆಳಗೆ ಒಂದು ಗಾಜಿನ ಲೋಟದಲ್ಲಿ ಅಥವಾ ಸ್ಟೀಲ್ ಪಾತ್ರೆಯಲ್ಲಿ ನೀರನ್ನು ತುಂಬಿಸಿಟ್ಟು (ಮಡಕೆಯನ್ನು ಬಳಸಬಾರದು) ಮನದಲ್ಲಿ ದೇವರನ್ನು ನೆನೆದು ನನ್ನಲ್ಲಿ ನಕಾರಾತ್ಮಕ ಶಕ್ತಿಯ ಪ್ರಾಬಲ್ಯವಿದ್ದರೆ ಅದು ತಿಳಿಯುವಂತೆ ಮಾಡು ಎಂದು ಬೇಡಿಕೊಂಡು ಮಲಗಿ. ಇದರಿಂದ ನಿಮ್ಮಲ್ಲಿನ ನಕಾರಾತ್ಮಕ ಶಕ್ತಿಯ ಹರಿವು ಬಹುಬೇಗ ದೂರಾಗುತ್ತದೆ! ಒಂದು ವೇಳೆ ನೀವು ತುಂಬಿಸಿಟ್ಟ ನೀರು ಕಡಿಮೆಯಾಗಿದ್ದರೆ ನಿಮ್ಮ ಮೇಲೆ ಮಾಟ-ಮಂತ್ರ ಮಾಡಿದ್ದಾರೆಂಬುದನ್ನು ಅರ್ಥಮಾಡಿಕೊಳ್ಳಿ ಹೆಸರೇಳಲಿಚ್ಛಿಸದ ಓರ್ವ ಮಾಟಗಾರರ ಸಲಹೆ! ☯





## ಬೆಚ್ಚಿ ಬೀಳಿಸಿತ್ತು 'ನರಬಲಿ' ಪ್ರಕರಣ!

ಕೇರಳದಲ್ಲಿ ಪತ್ತಿನಂತಿಟ್ಟ ಜಿಲ್ಲೆಯಲ್ಲಿ ಇಬ್ಬರು ಅಸಹಾಯಕ ಮಹಿಳೆಯರನ್ನು ಮಾಟ ಮಂತ್ರಕ್ಕಾಗಿ 'ನರಬಲಿ' ನೀಡಲಾಗಿದ್ದ ಭಯಾನಕ ಪ್ರಕರಣ ಸಂಭವಿಸಿತ್ತು! ಈ ಸಂಬಂಧ ದಂಪತಿಗಳು ಸೇರಿದಂತೆ ಮೂವರನ್ನು ಪೊಲೀಸರು ಕಸ್ಟಡಿಗೆ ತೆಗೆದುಕೊಂಡು ತನಿಖೆ ನಡೆಸಿ ಜೈಲಿಗೆ ದಬ್ಬಿದ್ದರು ಕೂಡ. ರಸ್ತೆಗಳಲ್ಲಿ ಲಾಟರಿ ಟಿಕೆಟ್‌ಗಳನ್ನು ಮಾರಾಟ ಮಾಡುವ ಮೂಲಕ ತಮ್ಮ ದಿನನಿತ್ಯದ ಜೀವನ ನಡೆಸುತ್ತಿದ್ದ ಓರ್ವ ಮಹಿಳೆ ಇದ್ದಕ್ಕಿದ್ದಂತೆ ನಾಪತ್ತೆಯಾಗಿದ್ದಳು!



ಇನ್ನೊಬ್ಬ ಮಹಿಳೆ ಕೂಡ ಅಂದೇ ಕಾಣೆಯಾಗಿದ್ದಳು! ಮುಂದೆ ಅವರಿಬ್ಬರ ಹೆಣಗಳು ಪೀಸ್ ಪೀಸ್ ಆದ ರೀತಿಯಲ್ಲಿ ಹಳ್ಳಕೊಳ್ಳದಲ್ಲಿ ದೊರಕಿದ್ದವು. ಆ ಸ್ಥಳದಲ್ಲಿ ಅರಿಶಿನ ಕುಂಕುಮ ನಿಂಬೆ ಹಣ್ಣು ಇತ್ಯಾದಿ ಪರಿಕರಗಳು ಬಿದ್ದಿದ್ದರಿಂದ, ಇದು ಮಾಟಗಾರರ ಕೃತ್ಯವೇ ಎಂದು ಮೇಲ್ನೋಟಕ್ಕೆ ಅನ್ನಿಸಿತ್ತು. ತನಿಖೆ ಮುಂದುವರೆದಾಗ ಮೂವರೂ ಐನಾತಿ ಆರೋಪಿಗಳು ಪೊಲೀಸ್ ಬಲೆಗೆ ಬಿದ್ದಿದ್ದರು.

ತಮ್ಮ ಹಣಕಾಸಿನ ಸಮಸ್ಯೆಯನ್ನು ಪರಿಹರಿಸಿ ಕೊಳ್ಳಲು ಮತ್ತು ಜೀವನದಲ್ಲಿ ಆರ್ಥಿಕ ಸಮೃದ್ಧಿಯನ್ನು ಹೊಂದಲು ಮಾಟಮಂತ್ರ ಮಾಡಿಸಿದ್ದ ದಂಪತಿಗಳು, ಅನ್ಯಾಯವಾಗಿ ಅಸಹಾಯಕ ಮಹಿಳೆಯರಿಬ್ಬರ ಪ್ರಾಣವನ್ನೆ ಬಲಿ ನೀಡಿದ್ದರು! ಪತ್ತನಂತಿಟ್ಟ ಜಿಲ್ಲೆಯ ತಿರುವಲ್ಲಾ ಮತ್ತು ಅರನ್ಮುಲ್ಲಾ ಎರಡು ಕಡೆ ಹೆಣಗಳ ಹೂಳಲಾಗಿದ್ದು, ಕೊಲ್ಲುವ ಮುನ್ನ ಇಬ್ಬರು ಆ ಅಮಾಯಕ ಮಹಿಳೆಯರ ಕತ್ತು ಸೀಳಿ ಅವರ ದೇಹದ ಭಾಗಗಳನ್ನು ತುಂಡುಗಳಾಗಿ ಕತ್ತರಿಸಲಾಗಿತ್ತು!! ☯

# ಫೇಸ್‌ಬುಕ್ ಪ್ರಿಯಕರನಿಂದ ಹೆಣವಾದ ಕಾಮುಕಿ ಪ್ರೀತಿ!



ಆರೋಪಿ ಪುನೀತ್

**ಕಟ್ಟಿಕೊಂಡ ಗಂಡನೊಂದಿಗೆ ಮನೆ, ಮಕ್ಕಳು ಸಂಸಾರ ಅಂಥ ಜವಾಬ್ದಾರಿಯುತ ಬದುಕನ್ನು ಸಾಗಿಸಬೇಕಾದ ಕೆಲವು ಮಹಿಳೆಯರು ಸಾಮಾಜಿಕ ಜಾಲತಾಣಗಳಲ್ಲಿ ಪರಿಚಯವಾಗುವ ಯುವಕರೊಂದಿಗೆ ಪ್ರೀತಿ, ಪ್ರೇಮ, ಪ್ರಣಯವೆಂದು ಸಲುಗೆಯಿಂದ ವರ್ತಿಸಿ ಅವರೊಂದಿಗೆ ಸಂಬಂಧ ಬೆಳೆಸಿ ಕೊನೆಗೆ ಅವರಿಂದಲೇ ಹತ್ಯೆಗೀಡಾಗುವ ಪ್ರಕರಣಗಳು ಆಗಾಗ್ಗೆ ನಡೆಯುತ್ತಲೇ ಇರುತ್ತವೆ. ಆದರೂ ಎಚ್ಚೆತ್ತುಕೊಳ್ಳದೆ ಹಾಸನದ ವಿವಾಹಿತ ಮಹಿಳೆ ಫೇಸ್‌ಬುಕ್ ಪ್ರಿಯಕರನ ಹಿಂದೆ ಮಂಡ್ಯದ ಕೆ.ಆರ್. ಪೇಟೆ ಬಳಿ ಬೀದಿ ಹೆಣವಾಗಿ ಹೋಗಿದ್ದಾಳೆ.**



ಕೊಲೆಯಾದ ಪ್ರೀತಿ

**ಮಂಡ್ಯ**

ಬಿ.ಎಂ. ಲವಕುಮಾರ್

ಅನೈತಿಕ ಸಂಬಂಧಕ್ಕಾಗಿ ಕೊಲೆಗಳು ನಡೆಯುವುದು ಹೊಸತೇನಲ್ಲ, ಹಿಂದಿನಿಂದಲೂ ನಡೆದುಕೊಂಡೇ ಬಂದಿದೆ. ಆದರೆ ಸೋಷಿಯಲ್ ಮೀಡಿಯಾ ಜಮಾನದಲ್ಲಿ ಒಬ್ಬರಿಗೊಬ್ಬರು ಪರಿಚಯವಾಗುವುದು ಸುಲಭವಾಗಿರುವ ಕಾರಣದಿಂದಾಗಿ ಪರಿಚಯ, ಪ್ರಣಯ ಮತ್ತು ಕೊಲೆ ಎಲ್ಲವೂ ಬಹುಬೇಗವೇ ಆಗಿಬಿಡುತ್ತದೆ. ಸಾಮಾಜಿಕ ಜಾಲತಾಣದ ಬಳಕೆಯನ್ನು ಒಳ್ಳೆ ಉದ್ದೇಶಕ್ಕೆ ಮಾಡಿದ್ದರೂ ಅದನ್ನು ದುರ್ಬಳಕೆ ಮಾಡುವವರೇ ಹೆಚ್ಚಾಗಿರುವ ಕಾರಣದಿಂದಾಗಿ ಯಾವುದೇ ಘಟನೆಗಳಾದರೂ ಅದರ ಹಿಂದೆ ಸೋಷಿಯಲ್ ಮೀಡಿಯಾದ ಲಿಂಕ್ ಗಳಿರುವುದು ಕಂಡು ಬರುತ್ತಿದೆ.

ಇವತ್ತು ಗಂಡ ಮತ್ತು ಎರಡು ಮಕ್ಕಳನ್ನು ಬಿಟ್ಟು ಫೇಸ್‌ಬುಕನಲ್ಲಿ ಪರಿಚಯವಾಗಿದ್ದವನ ಜತೆಗೆ ಬಂದು ಎಲ್ಲೆಡೆ ಸುತ್ತಾಡಿ, ದೈಹಿಕ ಸುಖಪಡೆದು ಬಳಿಕ ಅವನಿಂದಲೇ ಕೊಲೆಯಾಗಿ ಹೋದವಳ ಹೆಸರು ಪ್ರೀತಿ ಅಲಿಯಾಸ್ ಅಸುಮತಿ. ಈಕೆ ಹಾಸನದ ಹೊಸಕೊಪ್ಪಲಿನ ನಿವಾಸಿ. ಆಟೋ ಡ್ರೈವರ್ ನಂದೀಶ್ ಎಂಬುವರ ಪತ್ನಿಯಾಗಿದ್ದು, ಇವರಿಗೆ ಇಬ್ಬರು ಮಕ್ಕಳಿದ್ದಾರೆ. ಗಂಡ ಮಕ್ಕಳೆಂದು ಸಂಸಾರದ ಜವಬ್ದಾರಿ ಹೊತ್ತುಕೊಂಡು ನ್ಯಾಯಯುತವಾಗಿ ಬದುಕಬೇಕಾಗಿದ್ದ ಈಕೆ ಸ್ಟೈಲ್ಲಾಗಿ ಸೀರೆಯುಟ್ಟುಕೊಂಡು ರೀಲ್ಸ್ ಮಾಡೋದು, ಸೋಷಿಯಲ್ ಮೀಡಿಯಾದಲ್ಲಿ ಹುಡುಗರನ್ನು ಪರಿಚಯಿಸಿಕೊಂಡು ಅವರೊಂದಿಗೆ ಚಾಟ್ ಮಾಡೋದು ಹೀಗೆ ಸದಾ ಮೊಬೈಲ್‌ನಲ್ಲಿ ಕಾಲ ಕಳೆಯುತ್ತಿದ್ದಳು. ಈಕೆ ಗಾರ್ಮೆಂಟ್‌ನಲ್ಲಿ ಕೆಲಸ ಮಾಡುತ್ತಿದ್ದಳು. ಆದ್ದರಿಂದ ಖರ್ಚಿಗೆ ಸ್ವಲ್ಪ ಹಣ ಬರುತ್ತಿದ್ದುದರಿಂದ ಜಾಲಿಯಾಗಿದ್ದಳು.

ಅತ್ತ ಗಂಡ ಹೆಂಡತಿ, ಮಕ್ಕಳು ಅಂಥ ಕಷ್ಟಪಟ್ಟು ಆಟೋ ಓಡಿಸಿಕೊಂಡು ಜೀವನ ಮಾಡಲು ಹೋರಾಟ ಮಾಡುತ್ತಿದ್ದರೆ ಈಕೆ ಮಾತ್ರ ಶೋಕಿ ಮಾಡಿಕೊಂಡು ಗಂಡನಿಗೆ ಗೋಲಿ ಹೊಡೆದು ಬೇರೆ ಗಂಡಸರ ಸಹವಾಸ ಮಾಡಿಕೊಂಡು ಜಾಲಿಯಾಗಿರುತ್ತಿದ್ದಳು. ಏನಾದರೂ ನೆಪ ಹೇಳಿ ಮನೆಯಿಂದ ಆಚೆ ಹೋಗುತ್ತಿದ್ದ ಈಕೆ ಜಾಲಿಯಾಗಿ ಸುತ್ತಾಡಿಕೊಂಡು ಮನೆ ಸೇರುತ್ತಿದ್ದಳು. ಮೈತುಂಬಾ ಒಡವೆ ಹಾಕಿಕೊಂಡು ರೀಲ್ಸ್ ಮಾಡುತ್ತಿದ್ದ ಪ್ರೀತಿ ಗಂಡಸರ ಸಹವಾಸದಲ್ಲಿಯೇ ಸುಖ ಕಾಣುತ್ತಿದ್ದಳು. ಆಕೆ ಯಾವತ್ತೂ ಗಂಡ, ಮಕ್ಕಳ ಬಗ್ಗೆ ಕಿಂಚಿತ್ತೂ ಯೋಚಿಸಿದವಳಲ್ಲ, ಬದಲಿಗೆ ಎಂಜಾಯ್ ಮಾಡುವುದಷ್ಟೇ ಅವಳಿಗೆ ಮುಖ್ಯವಾಗಿತ್ತು.

ಆದರೆ ಇದೇ ಚಟ ಅವಳಿಗೆ ಮುಂದೊಂದು ದಿನ ಚಟ್ಟ ಕಟ್ಟಿ ಬಿಡುತ್ತದೆ ಎಂಬುದು ಗೊತ್ತೇ ಇರಲಿಲ್ಲ, ಬದುಕೇ ಹೀಗೆ ಇದ್ದಷ್ಟು ದಿನ ಸುಖಿಸಿಕೊಂಡು ಜಾಲಿಯಾಗಿರಬೇಕೆಂಬ ತೀರ್ಮಾನ ಮಾಡಿ ಬಿಟ್ಟಿದ್ದಳು. ಹಾಗಾಗಿ ಕಟ್ಟಿಕೊಂಡ ಗಂಡನಿಗಾಗಲೀ, ಸಂಬಂಧಿಕರಿಗಾಗಲೇ ಯಾರಿಗೂ ಸೊಪ್ಪು ಹಾಕದೆ ತಾನು ಇರುವುದೇ ಹೀಗೆ ಎಂಬಂತೆ ಇದ್ದಳು. ಆದರೆ ಪರಪುರುಷರ ಸಂಗ ಯಾವತ್ತಿದ್ದರೂ ಡೇಂಜರ್ ಎಂಬುದು ಗೊತ್ತಾಗುವ ವೇಳೆಗೆ ಅವಳ ಉಸಿರು ನಿಂತು ಹೋಗಿತ್ತು. ಅವಳಿಗೂ ಗೊತ್ತಾಗಿರಲಿಲ್ಲ, ಕಾರಿನಲ್ಲಿ ಸುತ್ತಾಡಿಸಿ, ಲಾಡ್ಜ್‌ನಲ್ಲಿ ಹಾಸಿಗೆ ಹಂಚಿಕೊಂಡವನು ತನ್ನ ಪಾಲಿಗೆ ಯಮನಾಗುತ್ತಾನೆಂದು. ಆದರೆ ಅದು ಗೊತ್ತಾಗುವ ವೇಳೆಗೆ ಅವಳು ಇಹಲೋಕ ತ್ಯಜಿಸಿಯಾಗಿತ್ತು.

ಇಷ್ಟಕ್ಕೂ ಆಗಿದ್ದೇನು ಎಂಬುದನ್ನು ನೋಡಿದ್ದೇ ಆದರೆ ಪ್ರೀತಿ ಮಂಡ್ಯ ಜಿಲ್ಲೆಯ ಕೆ.ಆರ್. ಪೇಟೆ ತಾಲೂಕಿನ ಕರೋಟಿ ಗ್ರಾಮದ ಪುನೀತ್ ಎಂಬಾತನಿಗೆ ಫೇಸ್‌ಬುಕ್ ನಲ್ಲಿ ರಿಕ್ವೆಸ್ಟ್ ಕಳಿಸಿದ್ದಳು. ಹೆಂಗಸು ರಿಕ್ವೆಸ್ಟ್ ಕಳಿಸಿದ್ದಾಳೆ ಎಂದ ಮೇಲೆ ಗಂಡು ಜೀವವಾದ ಪುನೀತ್ ಅದನ್ನು ಅಕ್ಸೆಪ್ಟ್ ಮಾಡದೆ ಇರುತ್ತಾನಾ? ಮಾಡಿದ್ದಾನೆ. ಅಲ್ಲಿಂದ ಊಟ ಆಯಿತಾ? ಕಾಫಿ ಆಯಿತಾ? ಹೀಗೆ ಮೆಸೇಜ್‌ಗಳು ಹರಿದಾಡಿವೆ.



ಕಾಮಿನಿ ಪ್ರೀತಿ

ಅದೆಷ್ಟು ಬೇಗ ಇವರ ಪರಿಚಯ ಸಂಬಂಧವಾಗಿ ಮಾರ್ಪಾಡಾಗಿದೆ ಎಂದರೆ ಕೇವಲ ನಾಲ್ಕು ದಿನದಲ್ಲಿ ಸ್ನೇಹ, ಪ್ರೀತಿ, ಪ್ರಣಯ ಎಲ್ಲವೂ ಚಾಟಿಂಗ್‌ನಲ್ಲಿಯೇ ಆಗಿ ದೇಹ ಹಂಚಿಕೊಳ್ಳೋದಕ್ಕೆ ಮುಹೂರ್ತವೂ ಫಿಕ್ಸ್ ಮಾಡಿಕೊಂಡು ಬಿಟ್ಟಿದ್ದಾರೆ.

ಇವರ ಫೇಸ್‌ಬುಕ್ ಲವ್ ಕಹಾನಿ ಹೇಗಿತ್ತೆಂದರೆ ಪ್ರೀತಿ ಜೂನ್ 19ರ ಗುರುವಾರ ಪುನೀತ್ಗೆ ಫೇಸ್‌ಬುಕ್‌ನಲ್ಲಿ ಫ್ರೆಂಡ್ ರಿಕ್ವೆಸ್ಟ್ ಕಳಿಸುತ್ತಾಳೆ. ಅದನ್ನು ಪುನೀತ್ ಅಕ್ಸೆಪ್ಟ್ ಮಾಡುತ್ತಾನೆ. ಜೂ.20 ಶುಕ್ರವಾರ ಇಬ್ಬರ ನಡುವೆ ಚಾಟಿಂಗ್ ಶುರುವಾಗುತ್ತದೆ. ಜೂ.21ರ ಶನಿವಾರದ ವೇಳೆಗೆ ಮೊಬೈಲ್ ನಂಬರ್‌ಗಳು ವಿನಿಮಯವಾಗಿ ಮೊಬೈಲ್ ನಲ್ಲಿ ಮಾತನಾಡಲು ಶುರುಮಾಡಿ ಜೂ.22ರ ಭಾನುವಾರದಂದು ಇಬ್ಬರೂ ಹಾಸಿಗೆ ಹಂಚಿಕೊಳ್ಳುವ ಮಟ್ಟಕ್ಕೆ ಬಂದು ಬಿಡುತ್ತಾರೆ. ಪ್ರೀತಿ ಹಾಸನದಿಂದ ಅವನ ಬಳಿಗೆ ಬರಲು ತಯಾರಾಗುತ್ತಾಳೆ. ಇತ್ತ ಪುನೀತ್ ಅವಳೊಂದಿಗೆ ಜಾಲಿಯಾಗಿ ಕಳೆಯಲು ಸಜ್ಜಾಗುತ್ತಾನೆ.

ಅವಳು ಹಾಸನದಿಂದ ನೇರವಾಗಿ ಮೈಸೂರಿಗೆ ಬರುತ್ತಾಳೆ. ಇತ್ತ ಪುನೀತ್ ತನ್ನ ಊರು ಕೆ.ಆರ್. ಪೇಟೆಯ ಕೆರೋಟಿಯಿಂದ ಕಾರು ತೆಗೆದುಕೊಂಡು ಮೈಸೂರಿಗೆ ಬರುತ್ತಾನೆ. ಮೈಸೂರಿನಿಂದ ಕಾರಿನಲ್ಲಿ ಅವಳನ್ನು ಕರೆದುಕೊಂಡು ಕೆಆರ್ ಎಸ್‌ಗೆ ಹೋಗುತ್ತಾನೆ. ದಾರಿಯುದ್ದಕ್ಕೂ ಪ್ರಣಯದಲ್ಲಿ ತೊಡಗಿದ್ದ ಅವರು ಕೆಆರ್‌ಎಸ್ ಬಳಿಯಿರುವ ಲಾಡ್ಜ್‌ಗೆ ಹೋಗುತ್ತಾರೆ. ಅಲ್ಲಿ ತಮ್ಮ ಬಯಕೆ ತೀರಿಸಿಕೊಂಡು ಸ್ವಲ್ಪ ಹೊತ್ತು ಸುತ್ತಾಡಿದ್ದಾರೆ. ಅಲ್ಲಿಂದ ಹೊರಟಿದ್ದಾರೆ. ಆದರೆ ರೊಮ್ಯಾನ್ಸ್ ಮೂಡ್ ನಲ್ಲಿದ್ದ ಪ್ರೀತಿ ಪದೇ, ಪದೇ ದೈಹಿಕ ಸುಖದ ಆಸೆ ವ್ಯಕ್ತಪಡಿಸಿದ್ದಾಳೆ. ತನ್ನದೇ ಊರಾಗಿರುವುದರಿಂದ ಯಾರಾದರೂ ನೋಡಿದರೆ ಎಂಬ ಭಯವೂ ಪುನೀತ್‌ಗೆ ಆಗಿದೆ.

ಪ್ರೀತಿ ಮಾತ್ರ ಹಸಿದ ಹುಲಿಯಂತೆ ವರ್ತಿಸಲು ಆರಂಭಿಸಿದ್ದಳು. ಹೀಗಾಗಿ ಮತ್ತೆ ದೈಹಿಕ ಸಂಬಂಧ ಹೊಂದುವ ಸಲುವಾಗಿ ಕೆ.ಆರ್. ಪೇಟೆ ತಾಲೂಕಿನ ಕತ್ತರಘಟ್ಟ ಕಾಡಿನ ಬಳಿಗೆ ಬಂದಿದ್ದಾರೆ. ಆದರೆ ಅಲ್ಲಿ ಆಕೆಯನ್ನು ಕರೆದುಕೊಂಡು ಹೋಗಿ ಸಿಕ್ಕಿಬಿದ್ದರೆ ಎಂಬ ಭಯವಾಗಿದೆ. ಹೀಗಾಗಿ ಅದೆಲ್ಲ ಬೇಡವೆಂದು ಪುನೀತ್ ಹೇಳಿದ್ದಾನೆ. ಆದರೆ ಆಕೆ ಮಾತ್ರ ಒಪ್ಪದೆ ಮತ್ತೆ, ಮತ್ತೆ ಪೀಡಿಸಿದ್ದಾಳೆ. ಇದಕ್ಕೆ ಪುನೀತ್ ಒಪ್ಪದಿದ್ದಾಗ ನೀನು ಗಂಡಸಾ ಎಂದು ವ್ಯಂಗ್ಯ ಮಾಡಿದ್ದಾಳೆ. ಇದರಿಂದ ಕೋಪಗೊಂಡ ಪುನೀತ್ ಆಕೆಯ ಕಪಾಳಕ್ಕೆ ಹೊಡೆದಿದ್ದಾನೆ.

ಇಬ್ಬರಿಗೂ ಜೋರಾದ ಜಗಳವಾಗಿದೆ. ಅವನು ಹೊಡೆದ ಏಟು ತಲೆಗೆ ಬಿದ್ದಿದ್ದರಿಂದ ಆಕೆ ನೆಲಕ್ಕೆ ಬಿದ್ದು ತಲೆಗೆ ಪೆಟ್ಟಾಗಿದ್ದು, ರಕ್ತ ಸೋರಲಾರಂಭಿಸಿದ್ದಲ್ಲದೆ ಹೊಡೆದ ಏಟಿಗೆ ಅವಳು ಪ್ರಜ್ಞೆ ತಪ್ಪಿದ್ದಾಳೆ. ಇನ್ನು ಅವಳು ಎಚ್ಚರವಾದರೆ ತನಗೆ ಕಷ್ಟವೆಂದರಿದ ಪುನೀತ್ ಕೋಪದಲ್ಲಿಯೇ ಆಕೆಯ ತಲೆಗೆ ಕಲ್ಲು ಎತ್ತಿ ಹಾಕಿದ್ದಾನೆ. ಅಲ್ಲಿಗೆ ಅವಳು ಉಸಿರು ಚೆಲ್ಲಿದ್ದಾಳೆ. ಇನ್ನು ಹೆಣವನ್ನು ಅಲ್ಲಿಯೇ ಬಿಟ್ಟರೆ ಕಷ್ಟವೆಂದರಿತು ಹೆಣವನ್ನು ಕಾರಿನಲ್ಲಿ ಹಾಕಿಕೊಂಡು ತನ್ನೂರಿನ ಕೆರೋಟಿಗೆ ತಂದು ಜಮೀನಿನಲ್ಲಿ ಮುಚ್ಚಿಟ್ಟಿದ್ದಾನೆ.

ಅತ್ತ ಮನೆಯಿಂದ ಹೋದ ಪ್ರೀತಿ ಮನೆಗೆ ಮರಳಿ ಬಾರದೆ ಇದ್ದಾಗ ಆಕೆಯ ಗಂಡ ಹಾಸನದ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದನು. ಜೊತೆಗೆ ಫೋನ್ ಮಾಡಿದಾಗ ಮೊಬೈಲ್ ರಿಂಗ್ ಆಗುತ್ತಿದ್ದರೂ ರಿಸೀವ್ ಆಗುತ್ತಿರಲಿಲ್ಲ, ಇದಾದ ನಂತರ ಫೋನ್ ರಿಸೀವ್ ಮಾಡಿದ ಪುನೀತ್ ಈ ಮೊಬೈಲ್ ಕಾರಿನಲ್ಲಿ ಸಿಕ್ಕಿದೆ. ಯಾರೋ ಹೆಂಗಸು ಕಾರಿನಲ್ಲಿ ಬಿಟ್ಟು ಹೋಗಿದ್ದಾಗಿ ಹೇಳಿದ್ದಾನೆ. ಈ ವೇಳೆ ಕೆಲವು ಪ್ರಶ್ನೆಗಳನ್ನು ಕೇಳಿದರೆ ಸರಿಯಾಗಿ ಉತ್ತರ ಹೇಳದೆ ನುಣುಚಿಕೊಂಡಿದ್ದಾನೆ.

ಆದರೆ ಪೊಲೀಸರು ವಿಚಾರಣೆ ನಡೆಸಿದಾಗ ಮೊದಮೊದಲು ಪುನೀತ್ ಸುಳ್ಳು ಮಾಹಿತಿ ಹೇಳಿದ್ದು, ಪ್ರೀತಿ ಎನ್ನುವ ಮಹಿಳೆ ನನ್ನ ಕಾರನ್ನು ಬಾಡಿಗೆ ಪಡೆದಿದ್ದರು. ಮೊಬೈಲ್ ಅನ್ನು ಕಾರಿನಲ್ಲೇ ಬಿಟ್ಟು ಹೋಗಿರುವುದಾಗಿ ಮಾಹಿತಿ ನೀಡಿ, ಪ್ರೀತಿ ಅವರ ಮೊಬೈಲ್ ಅನ್ನು ಪೊಲೀಸರಿಗೆ ಕೊಟ್ಟಿದ್ದಾನೆ. ಆದರೂ, ಆತನ ಮೇಲೆ ಅನುಮಾನಗೊಂಡ ಪೊಲೀಸರು ಮೊಬೈಲ್‌ಗೆ ಬಂದಿದ್ದ ಕಾಲ್ ಲೀಸ್ಟ್ ಸೇರಿದಂತೆ ಚಾಟಿಂಗ್ ಮೊದಲಾದವುಗಳನ್ನು ನೋಡಿದಾಗ ಇವರಿಬ್ಬರ ನಡುವಿನ ಲವ್ವಿಡವ್ವಿ ಬೆಳಕಿಗೆ ಬಂದಿದೆ. ಹೀಗಾಗಿ ತಮ್ಮದೇ ಶೈಲಿಯಲ್ಲಿ ವಿಚಾರಣೆ ನಡೆಸಿದಾಗ ತಾನೇ ಕೊಲೆ ಮಾಡಿದ್ದಾಗಿ ಒಪ್ಪಿಕೊಂಡಿದ್ದಾನೆ.

ಬಳಿಕ ಆತ ನೀಡಿದ ಮಾಹಿತಿಯನ್ನು ಆದರಿಸಿ ಜಮೀನಿಗೆ ತೆರಳಿದ ಪೊಲೀಸರಿಗೆ ಪ್ರೀತಿಯ ಕೊಳೆತ ಶವ

☞10



# ದೇವನಹಳ್ಳಿ ಚಲೋ ಯಶಸ್ವಿ!

# ಚನ್ನರಾಯಪಟ್ಟಣದ 13 ಹಳ್ಳಿಗಳ ರೈತರ ಭೂಮಿ ಉಳಿವಿಗಾಗಿ ಪ್ರಜ್ಞಾವಂತರ ಹೋರಾಟ...


**ಜೂನ್** 26, 2025ರಂದು ಪ್ರಜ್ಞಾವಂತ ಹೋರಾಟಗಾರರ ಸಮ್ಮುಖದಲ್ಲಿ ಹಮ್ಮಿಕೊಂಡಿದ್ದ ದೇವನಹಳ್ಳಿ ಚಲೋ ಅತ್ಯಂತ ಯಶಸ್ವಿಯಾಗಿದೆ... ಚನ್ನರಾಯಪಟ್ಟಣ ತಾಲೂಕಿನ 13 ಹಳ್ಳಿಗಳ 1777 ಎಕರೆ ಭೂಮಿಯನ್ನು ಸರ್ಕಾರ ಸ್ವಾಧೀನಪಡಿಸಿಕೊಳ್ಳುವುದನ್ನು ವಿರೋಧಿಸಿ ಈ ಭಾಗದ ರೈತರು ದೇವನ ಹಳ್ಳಿಯಲ್ಲಿ ಭಾರಿ ಪ್ರತಿಭಟನೆ ನಡೆಸಿದ್ದರು. ರಾಜ್ಯದ ನಾನಾ ಮೂಲೆಗಳಿಂದ ಆಗಮಿಸಿದ್ದ ಎರಡು ಮೂರು ಸಾವಿರ ರೈತರು, ಭೂಮಿ ಉಳಿಸಿಕೊಳ್ಳುವವರೆಗೂ ಹೋರಾಟ ನಿಲ್ಲುವುದಿಲ್ಲ ಎಂದು ಪಟ್ಟು ಹಿಡಿದಿದ್ದರು. ರೈತರ ಬೆನ್ನಿಗೆ ನಿಂತ ವಿವಿಧ ಸಂಘಟನೆಗಳು ಸರ್ಕಾರವು ರೈತರ ಬೇಡಿಕೆಗಳಿಗೆ ಸ್ಪಂದಿಸದಿದ್ದರೆ ಉಗ್ರ ಹೋರಾಟ ಮಾಡುವುದಾಗಿ ಎಚ್ಚರಿಕೆ ನೀಡಿದ್ದಾರೆ.





### ಪರಿಹಾರ ಬೇಕಿಲ್ಲ...

ಚನ್ನರಾಯಪಟ್ಟಣ ತಾಲ್ಲೂಕಿನ 13 ಹಳ್ಳಿಗಳ ರೈತರು ಭೂಮಿ ಉಳಿಸಲು 1180 ದಿನಗಳ ಕಾಲ ಹೋರಾಟ ನಡೆಸುತ್ತಿದ್ದಾರೆ! ಈ ಹೋರಾಟದಲ್ಲಿ 3000ಕ್ಕೂ ಹೆಚ್ಚಿನ ಸಂಖ್ಯೆಯ ರೈತರು ಭಾಗವಹಿಸಿದ್ದಾರೆ. ಆದರೆ ಸಿಎಂ ಸಿದ್ದರಾಮಯ್ಯ ಆಗಲಿ, ಡಿಸಿಎಂ ಡಿ.ಕೆ. ಶಿವಕುಮಾರ್ ಆಗಲಿ ಇಲ್ಲಿಗೆ ಧಾವಿಸಲಿಲ್ಲ, ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ್ ಮತ್ತು ಉಸ್ತುವಾರಿ ಸಚಿವ ಕೆ.ಎಚ್. ಮುನಿಯಪ್ಪ ಪ್ರತಿಭಟನೆ ಕೈಬಿಡುವಂತೆ ರೈತರಲ್ಲಿ ಮನವಿ ಮಾಡಿದ್ದಾರೆ. ಆದರೆ ರೈತರು ತಮ್ಮ ಭೂಮಿಯನ್ನು ಕೊಡುವುದಿಲ್ಲ ಎಂದು ಪ್ರತಿಜ್ಞೆ ಮಾಡಿದ್ದು, ಸರ್ಕಾರದ ನೀತಿಗಳನ್ನು ಖಂಡಿಸಿದ್ದಾರೆ.





ರೈತರ ತಮ್ಮ ಭೂಮಿಯನ್ನು ಉಳಿಸಿಕೊಳ್ಳಲು ಕಳೆದ 1180 ದಿನಗಳಿಂದ ನಿರಂತರ ಹೋರಾಟ ನಡೆಸಿಕೊಂಡು ಬರುತ್ತಿದ್ದಾರೆ. ಈ ಮಧ್ಯೆ ಚನ್ನರಾಯಪಟ್ಟಣ ಭೂಸ್ವಾಧೀನ ಹೋರಾಟ ಸಮಿತಿ ಬುಧವಾರ ಕರೆ ನೀಡಿದ್ದ ದೇವನಹಳ್ಳಿ ಚಲೋಗೆ ಭಾರಿ ಸ್ಪಂದನೆ ವ್ಯಕ್ತವಾಗಿದೆ. ರಾಜ್ಯದ ಮೂಲೆ ಮೂಲೆಗಳಿಂದ ರೈತಪರ ಸಂಘಟನೆಗಳು ಸೇರಿದಂತೆ ಸಾಹಿತಿ, ಚಿಂತಕರು ಹೋರಾಟಕ್ಕೆ ಬೆಂಬಲ ವ್ಯಕ್ತಪಡಿಸಿದ್ದು, ಮೂರು ಸಾವಿರಕ್ಕೂ ಹೆಚ್ಚು ರೈತರು ದೇವನಹಳ್ಳಿ ಚಲೋದಲ್ಲಿ ಭಾಗಿಯಾಗಿದ್ದರು!

ಸಾವಿರಕ್ಕೂ ಹೆಚ್ಚು ದಿನಗಳಿಂದ ಹೋರಾಟ ನಡೆಸುತ್ತಿರುವ ರೈತರ ಮನವೊಲಿಸುವ ಪ್ರಯತ್ನ ಮಂಗಳವಾರ ನಡೆಯಿತು. ಮಂಗಳವಾರ ಸಂಜೆ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ್ ಹಾಗೂ ಉಸ್ತುವಾರಿ ಸಚಿವ ಕೆ.ಎಚ್. ಮುನಿಯಪ್ಪ ಜಂಟಿ ಸುದ್ದಿಗೋಷ್ಠಿ ನಡೆಸಿ ಮೂರು ಹಳ್ಳಿಗಳ ರೈತರ ಜಮೀನನ್ನು ಭೂಸ್ವಾದೀನದಿಂದ ಕೈಬಿಟ್ಟು ಉಳಿಕೆ ಜಮೀನು ಕೈಗಾರಿಕಾ ಉದ್ದೇಶಕ್ಕೆ ವಶಪಡಿಸಿಕೊಳ್ಳಲಾಗುವುದು. ಜಮೀನು ವಶಕ್ಕೆ ಪಡೆದ ರೈತರಿಗೆ ಅಭಿವೃದ್ಧಿ ಪಡಿಸಿದ ಜಾಗದಲ್ಲಿ 10,781 ಚದರ ಅಡಿ ಜಾಗ ಹಾಗೂ ಪರಿಹಾರ ನೀಡಲಾಗುವುದು. ದೇವನಹಳ್ಳಿ ಚಲೋ ಹೋರಾಟವನ್ನು ಕೈಬಿಡುವಂತೆ ಮನವಿ ಮಾಡಿದ್ದಕ್ಕೆ ರೈತರು ಒಪ್ಪಲಿಲ್ಲ.

ಸಚಿವರ ಮನವಿಯನ್ನು ತಿರಸ್ಕರಿಸಿರುವ ರೈತರು ಚನ್ನರಾಯಪಟ್ಟಣದ 13 ಹಳ್ಳಿಗಳ 1777 ಎಕರೆ ಜಮೀನನ್ನು ಭೂಸ್ವಾದೀನದಿಂದ ಕೈಬಿಡುವಂತೆ ದೇವನಹಳ್ಳಿ ಚಲೋಗೆ ಕರೆ ಕೊಟ್ಟಿದ್ದು ಅದಕ್ಕೆ ಉತ್ತಮ ಸ್ಪಂದನೆ ವ್ಯಕ್ತವಾಯಿತು.

### ಮಾವಳ್ಳಿ ಶಂಕರ್ ಗುಡುಗು!

ದಲಿತ ಸಂಘರ್ಷ ಸಮಿತಿ ರಾಜ್ಯಾಧ್ಯಕ್ಷ ಮಾವಳ್ಳಿ ಶಂಕರ್ ಮಾತನಾಡಿ, ಸ್ವಾತಂತ್ರ್ಯಾ ನಂತರ ಈ ದೇಶ ವಿರುದ್ಧ ದಿಕ್ಕಿಗೆ ಹೊರಟಿದೆ. ರಾಷ್ಟ್ರೀಕರಣದ ಕನಸನ್ನು ಕಂಡದ್ದು, ಆದರೆ ಇಂದು ಖಾಸಗೀಕರಣದ ಪರವಾಗಿ ಹೊರಟಿದೆ. ಖಾಸಗಿ ಬಂಡವಾಳಶಾಹಿಗಳ ಕಂಪೆನಿಗಳು ಇಂದು ಸರಕಾರಗಳನ್ನು ರಚನೆ ಮಾಡುತ್ತಿವೆ. ಸರಕಾರಗಳು ಬಂಡವಾಳ ಶಾಹಿಗಳ ಪರವಾಗಿ ಕೆಲಸ ಮಾಡುತ್ತಿವೆ. ದೇಶದ ರೈತ ಸೋಲಬಾರದು ಎಂದು ಬಿ.ಆರ್. ಅಂಬೇಡ್ಕರ್ ಹೇಳಿದ್ದರು. ಇಂದು ರಾಹುಲ್ ಗಾಂಧಿ ಸಂವಿಧಾನ ಉಳಿಸಿ ಎಂದು ದೇಶ ಸುತ್ತುತ್ತಿದ್ದಾರೆ. ಆದರೆ ರಾಜ್ಯದ ಕಾಂಗ್ರೆಸ್ ನಾಯಕರು ಏನು ಮಾಡುತ್ತಿದ್ದಾರೆ? ಸಿದ್ದರಾಮಯ್ಯ ಐದು ಗ್ಯಾರಂಟಿಗಳನ್ನು ನೀಡಿದ್ದಾರೆ. 6ನೇ ಗ್ಯಾರಂಟಿಯಾಗಿ ಚನ್ನರಾಯಪಟ್ಟಣ ಭೂ ಸ್ವಾಧೀನ ಮಾಡುವುದಿಲ್ಲ ಎಂದು ಘೋಷಿಸಬೇಕು ಎಂದು ಗುಡುಗಿದ್ದಾರೆ.




### ಬಡಗಲಪುರ ನಾಗೇಂದ್ರ

ಸಂಯುಕ್ತ ಹೋರಾಟ ಕರ್ನಾಟಕ ಸಂಯೋಜಕ ಬಡಗಲಪುರ ನಾಗೇಂದ್ರ ಮಾತನಾಡಿ, ಸರಕಾರದ ಒಡೆದಾಳುವ ನೀತಿಯನ್ನು ಖಂಡಿಸಿದ್ದಾರೆ. ಚನ್ನರಾಯ ಪಟ್ಟಣದ ಶೇ. 99 ರಷ್ಟು ರೈತರು ಭೂಮಿ ನೀಡಲು ನಿರಾಕರಿಸಿದ್ದಾರೆ. ದೇಶದಲ್ಲಿ ಶೇ.60ರಷ್ಟು ರೈತರಿದ್ದಾರೆ. ಅದನ್ನು ಶೇ.20ಕ್ಕೆ ಇಳಿಸಲು ರಾಜ್ಯ ಹಾಗೂ ಕೇಂದ್ರ ಸರಕಾರಗಳು ಮುಂದಾಗಿವೆ. ಸಿದ್ದರಾಮಯ್ಯನವರು ಪ್ರತಿಪಕ್ಷದ ನಾಯಕರಾಗಿದ್ದಾಗ ಕೊಟ್ಟ ಮಾತನ್ನು ಉಳಿಸಿಕೊಳ್ಳಲಿ. ಸರಕಾರ ರೈತರ ಬಾಳಿನ ಜತೆ ಚೆಲ್ಲಾಟ ಆಡುತ್ತಿದೆ. ರೈತ ಕುಲವನ್ನು ನಿರ್ವಂಶ ಮಾಡಲು ಸರಕಾರ ಹೊರಟಿದೆ. ರೈತರ ತಂಟೆಗೆ ಬಂದ ಸರಕಾರಗಳು ಉಳಿಯುವುದಿಲ್ಲ, ಸಚಿವ ಎಂ.ಬಿ. ಪಾಟೀಲ್ ಕುರ್ಚಿ ಮುರಿಯುತ್ತೇವೆ ಎಂದು ಶಪಥ ಮಾಡಿದ್ದಾರೆ.



### ಪ್ರಕಾಶ್ ರೈ ಪಂಚ್

ಸಿದ್ದರಾಮಯ್ಯನವರೇ, ನೀವು ಕೊಟ್ಟ ಮಾತು ಉಳಿಸಿಕೊಳ್ಳಿ, ಎಂ.ಬಿ. ಪಾಟೀಲರೆ ಏನು ಮಾಡುತ್ತಿದ್ದೀರಿ? ಒಬ್ಬ ಮನುಷ್ಯನಿಗೆ ಒಂದೆರಡು ಬಾರಿ ಹೇಳಬಹುದು. ನಾವು ನಿಮ್ಮ ವಿರುದ್ಧ ಮೂರು ವರ್ಷ ಬಾಯಿ ಬಡ್ಕೊಬೇಕಾ? ನಿಮಗೆ ಅರ್ಥ ಆಗಬೇಕು. 13 ಹಳ್ಳಿಯ ಹೆಣ್ಣು ಮಕ್ಕಳು ಅಲ್ಲಿನ ಮಣ್ಣನ್ನು ತಂದು ಗಿಡಕ್ಕೆ ಹಾಕಿ, ನಾವು ಮಣ್ಣನ್ನು ಮಾರುವುದಿಲ್ಲ ಎಂದು ಹೇಳುತ್ತಿದ್ದಾರೆ. ನಿಮಗೆ ಧಿಕ್ಕಾರ ಹಾಕುವ ಸಮಯ ತುಂಬಾ ದೂರವಿಲ್ಲ. ಸಿದ್ದರಾಮಯ್ಯನವರೇ? ನೀವು ಜನಪರ, ರೈತರ ಪರ ಅಂತೀರಿ. ಇದೇ ಹೋರಾಟದ ಮಧ್ಯೆ, ಪ್ರತಿಪಕ್ಷದ ನಾಯಕರಾಗಿದ್ದಾಗ, ಬೆಂಬಲ ಸೂಚಿಸಿದ್ದಿರಿ. ಮಾತು ಕೊಟ್ಟಿದ್ದೀರಿ ಕೊಟ್ಟಮಾತನ್ನು ಉಳಿಸಿಕೊಳ್ಳಿ, ರೈತರು ಭೂಮಿಯನ್ನು ಮಾರುವುದಿಲ್ಲ, ಈ ರೈತರ ಜತೆಗೆ ಇಲ್ಲೇ ಮಲಗುತ್ತೇನೆ. ಜೈಲಿಗೆ ಹಾಕುವುದಾದರೆ ಹಾಕಿ, ಬೇಲ್ ಕೂಡ ತೆಗೆದುಕೊಳ್ಳುವುದಿಲ್ಲ... ಹೀಗೆ ನೇರವಾಗಿ ಎಚ್ಚರಿಸಿದ್ದು ನಟ / ಹೋರಾಟಗಾರ ಪ್ರಕಾಶ್ ರೈ!

### ಹೃದಯಹೀನ ಸರಕಾರ!

ಹಿರಿಯ ಸಾಹಿತಿ ಪ್ರೊ. ಎಸ್.ಜಿ. ಸಿದ್ದರಾಮಯ್ಯ ಮಾತನಾಡಿ, ನಮ್ಮ ಮಾತು ಹೃದಯಹೀನ ಸರಕಾರಕ್ಕೆ ಕೇಳಬೇಕು. ಪ್ರತಿದಿನ ಹೊಟ್ಟೆಗೆ ಹಾಕುವ ಅನ್ನವನ್ನು ನೆನಪಿಸಿಕೊಳ್ಳಿ, ಪ್ರತಿ ಅನ್ನದ ಹಿಂದೆ ರೈತನ ಶ್ರಮವಿದೆ. ಇದನ್ನು ನೀವು ಅರಿವಿಗೆ ತಂದುಕೊಂಡರೆ ನೀವು ಈ ರೀತಿಯಾಗಿ ನಡೆದುಕೊಳ್ಳುವುದಿಲ್ಲ, ಅರಸು ಅವರ ಕಾಲದಲ್ಲಿರೈತರಿಗೆ ಭೂಮಿಯನ್ನು ನೀಡಿದ್ದರು. ಆದರೆ ನೀವು ರೈತರ ಭೂಮಿಯನ್ನು ಕಸಿದುಕೊಳ್ಳುತ್ತಿದ್ದೀರಿ. ರೈತರು ಒಂದಾಗಿ ಬಾಳಬೇಕು. ಅದಕ್ಕಾಗಿ ರೈತರಿಂದ ಕಿತ್ತುಕೊಂಡ ಭೂಮಿಯನ್ನು ವಾಪಸ್ ನೀಡಬೇಕು... ಎಂಬುದಾಗಿ ಕಳಕಳಿ ಮೆರೆದಿದ್ದಾರೆ.

ಸಂಯುಕ್ತ ಕರ್ನಾಟಕದ ನಾಯಕಿ ಎಸ್. ವರಲಕ್ಷ್ಮಿ ಮಾತನಾಡಿ, ಭೂಮಿಯನ್ನು ಕೊಡಿ ಎಂದು ಹಲವಾರು ವರ್ಷಗಳಿಂದ ರೈತರು ಚಳವಳಿ ಮಾಡುತ್ತಲೇ ಬಂದಿದ್ದಾರೆ. ಆದರೆ ಈಗ ರೈತರು ನಮ್ಮ ಭೂಮಿ ಕಿತ್ತುಕೊಳ್ಳಬೇಡಿ ಎಂದು ಹೋರಾಟ ನಡೆಸುವ ಸಂದರ್ಭ ಬಂದಿದೆ. ಇದಕ್ಕಿಂತ ಕೆಟ್ಟ ಪರಿಸ್ಥಿತಿ ಏನಿದೆ. ಈ ಬಗ್ಗೆ ಕೇಳಲು ಹೋದರೆ ಕೈಗಾರಿಕೆಗಳು ಬರಬೇಕು ಎಂದು ಸಮಜಾಯಿಷಿ ನೀಡುತ್ತಿದ್ದಾರೆ. ರಾಜ್ಯದಲ್ಲಿ ಶೇ. 80 ಕೆಲಸಗಾರರು ಖಾಯಂ ಉದ್ಯೋಗಿಗಳು ಇಲ್ಲ, ಹೊರಗುತ್ತಿಗೆ ಆಧಾರದಲ್ಲಿಕೆಲಸ ಮಾಡುತ್ತಿದ್ದಾರೆ. ಭೂಮಿ ಕಿತ್ತುಕೊಳ್ಳುವಾಗ ಅಭಿವೃದ್ಧಿ ಮತ್ತು ಉದ್ಯೋಗ ಸೃಷ್ಟಿ ಎಂದು ಹೇಳುತ್ತಿದ್ದಾರೆ. ಆದರೆ ಯಾವುದೇ ಉದ್ಯೋಗ ಸಿಗುತ್ತಿಲ್ಲ ಎಂದು

☞ 7



6 ☞
ನೊಂದು ನುಡಿದಿದ್ದಾರೆ.

**ತಾಲೂಕು ಕಚೇರಿಗೆ ಬಿಗಿ ಬಂದೋ ಬಸ್ತ್**

ಚನ್ನರಾಯಪಟ್ಟಣ ಭೂಸ್ವಾದೀನ ವಿರೋಧಿ ಹೋರಾಟ ಸಮಿತಿ ಪದಾಧಿಕಾರಿಗಳು, ನಟ ಮುಖ್ಯ ಮಂತ್ರಿ ಚಂದ್ರು, ಇಂದಿರಾ ಕೃಷ್ಣಪ್ಪ, ಕಾರಹಳ್ಳಿ ಶ್ರೀನಿವಾಸ್, ಶಿವಾನಂದ್, ಶಿವಪ್ರಸಾದ್, ತಾರಾರಾಮ್, ಚಂದ್ರ



ತೇಜಸ್ವಿ, ಸಾಹಿತಿಗಳು ಚಿಂತಕರು, ನಾನಾ ರೈತ ಪರ ಸಂಘಟನೆಯ ಮುಖಂಡರು, ರೈತರು ಇದ್ದರು.

**ಶಾಂತಿಯುತ ಧರಣಿಗೆ ಹಳೆ ಬಸ್ ನಿಲ್ದಾಣದಲ್ಲಿ ಅವಕಾಶ**

ದೇವನಹಳ್ಳಿ ಪಟ್ಟಣದ ಹಳೆ ಬಸ್ ನಿಲ್ದಾಣದಲ್ಲಿ ರೈತರು ಶಾಂತಿಯುತ ಧರಣಿ ನಡೆಸಲು ಅವಕಾಶ ಕಲ್ಪಿಸಿದ್ದು ಕಾರ್ಯಕ್ರಮ ನಡೆಯುವ ಜಾಗದ ಸುತ್ತಲೂ ಬ್ಯಾರಿಕೇಡ್‌ಗಳನ್ನು ಹಾಕಿ ಅಲ್ಲಿಂದ ರೈತರು ಹೊರಗಡೆ ಬಂದರೆ ಬಂಧಿಸಲು ಬೇಕಾದ ಸಿದ್ಧತೆಗಳನ್ನು ಮಾಡಿ ಕೊಳ್ಳಲಾಗಿತ್ತು.

ರೈತರು ಪಾದಯಾತ್ರೆ ಮೂಲಕ ತೆರಳಿ ತಾಲೂಕು ಕಚೇರಿಗೆ ಮುತ್ತಿಗೆ ಹಾಕುವ ಮಾಹಿತಿ ಲಭ್ಯವಾದ ಹಿನ್ನೆಲೆ ಪೊಲೀಸರು ಮುಂಜಾಗ್ರತಾ ಕ್ರಮವಾಗಿ ತಾಲೂಕು ಕಚೇರಿ ಹೊರಗಡೆ ಪ್ರವೇಶದ್ವಾರವನ್ನು ಸಂಪೂರ್ಣ ಬಂದ್ ಮಾಡಿ ಹೆಚ್ಚು ಪೊಲೀಸರನ್ನು ನಿಯೋಜನೆ ಮಾಡಿದ್ದರು. ನೋಂದಣಿ ಮಾಡಿಸಿಕೊಳ್ಳುವವರು ನೋಂದಣಿ ಪತ್ರ ತೋರಿಸಿದವರಿಗೆ ಮಾತ್ರ ಅವಕಾಶ ಮಾಡಿಕೊಡಲಾಗಿತ್ತು.



ರೈತರ ದೇವನಹಳ್ಳಿ ಚಲೋ ಬೆನ್ನಲ್ಲೇ ಪೊಲೀಸರು ದೇವನಹಳ್ಳಿ ಪ್ರವೇಶ ಕಲ್ಪಿಸುವ ಆರು ದ್ವಾರಗಳನ್ನು ಸಂಪೂರ್ಣ ಬಂದ್ ಮಾಡಿ ಬಿಗಿ ಪೊಲೀಸ್ ಬಂದೋಬಸ್ತ್ ಮಾಡಿದ್ದರು. ಉದ್ರಿಕ್ತ ರೈತರನ್ನು ಕಂಟ್ರೋಲ್ ಮಾಡಲು 1300ಕ್ಕೂ ಹೆಚ್ಚು ಪೊಲೀಸರನ್ನು ನಿಯೋಜಿಸಲಾಗಿತ್ತು. ಮೂವರು ಡಿಸಿಪಿ, 13 ಎಸಿಪಿ, 30 ಪೊಲೀಸ್ ಇನ್ಸ್‌ಪೆಕ್ಟರ್, 30 ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ಹಾಗೂ ನೂರಾರು ಸಂಖ್ಯೆಯಲ್ಲಿ ಪೊಲೀಸ್ ಪೇದೆಗಳನ್ನ ನಿಯೋಜನೆ ಮಾಡಲಾಗಿತ್ತು. ಮೊಬೈಲ್ ಕಮಾಂಡ್ ಮತ್ತು ಕಂಟ್ರೋಲ್ ಸೆಂಟರ್, 3 ಜಲ ಫಿರಂಗಿಗಳು, ಆಂಬ್ಯುಲೆನ್ಸ್ ಕೂಡ ಇರಿಸಲಾಗಿತ್ತು.

**1181ನೇ ದಿನವೂ ರೈತರ ಕಿಚ್ಚು-ಹೆಚ್ಚು**

ಬೆಂಗಳೂರು ಗ್ರಾಮಾಂತರ ಜಿಲ್ಲೆ ಜಿಲ್ಲೆಯ ದೇವನಹಳ್ಳಿ ತಾಲೂಕು ಚನ್ನರಾಯಪಟ್ಟಣ ಹೋಬಳಿಯ 13 ಗ್ರಾಮಗಳ 1777 ಎಕರೆ ಭೂಮಿಯನ್ನು ಸರಕಾರ ಕೆಐಎಡಿಬಿ ಮೂಲಕ ಭೂಸ್ವಾಧೀನಕ್ಕೆ ಮುಂದಾಗಿರುವುದನ್ನು ವಿರೋಧಿಸಿ ಬುಧವಾರ ನಡೆದ ದೇವನಹಳ್ಳಿ ಚಲೋ ಹೋರಾಟದಲ್ಲಿ ಪಾಲ್ಗೊಂಡಿದ್ದ ರೈತ ಹೋರಾಟಗಾರನ್ನು ಪೊಲೀಸರು ಬಲವಂತವಾಗಿ ಬಂಧಿಸಿದ ಘಟನೆ ಜರುಗಿತು!

ಮೂರು ಹಳ್ಳಿಗಳ ರೈತರ ಜಮೀನು ಮಾತ್ರ ಭೂ-ಸ್ವಾಧೀನದಿಂದ ಕೈಬಿಡುವುದಾಗಿ ಹೇಳಿರುವ ಸರಕಾರದ ಪ್ರಸ್ತಾಪವನ್ನು ರೈತರು ಒಕ್ಕೂರಲಾಗಿ ತಿರಸ್ಕರಿಸಿದ್ದಾರೆ. ಮೂರಲ್ಲ, ಎಲ್ಲಾ 13 ಗ್ರಾಮಗಳ ಭೂ ಸ್ವಾಧೀನವನ್ನು ಸಂಪೂರ್ಣವಾಗಿ ರದ್ದುಪಡಿಸುವಂತೆ ಆಗ್ರಹಿಸಿದ್ದಾರೆ. ಇದಕ್ಕೆ ಇನ್ನೂ ಸ್ಪಂದಿಸದಿದ್ದಕ್ಕೆ ದೇವನಹಳ್ಳಿ ಚಲೋ ನಡೆಸಿರುವುದು ಸ್ಪಷ್ಟ! ಉದ್ರಿಕ್ತ ರೈತರು ತಾಲೂಕು ಕಚೇರಿಗೆ ಮುತ್ತಿಗೆ ಹಾಕಲು ರೈತರು ಮುಂದಾಗಿದ್ದರು. ಆದರೆ ಇದಕ್ಕೆ ಪೊಲೀಸರು ಅವಕಾಶ ನೀಡಲಿಲ್ಲ, ಬಳಿಕ ಸಂತೆ ಮೈದಾನದಲ್ಲಿ ಪ್ರತಿಭಟನಾ ಸಭೆ ನಡೆಸಲಾಯಿತು.

ಸರಕಾರ ಸಾಯಂಕಾಲ 5 ಗಂಟೆಯೊಳಗೆ ತನ್ನ ನಿರ್ಧಾರ ಪ್ರಕಟಿಸದಿದ್ದರೇ ಹೋರಾಟದ ಸ್ವರೂಪ ಬದಲಾಯಿಸಲಾಗುವುದು ಎಂದು ಹೋರಾಟಗಾರರು ಗುಡುಗಿದರು! ಆದರೆ, ಸಿಎಂ, ಡಿಸಿಎಂ... ಏನೂ ಹೇಳಲಿಲ್ಲ! ಇದರಿಂದ ಸಂಜೆ ಹೊತ್ತಿಗೆ ಹೋರಾಟ ಬಿರುಸಾಗಿತ್ತು. ಸಂಜೆ 5ರ ನಂತರ ವೇದಿಕೆ ಮುಂಭಾಗ ಜಮಾಯಿಸಿದ್ದ ರೈತರು, ಮಹಿಳೆಯರನ್ನು ಪೊಲೀಸರು ಬಲವಂತವಾಗಿ ಎಳೆದೊಯ್ದು ಬಂಧಿಸಿದರು! ಈ ವೇಳೆ ಪೊಲೀಸರು, ಸರಕಾರದ ವಿರುದ್ಧ ರೈತರು ಘೋಷಣೆಗಳನ್ನು ಕೂಗಿ ಆಕ್ರೋಶ ವ್ಯಕ್ತಪಡಿಸಿದ್ದಾರೆ.

**ಬಿಜೆಪಿ ತೀರ್ಮಾನದಿಂದ ಬಚಾವ್ ಆಗಿದ್ದ ರೈತರು!**

1777 ಎಕರೆ ಫಲವತ್ತಾದ ಭೂಮಿಯನ್ನು ಕೈಗಾರಿಕೆ ಉದ್ದೇಶಕ್ಕೆ ಸರಕಾರ ವಶಪಡಿಸಿಕೊಳ್ಳಲು ಪ್ರಯತ್ನ ನಡೆಸುತ್ತಿದೆ. 2022ರ ಜನವರಿಯಲ್ಲಿ ಆಗಿನ ಬಿಜೆಪಿ ಸರಕಾರ ಈ ಭೂಮಿಯನ್ನು ಕಂಪನಿಗಳಿಗೆ ಮಾರಲು ಅಧಿಸೂಚನೆ ಹೊರಡಿಸಿತ್ತು.

ಈ ಭೂಮಿಯಲ್ಲಿ 800 ಕುಟುಂಬಗಳು ವಾಸಿಸುತ್ತಿದ್ದು, ಬಹುತೇಕರು ಕೃಷಿ, ಹೈನುಗಾರಿಕೆ, ಕೋಳಿ ಸಾಕಣೆಯನ್ನೇ ಜೀವನಾಧಾರವಾಗಿಸಿಕೊಂಡಿದ್ದಾರೆ. ಈ ಭೂಮಿಯಲ್ಲಿ ಅವರ ಪೂರ್ವಿಕರ ಸಮಾಧಿಗಳಿದ್ದು, ತೋಟಗಳನ್ನು ಬೆಳೆಸಿ, ನೀರಾವರಿ ವ್ಯವಸ್ಥೆ ಮಾಡಿಕೊಂಡಿದ್ದಾರೆ. ಈಗಾಗಲೇ ಸುತ್ತಲಿನ 6000 ಎಕರೆ ಭೂಮಿಯನ್ನು ವಿಮಾನ ನಿಲ್ದಾಣ ಮತ್ತು ಕಂಪನಿಗಳಿಗೆ ಕೊಟ್ಟಿದ್ದು, ಭೂಮಿ ಕಳೆದುಕೊಂಡವರ ಸ್ಥಿತಿಯನ್ನು ಕಂಡ ರೈತರ ಜಮೀನನ್ನು ರಕ್ಷಿಸಿಕೊಳ್ಳಲು ಹೋರಾಟಕ್ಕಿಳಿದಿದ್ದೇವೆ ಎಂದು ರೈತರು ಆಗ್ರಹಿಸಿದ್ದಾರೆ.

ಕೆಪಿಆರ್‌ಎಸ್ ತಾಲೂಕು ಸಂಚಾಲಕ ಡಿ.ಟಿ. ಮುನಿಸ್ವಾಮಿ ಮಾತನಾಡಿ, 2022ರ ಸೆಪ್ಟೆಂಬರ್‌ನಲ್ಲಿ, ಪ್ರತಿಪಕ್ಷದ ನಾಯಕರಾಗಿದ್ದ ಸಿದ್ದರಾಮಯ್ಯ ಹೋರಾಟ ಸ್ಥಳಕ್ಕೆ ಭೇಟಿ ನೀಡಿ, ನಾವು ಅಧಿಕಾರಕ್ಕೆ ಬಂದರೆ ಈ ಯೋಜನೆ ರದ್ದುಗೊಳಿಸುವುದಾಗಿ ಭರವಸೆ ನೀಡಿದ್ದರು.

ಆ ಭರವಸೆಯಿಂದಾಗಿ 2023ರ ಚುನಾವಣೆಯಲ್ಲಿ ರೈತರು ಕಾಂಗ್ರೆಸ್ಗೆ ಬೆಂಬಲ ನೀಡಿದ್ದರು. ಆದರೆ ಅಧಿಕಾರಕ್ಕೆ ಬಂದ ನಂತರ ಸರಕಾರವು ಯಾವುದೇ ಗಟ್ಟಿ ತೀರ್ಮಾನ ಕೈಗೊಂಡಿಲ್ಲ, ಇದೀಗ ಸಚಿವರಾದ ಕೆ.ಎಚ್. ಮುನಿಯಪ್ಪ ಮತ್ತು ಎಂ.ಬಿ. ಪಾಟೀಲ್ ಅವರಂತಹ ನಾಯಕರು ಭೂಸ್ವಾಧೀನಕ್ಕೆ ಸಮರ್ಥನೆ ನೀಡುತ್ತಿರುವುದು ರೈತರ ಆಕ್ರೋಶಕ್ಕೆ ಕಾರಣವಾಗಿದೆ! ☯

# ಚಲೋ...ಬಳಿಕ ಸಿಎಂ ಸಿದ್ದರಾಮಯ್ಯನವರ ಬಳಿ ಹೋಗಿದ್ದೇಕೆ ಪ್ರಕಾಶ್ ರೈ?

**ಜೂ.** 25ರಂದು ದೇವನಹಳ್ಳಿ ಚಲೋ.... ನಡೆದ ಬೆನ್ನಲ್ಲೇ ನಟ ಪ್ರಕಾಶ್ ರೈ ಮುಖ್ಯಮಂತ್ರಿ ಸಿದ್ದರಾಮಯ್ಯನವರನ್ನು ಭೇಟಿ ಮಾಡಿದ್ದಾರೆ. ರೈ ಅಂದ್ರೆ ಸಿದ್ದರಾಮಯ್ಯ ಅವರಿಗೆ ಮೊದಲಿಂದಲೂ ಇಷ್ಟ! ಅವರನ್ನು ನಗುನಗುತ್ತಲೇ ಸ್ವಾಗತಿಸಿದ ಸಿದ್ದರಾಮಯ್ಯ, ಏನ್ರೀ... ಚೆನ್ನಾಗಿದ್ದೀರಾ... ಎಂದು ಮಾತನಾಡಿಸಿದ್ದಾರೆ. ನಂತರ, ರೈ ಅವರ ಅವಹಾಲನ್ನು ಸ್ವೀಕರಿಸಿ, ನಾಳೆ 4ನೇ ತಾರೀಖು ಶುಕ್ರವಾರ ರೈತರ ಜೊತೆ ಮಾತನಾಡುವುದಾಗಿ ತಿಳಿಸಿ 'ಮೀಟಿಂಗ್ ಫಿಕ್ಸ್' ಮಾಡಿದ್ದಾರೆಂದು ತಿಳಿದು ಬಂದಿದೆ. ಸಿಎಂ ಭೇಟಿ ಮಾಡಿದ ಬಳಿಕ ರೈ ಮಾಧ್ಯಮಗಳ ಜೊತೆ ಮಾತನಾಡಿದ್ದಾರೆ.



ಚನ್ನರಾಯಪಟ್ಟಣ ತಾಲೂಕಿನ ಹದಿಮೂರು ಹಳ್ಳಿಗಳ ರೈತರ ಸುಮಾರು 1777 ಎಕರೆ ಭೂಮಿಗಳನ್ನ ಸರ್ಕಾರ ವಶಪಡಿಸಿಕೊಂಡು, ಅದನ್ನ ಕೆಐಎಡಿಬಿ ಮೂಲಕ ಕಾರ್ಪೊರೇಟ್ ಕಂಪನಿಗಳಿಗೆ ನೀಡಲು ರಾಜ್ಯ ಸರ್ಕಾರ ಮುಂದಾಗಿದ್ದು, 13 ಹಳ್ಳಿಗಳ ಪೈಕಿ 3ನ್ನು ಬಿಟ್ಟು, ಉಳಿದ 10 ಹಳ್ಳಿಗಳಿಗೆ ಅಂತಿಮ ಅಧಿಸೂಚನೆಯನ್ನೂ ಹೊರಡಿಸಿದೆ!

ಸರ್ಕಾರದ ಈ ಆತುರದ ನಿರ್ಧಾರದ ವಿರುದ್ಧ ರೈತರು ಹಾಗೂ ರೈತ ಪರ ಹೋರಾಟ ಗಾರರು ತಿರುಗಿ ಬಿದ್ದಿರುವುದು ಗೊತ್ತೇ ಇದೆ. ಫೈನಲ್ ನೋಟಿಫಿಕೇಷನ್ ಬಂದ್ಮೇಲೆ ರೈತರು ಸುಮ್ಮನೆ ಇರೋದಕ್ಕೆ ಆಗೋದಿಲ್ಲ, ರೈತರಿಗೆ ಏನಾದ್ರೂ ಆದ್ರೆ ನಾವು ಅವರ ಜೊತೆ ನಿಲ್ಲಬೇಕಲ್ವಾ ಎಂದು ಪ್ರಕಾಶ್ ರೈ ಹೇಳಿದ್ದಾರೆ. ಇದೀಗ ಉಂಟಾಗುತ್ತಿರುವ ಭೂಸ್ವಾಧೀನ ಪ್ರಕ್ರಿಯೆ ಸಿದ್ದರಾಮಯ್ಯನವರಿಗೆ ಗೊತ್ತಿಲ್ಲದೆ ಇರುವ ವಿಷಯವೇನೂ ಅಲ್ಲ.

ಇದು ಮೂರೂವರೆ-ನಾಲ್ಕು ವರ್ಷಗಳಿಂದ ನಡೆಯುತ್ತಿರುವ ಹೋರಾಟ. ಆಗ ಬೇರೆ ಸರ್ಕಾರವಿತ್ತು. ಸಿದ್ದರಾಮಯ್ಯನವರು ವಿರೋಧ ಪಕ್ಷದಲ್ಲಿದ್ದರು. ಅವಾಗ ಹೋರಾಟ ನಡೆಯುತ್ತಿರುವ ಸ್ಥಳಕ್ಕೆ ಬಂದಿದ್ದರು. ರೈತರಿಗೆ



ಅನ್ಯಾಯ ಆಗುತ್ತಿದೆ..ನಾನು ಅಧಿಕಾರಕ್ಕೆ ಬಂದ್ಮೇಲೆ ಸರಿ ಮಾಡ್ತೇನೆ ಎಂದು ಹೇಳಿದ್ದರು! ಅದನ್ನೀಗ ನಾವು ಅವರಿಗೆ ನೆನಪಿಸಿದ್ದೇವೆ!! ಫೈನಲ್ ನೋಟಿಫಿಕೇಷನ್ ಬಂದಿದೆ. ಅದನ್ನ ಡಿನೋಟಿಫಿಕೇಷನ್ ಮಾಡ್ಬೇಕು ಎಂದು ಒತ್ತಡ ಹೇರಿದ್ದೇವೆಭಿ ಎಂದೂ ಪ್ರಕಾಶ್ ರೈ ತಿಳಿಸಿದ್ದಾರೆ.

ಶುಕ್ರವಾರ, 4ನೇ ತಾರೀಖು ನಮಗೆ ಅಂದರೆ ರೈತರ ಜೊತೆ ಸಿಎಂ ಸಿದ್ದರಾಮಯ್ಯ ಮೀಟಿಂಗ್ ನಿಗದಿ ಮಾಡಿದಾರೆ. ನಾವು ಸಭೆಗೆ ಬರ್ತೇವೆ. ಅಂದು ಡಿನೋಟಿಫಿಕೇಷನ್ ಬಗೆಗಿನ ಸಾಧ್ಯಾಸಾಧ್ಯತೆಗಳನ್ನ ಅವರ ಬಳಿ ಹೇಳ್ತೇವೆ. ಸಿದ್ದರಾಮಯ್ಯನವರು ನಮ್ಮ ಸಮಸ್ಯೆಯನ್ನ ಕೇಳಿದಾರೆ. ಸ್ಪಂದಿಸಿದ್ದಾರೆ. ಆದರೆ ನಾಲ್ಕನೇ ತಾರೀಖು ಸಭೆ ಆಗುವವರೆಗೂ ನಮ್ಮ ಹೋರಾಟ ಮುಂದುವರಿಯುತ್ತದೆ. ಆದರೆ ಮುಖ್ಯಮಂತ್ರಿ ಪಾಸಿಟಿವ್ ಆಗಿದ್ದಾರೆ. ಜನಪರವಾಗಿದ್ದಾರೆ. ಅವರಿಗೆ ಇದು ಹೊಸ ಸಮಸ್ಯೆ ಅಲ್ಲ, ನೋಡೋಣ ಏನಾಗುತ್ತೆ ಎಂದು ಪ್ರಕಾಶ್ ರಾಜ್ ಹೇಳಿದ್ದಾರೆ. ☯


## ನಿಮ್ಮ ಸುತ್ತಮುತ್ತಲಿನ ಸುದ್ದಿ ಹಾಗೂ ಅನ್ಯಾಯ-ಭ್ರಷ್ಟಾಚಾರಗಳನ್ನು ತಿಳಿಸಿ!


ಕರ್ನಾಟಕ ರಾಜ್ಯದ ಮಹಾಜನತೆಗೆ ಇದೋ ಒಂದು ಸುವರ್ಣಾವಕಾಶ. ನಿಮ್ಮ ಸುತ್ತಮುತ್ತ ನಡೆಯುವ ಅನ್ಯಾಯ, ಅಕ್ರಮ, ಅನಾಚಾರ, ಭ್ರಷ್ಟಾಚಾರಗಳನ್ನು ಸಂಕಟ ಪಡುತ್ತಿದ್ದೀರಾ? ಹಾಗಾದರೆ; ಈ ಕೂಡಲೇ ಸವಿವರ ಸಮೇತ ಅವುಗಳನ್ನು ನಮ್ಮ ಕಛೇರಿಗೆ ಕಳುಹಿಸಿ! ನಿಮ್ಮ ಹೆಸರು, ವಿಳಾಸ, ಮೊಬೈಲ್ ನಂಬರ್ ಇತ್ಯಾದಿ ವಿವರಗಳನ್ನು ನಾವು ಅತ್ಯಂತ ಗೌಪ್ಯವಾಗಿಡುತ್ತೇವೆ. ಯಾವುದೇ ಕಾರಣಕ್ಕೂ ಅದನ್ನು ಬಹಿರಂಗಪಡಿಸುವುದಿಲ್ಲ. 'ಪೊಲೀಸ್ ನ್ಯೂಸ್' ವಾರಪತ್ರಿಕೆಯಲ್ಲಿ ಸುದ್ದಿ ಪ್ರಕಟಿಸುವ ಮೂಲಕ ಸಂಬಂಧಪಟ್ಟ ಇಲಾಖೆಗೆ ತಿಳಿಸಿ ಸೂಕ್ತ ಕಾನೂನು ಕ್ರಮ ಜರುಗಿಸಲು ಸೂಚಿಸುವ ಕೆಲಸ ಮಾಡುವ ಹೊಣೆ ನಮ್ಮದು.


**ವಿಳಾಸ : ಪೊಲೀಸ್ ನ್ಯೂಸ್, ವಾರಪತ್ರಿಕೆ**

**ನಂ. 165, 8ನೇ ಮುಖ್ಯರಸ್ತೆ, ಬಿಇಎಂಎಲ್ ಬಡಾವಣೆ, ಬಸವೇಶ್ವರನಗರ,**

**ಬೆಂಗಳೂರು-560 079. ಮೊ : 9513892666**

**ಅಂದು ಜೂನ್ 19 ಗುರುವಾರ ಸಂಜೆ ಪೊಲೀಸರ ತಂಡ ಚಾಮರಾಜನಗರ ಜಿಲ್ಲೆ ಕೊಳ್ಳೇಗಾಲ ತಾಲೂಕಿನ ಹಳೇ ಹಂಪಾಪುರ ಗ್ರಾಮದ ಸುವರ್ಣವತಿ ನದಿ (ಹೊನ್ನೊಳೆ) ದಡದ ನಿರ್ಜನ ಪ್ರದೇಶಕ್ಕೆ ದೌಡಯಿಸಿತ್ತು. ಗ್ರಾಮದ ಯುವಕನೋರ್ವ ದನ ಮೇಯಿಸುತ್ತಿದ್ದ ವೇಳೆ ನಾಯಿಗಳು ಭೂಮಿಯಲ್ಲಿ ಹೂತಿದ್ದ ಮೃತದೇಹದ ವಾಸನೆ ಹಿಡಿದು ಮಣ್ಣು ಎರಚಾಡಿ ಎಳೆದಾಡುತ್ತಿದ್ದ ವೇಳೆ ಶವದ ಮುಂಗೈ ಭೂಮಿಯಿಂದ ಹೊರಚಾಚಿರುವುದು ಕಂಡು ಗಾಬರಿಗೊಂಡು ಆತ ಪೊಲೀಸರಿಗೆ ಮಾಹಿತಿ ನೀಡಿದ್ದ. ಅಲ್ಲಿ ಮಣ್ಣಿನಡಿಯಲ್ಲಿ ಹೂತಿದ್ದ ಶವದ ಮುಂಗೈ ಹೊರ ಬಂದು ಕಾಣುತ್ತಿದ್ದದ್ದನ್ನು ಕಂಡು ಗ್ರಾಮದ ಜನತೆ ಭಯಭೀತರಾಗಿದ್ದರು. ಹಂತಕರು ಎಲ್ಲೋ ಕೊಲೆ ಮಾಡಿ ಇಲ್ಲಿ ತಂದು ಅರೆಬರೆ ಹೂತು ಹಾಕಿ ಪರಾರಿಯಾಗಿದ್ದಾರೆ ಎಂದು ಅಲ್ಲಿದ್ದವರು ಮಾತನಾಡಿಕೊಳ್ಳುತ್ತಿದ್ದರು. ಶವ ಹೂಳಲಾಗಿದ್ದ ಸುಮಾರು 20 ಮೀಟರ್ ದೂರದಲ್ಲಿ ಒಂದು ದೀಪ, ಅರಿಸಿನ ಕುಂಕುಮ, ಬಣ್ಣ ಮಿಶ್ರಿತ ದಾರ, ಕುಡಿಯುವ ನೀರಿನ ಬಾಟಲಿ ಇನ್ನಿತರ ಪೂಜಾ ಸಾಮಗ್ರಿಗಳು ಪತ್ತೆಯಾಗಿರುವುದರಿಂದ ಮಾಟ, ಮಂತ್ರ ವಾಮಾಚಾರದ ಶಂಕೆ ವ್ಯಕ್ತವಾಗಿತ್ತು. ನಡುವೆ ಯಾರೋ ದುಷ್ಕರ್ಮಿಗಳು ಮಹಿಳೆಯನ್ನು ಅತ್ಯಾಚಾರ ವ್ಯಸಗಿ ಕೊಲೆ ಮಾಡಿ ತಂದು ಹೂತು ಹಾಕಿದ್ದಾರೆ ಎಂಬ ಅನುಮಾನವೂ ಅಲ್ಲಿದ್ದವರಲ್ಲಿ ಕಾಡುತ್ತಿತ್ತು. ಆದರೆ ಮಣ್ಣಿನಡಿಯಲಿ ಹೂತು ಹಾಕಿದ್ದ ಶವವನ್ನು ಪೊಲೀಸರು ಹೊರ ತೆಗೆದಾಗಲೆ ಅಲ್ಲಿ ಕೊಲೆಯಾಗಿರುವುದು ಮಹಿಳೆ ಎಂದು ತಿಳಿದದ್ದು. ಹೌದು ಅಲ್ಲಿ ಅಕ್ರಮ ಸಂಬಂಧಕ್ಕೆ ಹೆಣ ಉರುಳಿತ್ತು. ಹಾದಿ ತಪ್ಪಿದ ಗೃಹಿಣಿಯೊಬ್ಬಳುಗಂಡ, ಮಕ್ಕಳನ್ನು ಬಿಟ್ಟು ಪರಪುರುಷನ ಸಂಘ ಮಾಡಿದ ತಪ್ಪಿಗೆ ಪ್ರಿಯಕರನಿಂದಲೇ ಹೆಣವಾಗಿ ಹೋಗಿದ್ದಳು.**










# ಸುವರ್ಣವತಿ ನದಿ (ಹೊನ್ನೊಳೆ) ತೀರದಲ್ಲಿ ಕೊಲೆ!
# ಅಕ್ರಮ ಸಂಬಂಧಕ್ಕೆ ಗೆಣೆಕಾರನಿಂದಲೇ ಹೆಣವಾದ ಸೋನಾಕ್ಷಿ!!


ಕೊಲೆಯಾದ ಸೋನಾಕ್ಷಿ

**ಚಾಮರಾಜನಗರ**
✍ ಎಸ್. ಸ್ವಾಮಿ

**ಚಾ**ಮರಾಜನಗರ ಜಿಲ್ಲೆ ಕೊಳ್ಳೇಗಾಲ ಪಟ್ಟಣದ ಕೊಳ್ಳೇಗಾಲ ಮೋಳೆ(ಉಪ್ಪಾರ ಬಡಾವಣೆ)ಯ ವಿಜಯ್ ಕುಮಾರ್ ಪತ್ನಿ ಸೋನಾಕ್ಷಿ (29) ಎಂಬಾಕೆಯೇ ಪ್ರಿಯಕರನಿಂದ ಅಮಾನುಷವಾಗಿ ಕೊಲೆಯಾಗಿ ಅನಾಥ ಹೆಣವಾಗಿ ಹೋದ ಗೃಹಿಣಿ. ಅದೇ ಬಡಾವಣೆಯ ನಂಜಯ್ಯನ ಮಗ ಮಾದೇಶ ಅಲಿಯಾಸ್ ಮಹೇಶ್ ಬಂಧಿತ ಆರೋಪಿ.

ಪಟ್ಟಣದ ಉಪ್ಪಾರ ಬಡಾವಣೆಯ ಕುಮಾರ್ ಎಂಬುವವರ ಮಗಳಾದ ಸೋನಾಕ್ಷಿ ಅದೇ ಬಡಾವಣೆಯಲ್ಲಿರುವ ಸೋದರಮಾವ ವಿಜಯ್ ಕುಮಾರ್‌ನನ್ನು ಮದುವೆಯಾಗಿದ್ದಳು. ಗಂಡ ವಿಜಯ್ ಕುಮಾರ್ ಕೂಲಿ ಕೆಲಸ ಮಾಡಿಕೊಂಡಿದ್ದ ಈಕೆ ಗೃಹಿಣಿಯಾಗಿದ್ದಳು. ಪ್ರಾರಂಭದಲ್ಲಿ ಅನ್ಯೋನ್ಯವಾಗಿದ್ದ ಇವರಿಗೆ ಒಂದು ಹೆಣ್ಣು ಒಂದು ಗಂಡು ಇಬ್ಬರು ಮಕ್ಕಳಿದ್ದಾರೆ. ಗಂಡ ವಿಜಯ್ ಕುಮಾರ್ ತುಂಬ ಮೃದು ಸ್ವಭಾವದ ಮನುಷ್ಯ ಆದರೆ ಪತ್ನಿಯ ಅಗತ್ಯಗಳನ್ನು ಪೂರೈಸುವಲ್ಲಿ ವಿಫಲನಾಗಿದ್ದ ಎಂದು ಹೇಳಲಾಗುತ್ತಿದೆ. ಹಾಗಾಗಿ ಸೋನಾಕ್ಷಿ ಹಾದಿ ತಪ್ಪಿದ್ದಳುಯ. ಗಂಡನಿಂದ ಸಿಗದಿದ್ದನ್ನು ಪೂರೈಸಿಕೊಳ್ಳಲು ಪರಪುರುಷರ ಸಾಂಗಾತ್ಯಕ್ಕಾಗಿ ಹಾತೊರೆಯುತ್ತಿದ್ದಳು. ಸೋದರಮಾವ ವಿಜಯ್ ಕುಮಾರ್‌ನನ್ನು ಮದುವೆಯಾಗಿ ಎರಡು ಮಕ್ಕಳ ಜೊತೆ ಸುಖವಾಗಿ ಬಾಳಬೇಕಿದ್ದ, 15 ವರ್ಷದ ಕಾಲ ಗಂಡನೊಂದಿಗೆ ಎಲ್ಲವನ್ನು ಹಂಚಿಕೊಂಡಿದ್ದ ಸೋನಾಕ್ಷಿಗೆ ಊರಿನ ಮತ್ತೊಬ್ಬನ ಆಕರ್ಷಣೆಯಾಗಿದೆ. ಇದು ಯಾವ ಮಟ್ಟಿಗೆ ಅಂದರೆ ಆತನ ಜೊತೆ ಓಡಿ ಹೋಗಿ ಜೊತೆಯಲ್ಲಿದ್ದೇ ತೀರಬೇಕು ಅನ್ನುವ ಮಟ್ಟಿಗೆ. ಅದಕ್ಕಾಗಿ ತಮ್ಮದೇ ಬಡಾವಣೆಯ ಮಹೇಶ್ ಎಂಬಾತನೊಡನೆ ಅಕ್ರಮ ಸಂಬಂಧದ ಬಲೆಯಲ್ಲಿ ಸಿಲುಕಿದ್ದಾಳೆ.

### ಆತ ಮಾದೇಶ ಅಲಿಯಾಸ್ ಮಹೇಶ್

ಇದೇ ಬಡಾವಣೆಯ ನಂಜಯ್ಯನ ಮಗ ಸುಮಾರು 38 ವರ್ಷದ ಮಾದೇಶ ಅಲಿಯಾಸ್ ಮಹೇಶ್ ಪಕ್ಕದ ಗ್ರಾಮ ಹಳೇ ಹಂಪಾಪುರದ ಕಾವೇರಿ ಹಾಗೂ ಸುವರ್ಣವತಿ ನದಿ ಪಾತ್ರದಲ್ಲಿ ಅಕ್ರಮ ಮರಳು ಸಾಗಾಟ ಮಾಡುತ್ತಿದ್ದ. ಮೊದಲೆಲ್ಲಾ ಎತ್ತಿನ ಗಾಡಿಗಳಲ್ಲಿ ಮರಳು ಸಾಗಿಸುತ್ತಿದ್ದ ಕೈತುಂಬ ಸಂಪಾದನೆ ಮಾಡುತ್ತಿದ್ದ. ನಂತರ ಸರ್ಕಾರ ಕಟ್ಟುನಿಟ್ಟಿನ ಕ್ರಮ ಕೈಗೊಂಡ ನಂತರ ಕದ್ದು ಮುಚ್ಚಿ ಬೈಕಿನಲ್ಲಿ ಮರುಳು ದಂಧೆ ಮಾಡಿಕೊಂಡು ಜೀವನ ಸಾಗಿಸುತ್ತಿದ್ದ. ಮಾದೇಶ ಅಕ್ರಮ ಮರಳು ಸಾಗಾಟದಿಂದ ಅತಿ ಬೇಗನೆ ದುಡ್ಡು ಕಂಡಾತ. ಈತ ಮರಳು ದಂಧೆಯ ಜೊತೆ ಕಬ್ಬು ಕಟಾವಿನ ಕೆಲಸಕ್ಕೂ ಹೋಗಿ ಸಂಪಾದನೆಯನ್ನು ಮಾಡುತಿದ್ದ. ಮಹೇಶನಿಗೆ ಟಗರಪುರ ಮೋಳೆಯ ಯುವತಿಯೊಡನೆ ವಿವಾಹವಾಗಿ ಮಕ್ಕಳಿದ್ದಾರೆ. ಆದರೂ ಮಹೇಶ ತನ್ನ ಹೆಂಡತಿಯಲ್ಲಿಲ್ಲದಿದ್ದನ್ನು ಇವಳಲ್ಲಿ ಅದೇನು ಕಂಡನೋ ಸೋನಾಕ್ಷಿಯನ್ನು ಗಾಢವಾಗಿ ಹಚ್ಚಿಕೊಂಡಿದ್ದ, ಅವಳಿಗಾಗಿ ಏನು ಬೇಕಾದರೂ ಮಾಡಲು ಸಿದ್ದನಿದ್ದ. ಸೋನಾಕ್ಷಿಯೂ ಅಷ್ಟೆ ಪ್ರಾರಂಭದಲ್ಲಿ ಮಹೇಶ್‌ನನ್ನು ಕಂಡರೆ ಹಾತೊರೆಯುತ್ತಿದ್ದಳು. ಇವನಿಗಾಗಿ ಸೋನಾಕ್ಷಿ ಪದೇ ಪದೇ ಗಂಡನ ಜೊತೆ ಭಿನ್ನಾಭಿಪ್ರಾಯ ಮಾಡಿಕೊಂಡು ಆಗ್ಗಿಂದಾಗೆ ಮನೆಯಿಂದ ನಾಪತ್ತೆಯಾಗುವ ಚಾಳಿ ಬೆಳೆಸಿಕೊಂಡಿದ್ದಳು.


ಎಸ್ಪಿ ಡಾ. ಬಿ.ಟಿ. ಕವಿತಾ


ಡಿವೈಎಸ್ಪಿ ಧರ್ಮೇಂದ್ರ

ಎರಡು ಮೂರು ಬಾರಿ ಗಂಡ ಮಕ್ಕಳನ್ನು ಬಿಟ್ಟು ನಾಪತ್ತೆಯಾಗಿದ್ದಳು. ಸೋನಾಕ್ಷಿ ಈ ಹಿಂದೆ 2013ರಲ್ಲಿ ನಾಪತ್ತೆಯಾಗಿದ್ದ ವೇಳೆ ಈ ಸಂಬಂಧ ಪಟ್ಟಣ ಪೊಲೀಸ್ ಠಾಣೆ ಮಲ್ಲೆ ಮಹದೇಶ್ವರ ಬೆಟ್ಟ ಪೊಲೀಸ್ ಠಾಣೆಗಳಲ್ಲಿ ಪ್ರಕರಣಗಳು ದಾಖಲಾಗಿ ಪೊಲೀಸರು ಪತ್ತೆಹಚ್ಚಿ ಸೋನಾಕ್ಷಿಯನ್ನು ಕರೆತಂದು ಗಂಡನ ಜೊತೆ ಕಳುಹಿಸಿಕೊಟ್ಟಿದ್ದರು. 2025ರ ಫೆಬ್ರುವರಿ 25ರಲ್ಲಿ ಸೋನಾಕ್ಷಿ ಮತ್ತೆ ನಾಪತ್ತೆಯಾಗಿದ್ದಳು. ಆಕೆಯ ಪತಿ ವಿಜಯ್ ಕುಮಾರ್ ಪತ್ನಿ ಕಾಣೆಯಾಗಿರುವುದಾಗಿ ದೂರು ನೀಡಿದ್ದರು. ಈ ವೇಳೆ ತುಂಬಾ ದಿನಗಳವರೆಗೆ ಯಾರ ಕಣ್ಣಿಗೂ ಕಾಣದಿದ್ದರಿಂದ ಕುಟುಂಬಸ್ಥರು ಸೋನಾಕ್ಷಿಯನ್ನು ಎಲ್ಲೋ ಸತ್ತು ಹೋಗಿರಬೇಕು ಎಂದು ತಿಳಿದುಕೊಂಡಿದ್ದರು. ಆದರೆ ಪೊಲೀಸರು ಸಿ.ಡಿ.ಆರ್. ಮೂಲಕ ಮಾದೇಶ್ ಸೋನಾಕ್ಷಿಯ ಜೊತೆ ನಿರಂತರ ಸಂಪರ್ಕದಲ್ಲಿರುವುದನ್ನು ಪತ್ತೆಹಚ್ಚಿ ಆತನ ಮೂಲಕ ಸೋನಾಕ್ಷಿ ಇರುವ ಸ್ಥಳದ ಬಗ್ಗೆ ಮಾಹಿತಿ ಪಡೆದು ಜೂನ್ 12 ರಂದು ಟಿ. ನರಸೀಪುರದಲ್ಲಿದ್ದ ಸೋನಾಕ್ಷಿಯನ್ನು ಪತ್ತೆಹಚ್ಚಿ ಕರೆತಂದಿದ್ದರು. ಸೋನಾಕ್ಷಿಯನ್ನು ಕರೆತಂದ ಪೊಲೀಸರು ವಿಚಾರಣೆ ನಡೆಸಿದಾಗ ಗಂಡನ ನಡುವೆ ಹೊಂದಾಣಿಕೆ ಇಲ್ಲದ ಕಾರಣ ಸ್ವತಂತ್ರವಾಗಿ ಬದುಕಬೇಕೆಂಬ ಉದ್ದೇಶದಿಂದ ನಾನು ಹೊರಗೆ ಹೋಗಿ ನರಸೀಪುರದಲ್ಲಿ ಹೂವು ಮಾರಿ ಜೀವನ ನಡೆಸುತ್ತಿದ್ದುದ್ದಾಗಿ ಹೇಳಿಕೊಂಡಿದ್ದಳು. ಈ ವೇಳೆ ಗಂಡನ ಜೊತೆ ಹೋಗುವಂತೆ ಪೊಲೀಸರು ಬುದ್ಧಿವಾದ ಹೇಳಿದಾಗ ನಾನು ಗಂಡನ ಜೊತೆ ಹೋಗುವುದಿಲ್ಲಾ ಎಂದು ಹಠ ಹಿಡಿದು ಬಳಿಕ ಒಲ್ಲದ ಮನಸ್ಸಿನಿಂದ ಒಪ್ಪಿಕೊಂಡು ಠಾಣೆಯಿಂದ ಹೊರಬಂದ ಸೋನಾಕ್ಷಿ ಎಲ್ಲಿ ಹೋಗಿದ್ದಾಳೆ ಎಂದು ಅವರ ಕುಟುಂಬದವರಿಗೂ ತಿಳಿದಿರಲಿಲ್ಲಾ. ಜೂನ್ 12ರಂದು ಹೊರ ಹೋದ ಸೋನಾಕ್ಷಿಗೆ ಮಹೇಶ್ ಪಟ್ಟಣದ ಬಸ್ತೀಪುರದ ನಾಯಕರ ಬಡಾವಣೆಯಲ್ಲಿ ಬಾಡಿಗೆ ಮನೆ ಮಾಡಿ ಇರಿಸಿದ್ದ. ಮಹೇಶ ಆಗಾಗ ಬಸ್ತಿಪುರದಲ್ಲಿರುವ


ಆರೋಪಿ ಮಾದೇಶ

ಸೋನಾಕ್ಷಿಯ ಮನೆಗೆ ಬಂದು ಹೋಗುತ್ತಿದ್ದ. ಇಬ್ಬರು ಗುಟ್ಟಾಗಿ ಅಕ್ರಮ ಸಂಬಂಧ ಮುಂದುವರಿಸಿದ್ದರು.

### ಬಾಬು ಅಲಿಯಾಸ್ ಚಿಕ್ಕಬಾಬು

ಆದರೆ ಸೋನಾಕ್ಷಿ ಬರುತ್ತಾ ಬರುತ್ತಾ ಮಾದೇಶನಲ್ಲದೇ ಅದೇ ಬಡಾವಣೆಯ ಕೆಂಚಶೆಟ್ಟಿ ಮಗ ಬಾಬು ಅಲಿಯಾಸ್ ಚಿಕ್ಕಬಾಬು ಎಂಬ ಮತ್ತೊಬ್ಬ ಪ್ರಿಯಕರ ಬಾಬು ಎಂಬವನ ಜೊತೆಯಲ್ಲಿಯೂ ಕೂಡ ಲವ್ವಿಡವ್ವಿ ಶುರುವಿಟ್ಟು ಕೊಂಡಿದ್ದಳು. ಉಪ್ಪಾರಮೋಳೆ ಬಡಾವಣೆಯ ಹೊರಹೊಲಯದಲ್ಲಿ 'ಕೆ.ಎಂ.ಬಿ' ಮಣ್ಣಿನ ಇಟ್ಟಿಗೆ ಫ್ಯಾಕ್ಟರಿ ನಡೆಸುತ್ತಿರುವ ಬಾಬು ಇವಳ ಜೊತೆಗಿನ ಅಕ್ರಮ ಸಂಬಂಧಕ್ಕಾಗಿಯೇ ಟಿ. ನರಸೀಪುರದಲ್ಲಿ ಮನೆ ಮಾಡಿದ್ದನು. ಅಲ್ಲಿಗೆ ವಾರಕ್ಕೆ ಎರಡು ದಿನ ಹೋಗಿ ಬರುತ್ತಿದ್ದಳು ಮಹೇಶನಿಗೆ ಅನುಮಾನ ಬಾರದ ಹಾಗೆ ತವರು ಮನೆಗೆ ಹೋಗುತ್ತೇನೆ ಎಂದು ಹೇಳಿ ಎರಡು ಕಡೆಯು 2-2 ದಿನ ಮೇಂಟೇನ್ ಮಾಡುತ್ತಿದ್ದಳು. ಸೋನಾಕ್ಷಿ ಬಾಬು ಜೊತೆಗಿನ ಅಕ್ರಮ ಸಂಬಂಧದ ವಿಚಾರ ಮಹೇಶನಿಗೂ ತಿಳಿದಿತ್ತು. ಆದರೂ ಸೋನಾಕ್ಷಿಯನ್ನು ತನ್ನ ಹೆಂಡತಿಗಿಂತಲೂ ಚೆನ್ನಾಗಿ ನೋಡಿಕೊಳ್ಳುತ್ತಿದ್ದ. ಆದರೆ ಸೋನಾಕ್ಷಿಗೆ ತನ್ನ ಮತ್ತೊಬ್ಬ ಪ್ರಿಯಕರ ಬಾಬುವಿನ ಮೇಲೆ ಹೆಚ್ಚು ಒಲವಿತ್ತು. ಮಹೇಶ ಎಷ್ಟೇ ಚೆನ್ನಾಗಿ ನೋಡಿಕೊಂಡರೂ ಆತನ ಜೊತೆ ನಿರಂತರವಾಗಿ ಕಿರಿಕಿರಿ ಮಾಡುತ್ತಿದ್ದಳು.


ಸೋನಾಕ್ಷಿ ಬಾಬು ಜೊತೆಗಿನ ಅಕ್ರಮ ಸಂಬಂಧದ ವಿಚಾರ ತಿಳಿದಿದ್ದ ಮಹೇಶ ಆಗಾಗ ಜಗಳವಾಡುತ್ತಿದ್ದ. ಅದರಂತೆ ಹಂತಕ ಮಾದೇಶ ಕೊಲೆಯಾದ ಸೋನಾಕ್ಷಿಯ ನಡುವೆ ಕಿತ್ತಾಟಗಳು ಮಿತಿ ಮೀರುತ್ತ ಹೋಗುತ್ತದೆ. ಇವರಿಬ್ಬರು ಇನ್ನು ಜೊತೆಯಿರಲು ಸಾಧ್ಯವಿಲ್ಲ ಅನ್ನುವ ಮಟ್ಟಿಗೆ ಜಗಳ ತಾರಕಕ್ಕೆ ಏರುತ್ತದೆ. ನಿನ್ನಿಂದ ತಾನೆ ನಾನು ಪೊಲೀಸ್ ಠಾಣೆ ಮೆಟ್ಟಲು ಏರುವ ಹಾಗೆ ಆಯಿತು ಎಂದು ತಗಾದೆ ತೆಗೆದು ಜಗಳ ಮಾಡುತ್ತಿದ್ದಳು. ನಿನ್ನಿಂದ ನಾನು ಸಾಯುತ್ತೇನೆ ಎಂದು ಆಗಾಗ್ಗೆ ಬ್ಲಾಕ್‌ಮೇಲ್ ಮಾಡಿ ಮಾದೇಶನನ್ನ ಬೆದರಿಸುತಿದ್ದಳು.

ಇತ್ತ ಸೋನಾಕ್ಷಿ ಹಾಗೂ ಮಹೇಶ ಇಬ್ಬರ ಅಕ್ರಮ ಸಂಬಂಧದ ವಿಚಾರ ಮಹೇಶನ ಪತ್ನಿಗೂ ಗೊತ್ತಿತ್ತು. ಸೋನಾಕ್ಷಿ ಜೊತೆಯಿದ್ದ ಖಾಸಗಿ ಕ್ಷಣಗಳ ಫೋಟೋಗಳನ್ನು ಮಹೇಶ್ ತನ್ನ ಮೊಬೈಲ್‌ನಲ್ಲಿ ಸೆರೆ ಹಿಡಿದುಕೊಂಡಿದ್ದ. ಇದನ್ನು ಒಮ್ಮೆ ಆಕಸ್ಮಿಕವಾಗಿ ಮಹೇಶನ ಪತ್ನಿ ನೋಡಿಬಿಟ್ಟಿದ್ದಾಳೆ ಕೂಡಲೇ ಮೊಬೈಲ್ ಒಡೆದು ಹಾಕಿ ರಂಪಾಟ ಮಾಡಿದ್ದಳು.

ಇದೇ ಜೂ. 15ರಂದು ಭಾನುವಾರ ಸಂಜೆ 7:30ರ ಸಮಯದಲ್ಲಿ ಮಹೇಶ ಬಸ್ತೀಪುರದಲ್ಲಿರುವ ಸೋನಾಕ್ಷಿಯ ಮನೆಗೆ ಬಂದು ಕದ ತಟ್ಟಿದ್ದಾನೆ. ಸೋನಾಕ್ಷಿ ಬಾಗಿಲು ತೆಗೆದು ಒಳ ಹೋಗುತ್ತಿದ್ದಂತೆ ಮತ್ತೆ ಕ್ಯಾತೆ ತೆಗೆದಿದ್ದಾಳೆ. ನಿನ್ನಿಂದ ತಾನೆ ನಾನು ಪೊಲೀಸ್ ಠಾಣೆ ಮೆಟ್ಟಲೇರುವ ಹಾಗಾಯಿತು, ನಾನು ನನ್ನ ಗಂಡನ ಮನೆಗೆ ಹೋಗದೆ ತಾಯಿಯ ಮನೆಗೂ ಹೋಗದ ಹಾಗೆ ಆಯಿತು. ಈಗ ನಾನು ಮತ್ತೆ ಪೊಲೀಸ್ ಠಾಣೆಗೆ ಹೋದರೆ ನನ್ನನ್ನು ಮಹಿಳಾ ಸಾಂತ್ವಾನ ಕೇಂದ್ರಕ್ಕೆ ಕಳುಹಿಸುತ್ತಾರೆ. ನಿನ್ನಿಂದ ನನ್ನ ಜೀವನವೇ ಹಾಳಾಗಿ ಹೋಯಿತು. ನನ್ನ ಗಂಡ ಮಕ್ಕಳನ್ನು ಬಿಟ್ಟು ಬಂದೆ ಎಂದು ರಂಪಾಟ ಮಾಡುತ್ತಿದ್ದಳು. ಈ ವೇಳೆ ಇಬ್ಬರಿಗೂ ಮಾತಿಗೆ ಮಾತು ಬೆಳೆದು ಕುಪಿತಗೊಂಡ ಮಹೇಶ ಸೋನಾಕ್ಷಿಯ ಕಪಾಳಕ್ಕೆ ಬಾರಿಸಿ ಅಲ್ಲಿಂದ ಹೊರಟು ಹೋಗಿದ್ದಾನೆ.

### ಸಾವಿಗೆ ಮೂಹೂರ್ತ ಫಿಕ್ಸ್

ಇದರಿಂದ ವಿಚಲಿತನಾದ ಹಂತಕ ಮಾದೇಶ ಸೋನಾಕ್ಷಿಯ ಸಾವಿಗೆ ಮೂಹೂರ್ತ ಫಿಕ್ಸ್ ಮಾಡಿಯೇ ಬಿಟ್ಟ, ಮಾದೇಶ ರಾತ್ರಿಯೆಲ್ಲಾ ತಲೆಕೆಡಿಸಿಕೊಂಡು ಈಕೆ ಇದ್ದರೆ ನನಗೆ ತಲೆನೋವು ತಪ್ಪಿದ್ದಲ್ಲ ಹೇಗಾದರೂ ಮಾಡಿ ಇವಳನ್ನು ಮುಗಿಸಬೇಕು ಎಂದು ಯೋಚಿಸಿ ಸೋನಾಕ್ಷಿಯ ಕೊಲೆಗೆ ಸ್ಕೆಚ್ ಹಾಕುತ್ತಾನೆ. ಅದಕ್ಕಾಗಿ ತಾನು ಹಿಂದೆಲ್ಲ ಅಕ್ರಮವಾಗಿ ಮರಳು ಸಂಗ್ರಹ ಮಾಡುತ್ತಿದ್ದ ಹಳೇ ಹಂಪಾಪುರ ಬಳಿಯ ಹೊನ್ನೊಳೆ ತಟದ ನಿರ್ಜನ ಪ್ರದೇಶವೇ ಸರಿ ಎಂದು ನಿರ್ಧರಿಸಿ 16ರಂದು ಸೋಮವಾರ ಬೆಳಗಿನ ಜಾವ 3:00 ಗಂಟೆಗೆ ವಾಪಸ್ ಬಂದು ಮತ್ತೆ ಕದ ತಟ್ಟಿದ್ದಾನೆ. ಆವಾಗಲೂ ಸೋನಾಕ್ಷಿ ಎದ್ದು ಬಂದು ಬಾಗಿಲು ತೆಗೆದಿದ್ದಾಳೆ. ಈಗಲೂ ಮತ್ತೆ ಜಗಳ ಮುಂದುವರೆಸಿದ್ದಾರೆ. ಈ ವೇಳೆ ಮಹೇಶ ಇದು ನಾನು ಮಾಡಿದ ಮನೆ ತಾನೆ, ನಡೆ ನಿಮ್ಮ ತಾಯಿಯ ಮನೆಗೆ ಬಿಟ್ಟುಕೊಡುತ್ತೇನೆ ಎಂದು ಮನೆ ಖಾಲಿ ಮಾಡಿಸಿಕೊಂಡು ಬೈಕ್‌ನಲ್ಲಿ ಕೂರಿಸಿಕೊಂಡು ಹೊರಟಿದ್ದಾನೆ. ನೇರವಾಗಿ ಕೊಳ್ಳೇಗಾಲ ಮೋಳೆಗೆ ಹೋಗದೆ, ಬಾಪುನಗರ, ಶಂಕನಪುರ, ಹೊಸ ಹಂಪಾಪುರ ಮಾರ್ಗವಾಗಿ ಹಳೇ ಹಂಪಾಪುರದ ಕಡೆಗೆ ಕರೆತಂದಿದ್ದಾನೆ. ಹಳೇ ಹಂಪಾಪುರದ ಬಳಿ ಬರುತ್ತಿದ್ದಂತೆ ಅನುಮಾನ ಗೊಂಡ ಸೋನಾಕ್ಷಿ ಎಲ್ಲಿಗೆ ಕರೆದುಕೊಂಡು ಹೋಗುತ್ತಿದ್ದೀಯಾ ಬೈಕ್ ನಿಲ್ಲಿಸು ಎಂದು ತಗಾದೆ ತೆಗೆದಿದ್ದಾಳೆ. ಮಹೇಶ್ ಬೈಕ್ ನಿಲ್ಲಿಸಿ ಸಮಾಧಾನ ಮಾಡಿ ಮತ್ತೆ ಬೈಕ್ ಏರಿಸಿಕೊಂಡು ಸುವರ್ಣವತಿ ನದಿಯ ನಿರ್ಜನ ಪ್ರದೇಶದ ಕಡೆ ಕರೆದುಕೊಂಡು ಬಂದಿದ್ದಾನೆ. ಅಲ್ಲಿ ಮತ್ತೆ ಇಬ್ಬರಿಗೂ ಜೋರಾಗಿ ಜಗಳ ನಡೆದಿದೆ. ಈ ವೇಳೆ ಮಹೇಶ ಸೋನಾಕ್ಷಿಯ ತಲೆ ಹಾಗೂ ಕೆನ್ನೆಗೆ ಬಲವಾಗಿ ಬಡಿದಿದ್ದಾನೆ ಮಹೇಶನ ಬಲವಾದ ಹೊಡೆತಕ್ಕೆ ಸೋನಾಕ್ಷಿ ಅಲ್ಲಿಯೇ ಕುಸಿದು ಬಿದ್ದು ಉಸಿರು ಚೆಲ್ಲಿದ್ದಾಳೆ. ಸೋನಾಕ್ಷಿ ಸತ್ತಿರುವುದನ್ನು ಖಾತರಿ ಪಡಿಸಿಕೊಂಡ ಮಹೇಶ ನದಿಯ ದಡದಲ್ಲಿ ಎರಡು ಅಡಿ ಆಳ ಮರಳನ್ನು ಬಗೆದು ಗುಂಡಿ ತೆಗೆದು ಸೋನಾಕ್ಷಿಯ ಶವವನ್ನು ಅದೇ ಗುಂಡಿಗೆ ಹಾಕಿ ನಂತರ ಅಲ್ಲಿಯೇ ಮರಳು ಮುಚ್ಚಿ, ಬಳಿಕ ಯಾರಿಗೂ ಅನುಮಾನ ಬಾರದಂತೆ ಮನೆ ಸೇರಿಕೊಂಡಿದ್ದಾನೆ. ಉಪ್ಪಾರಮೋಳೆ ಬಡಾವಣೆಯಲ್ಲಿ ಜನರ ಮಧ್ಯೆಯೇ ಓಡಾಡಿಕೊಂಡು ತನ್ನ ಅಕ್ಕನ ಮಗಳ ಹಸೆಮಣೆ ಶಾಸ್ತ್ರದಲ್ಲಿಯೂ ಭಾಗಿಯಾಗಿದ್ದನ್ನಲ್ಲದೆ, ಅತ್ತ ಸೋನಾಕ್ಷಿ ಮೃತ ದೇಹ ಹೂತಿಟ್ಟ ಸ್ಥಳವನ್ನು ನಿತ್ಯ ರಾತ್ರಿ ಹೋಗಿ ನೋಡಿಕೊಂಡು ಬರುತ್ತಿದ್ದನು.


ಸಿಪಿಐ ಶಿವಮಾದಯ್ಯ


ಪಿಎಸ್‌ಐ ಬಿ.ವಿ. ವರ್ಷಾ

ಆದರೆ ಸೋನಾಕ್ಷಿಯ ಮೃತದೇಹ ಜೂ. 19 ರಂದು ಗುರುವಾರ ತಾಲೂಕಿನ ಹಳೇ ಹಂಪಾಪುರ ಗ್ರಾಮದ ಸುವರ್ಣವತಿ ನದಿ ದಡದ ನಿರ್ಜನ ಪ್ರದೇಶದಲ್ಲಿ ಹೂತು ಹಾಕಿದ್ದ ಸ್ಥಿತಿಯಲ್ಲಿ ಪತ್ತೆಯಾಗಿತ್ತು. ಅಂದು ಶಶಿಕುಮಾರ್ ಎಂಬುವವರು ದನ ಮೇಯಿಸುತ್ತಿದ್ದ ವೇಳೆ ನಾಯಿಗಳು ಭೂಮಿಯಲ್ಲಿ ಹೂತಿದ್ದ ಹೆಣದ ವಾಸನೆ ಹಿಡಿದು ಮಣ್ಣು ಎರಚಾಡಿ ಎಳೆದಾಡುತ್ತಿದ್ದುದ್ದು ಕಂಡು ತಕ್ಷಣ ಅಲ್ಲಿಗೆ ಹೋಗಿ ನೋಡಿದಾಗ ಶವದ ಮುಂಗೈ ಭೂಮಿಯಿಂದ ಹೊರಚಾಚಿರುವುದು ಕಾಣಿಸಿತ್ತು. ಶಶಿಕುಮಾರ್ ಅವರು ಗೃಹ ರಕ್ಷಕ ದಳದಲ್ಲಿ ಕಾರ್ಯನಿರ್ವಹಿಸುತ್ತಿದ್ದು ನಿನ್ನೆ ತಮ್ಮ ದನಗಳನ್ನು ಮೇಯಿಸಲು ಸುವರ್ಣವತಿ ನದಿಯ ನಿರ್ಜನ ಪ್ರದೇಶದ ಕಡೆ ತೆರಳಿದ್ದರು. ಈ ವೇಳೆ ಶಶಿಕುಮಾರ್ ಶವವನ್ನು ಕಂಡು ಗಾಬರಿಯಾಗಿ ಪಟ್ಟಣ ಠಾಣೆ ಪೊಲೀಸರಿಗೆ ವಿಷಯ ತಿಳಿಸಿದ್ದರು. ಸ್ಥಳಕ್ಕೆ ಚಾಮರಾಜನಗರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ಬಿ. ಟಿ. ಕವಿತಾ, ಡಿವೈಎಸ್ಪಿ ಧರ್ಮೇಂದ್ರ, ಸಿಪಿಐ ಶಿವಮಾದಯ್ಯ, ಪಿಎಸ್‌ಐ ವರ್ಷ ಭೇಟಿ ನೀಡಿ ಪರಿಶೀಲಿಸಿ ನಂತರ ಉಪ ವಿಭಾಗ ಅಧಿಕಾರಿಗಳ ಆದೇಶದ ಮೇರೆಗೆ ಮೃತದೇಹವನ್ನು ಹೊರ ತೆಗೆಸಿ ಶವದ ಮೇಲಿದ್ದ ಬಳೆ, ರಬ್ಬರ್ ಓಲೆ, ಜುಮುಕಿ, ಚಿನ್ನದ ಕರಣ ಬಟ್ಟು, ಹಾಗೂ ಕೆನ್ನೆಸರ, ಬೆಳ್ಳಿಯ ಕಾಲುಂಗುರ ಹಾಗೂ ಕಾಲು ಚೈನ್‌ನನ್ನು ಮೃತದೇಹದಿಂದ ಹೊರತೆಗೆದು ಅಂದು ತಡ ರಾತ್ರಿಯೇ ಚಾಮರಾಜನಗರದ ಸಿಮ್ಸ್ ಆಸ್ಪತ್ರೆ ಶವಾಗಾರಕ್ಕೆ ಸಾಗಿಸಿ ಶವ ಗುರುತು ಪತ್ತೆಗಾಗಿ ಇರಿಸಲಾಗಿತ್ತು.

### ವಾಮಾಚಾರ ಶಂಕೆ ವ್ಯಕ್ತವಾಗಿತ್ತು

ಶವ ಹೂಳಲಾಗಿದ್ದ ಸುಮಾರು 20 ಮೀಟರ್ ದೂರದಲ್ಲಿ ಒಂದು ದೀಪ, ಕುಡಿಯುವ ನೀರಿನ ಬಾಟಲಿ ಇನ್ನಿತರ ಪೂಜಾ ಸಾಮಗ್ರಿಗಳು ಪತ್ತೆಯಾಗಿರುವುದರಿಂದ ಮಾಟ, ಮಂತ್ರ ವಾಮಾಚಾರದ ಶಂಕೆ ವ್ಯಕ್ತವಾಗಿತ್ತು. ನಡುವೆ ಯಾರೋ ದುಷ್ಕರ್ಮಿಗಳು ಮಹಿಳೆಯನ್ನು ಅತ್ಯಾಚಾರ ವ್ಯಸಗಿ ಕೊಲೆ ಮಾಡಿ ತಂದು ಹೂತು ಹಾಕಿದ್ದಾರೋ ಎಂಬ ಅನುಮಾನವೂ ಕಾಡುತ್ತಿತ್ತು.

ಎರಡು ಅಡಿ ಆಳದ ಮರಳಿನೊಳಗೆ ಸೋನಾಕ್ಷಿಯ ಶವವನ್ನು ಹೂತಿಟ್ಟು ಮಾದೇಶ ನೇರ ಕೊಳ್ಳೆಗಾಲದ ಮೋಳೆಯಲ್ಲಿ ಅಡ್ಡಾಡಿಕೊಂಡಿರುತ್ತಾನೆ. ಯಾವಾಗ ಶವದ ಮುಂಗೈ ಹೂತಿಟ್ಟ ಜಾಗದಿಂದ ಮೇಲೆ ಬಂದಿತ್ತು ಅಂದೆ ಮಾದೇಶ ವಿಚಲಿತನಾಗಿದ್ದಾನೆ. ಮೃತದೇಹ ಪೊಲೀಸರಿಗೆ ಸಿಕ್ಕ ಕೂಡಲೇ ಮಹೇಶ್ ತನ್ನ ಹೆಂಡತಿಗೆ ಮೊಬೈಲ್ ಕೊಟ್ಟು ಊರಿಂದ ಪರಾರಿಯಾಗಿದ್ದ.

ಹೂತಿದ್ದ ಶವವನ್ನು ಹೊರ ತೆಗೆದ ಪೊಲೀಸರಿಗೆ ಶವದ ಗುರುತು ವಿಳಾಸ ಪತ್ತೆ ಸವಾಲಾಗಿತ್ತು. ಬಳಿಕ ಠಾಣೆಯ ವ್ಯಾಪ್ತಿಯಲ್ಲಿ ದಾಖಲಾಗಿದ್ದ ನಾಪತ್ತೆ ಪ್ರಕರಣದ ದಾಖಲೆಗಳನ್ನು ಪರಿಶೀಲಿಸಲಾಯಿತು. ಜೂನ್ 12 ರಂದು ಸೋನಾಕ್ಷಿಯನ್ನು ಪತ್ತೆಹಚ್ಚಿ ಗಂಡನ ಜೊತೆ ಹೋಗುವಂತೆ ಪೊಲೀಸರು ಹೇಳಿದಾಗ ನಾನು ಗಂಡನ ಜೊತೆ ಹೋಗುವುದಿಲ್ಲಾ ಎಂದು ಹಠ ಹಿಡಿದು ಬಳಿಕ ಒಲ್ಲದ ಮನಸ್ಸಿನಿಂದ ಒಪ್ಪಿಕೊಂಡು ಠಾಣೆಯಿಂದ ಹೊರಬಂದ ಸೋನಾಕ್ಷಿ ಎಲ್ಲಿ ಹೋಗಿದ್ದಾಳೆ ಎಂಬುದು ಯಾರಿಗೂ ತಿಳಿದಿರಲಿಲ್ಲಾ. ಪಟ್ಟಣದ ಬಸ್ತೀಪುರದ ನಾಯಕರ ಬಡಾವಣೆಯಲ್ಲಿ ಸೋನಾಕ್ಷಿ ಇದ್ದ ಬಾಡಿಗೆ ಮನೆಗೆ ಕಳೆದ ಒಂದು ನಾಲ್ಕೈದು ದಿನಗಳಿಂದ ಬೀಗ ಹಾಕಲಾಗಿತ್ತು. ಇದರ ಬಗ್ಗೆ ಮಾಹಿತಿ ಕಲೆ ಹಾಕಿದ ಪೊಲೀಸರು ಇಲ್ಲಿ ಸಿಕ್ಕ ಶವವನ್ನು ಸೋನಾಕ್ಷಿಯದೇ ಇರಬಹುದು ಎಂದು ಮೇಲ್ನೋಟಕ್ಕೆ ಪೊಲೀಸರು ನಿರ್ಧರಿಸಿದ್ದರು. ಶುಕ್ರವಾರ ಸೋನಾಕ್ಷಿ ಶವದ ಮೇಲಿದ್ದ ಆಭರಣಗಳನ್ನು ಅವರ ತಾಯಿ ರಜಿನಿ ಹಾಗೂ ಅಜ್ಜಿ ಗೌರಮ್ಮನಿಗೆ ತೋರಿಸಿದಾಗ ಈ ಆಭರಣ ನಮ್ಮ ಸೋನಾಕ್ಷಿಯದೇ ಎಂದು ಗುರುತಿಸುತ್ತಾರೆ. ನಂತರ ಇವರನ್ನು ಚಾಮರಾಜನಗರದ ಸಿಮ್ಸ್ ಆಸ್ಪತ್ರೆಗೆ ಕರೆದೊಯ್ದು ಶವಗಾರದಲ್ಲಿರಿಸಿದ್ದ ಸೋನಾಕ್ಷಿಯ ಮೃತದೇಹವನ್ನು ತೋರಿಸಲಾಗಿ ಇದು ನಮ್ಮ ಸೋನಾಕ್ಷಿಯದೇ ಶವ ಎಂದು ಗುರುತಿಸುತ್ತಾರೆ. ಮೃತಳ ತಾಯಿ ರಜನಿ ಶವದ ಬಲಗೆನ್ನೆಯ ಮೇಲೆ ಎಡಭಾಗದ ಹಣೆಯ ಹತ್ತಿರ ತಲೆಯ ಮೇಲ್ಭಾಗದಲ್ಲಿ ಹೊಡೆದಿರುವ ಗಾಯಗಳನ್ನು ಕಂಡು 3-4 ದಿನಗಳ ಹಿಂದೆಯೇ ಮೋಳೆ ಬಡಾವಣೆಯ ನಂಜಯ್ಯನ ಮಗ ಮಾದೇಶ ಅಲಿಯಾಸ್ ಮಹೇಶ್, ಕೆಂಚಶೆಟ್ಟಿ ಮಗ ಬಾಬು ಅಲಿಯಾಸ್ ಚಿಕ್ಕಬಾಬು ಇವರೇ ಸೋನಾಕ್ಷಿಯನ್ನು ಕೊಲೆ ಮಾಡಿ ಮಣ್ಣಿನಲ್ಲಿ ಹೂತು ಹಾಕಿದ್ದಾರೆಂದು ಅನುಮಾನ ವ್ಯಕ್ತಪಡಿಸಿದ್ದರು.


ಮಾದೇಶನ ಅಪ್ಪುಗೆಯಲ್ಲಿ ಸೋನಾಕ್ಷಿ

ನಂತರ ಮೃತಳ ತಾಯಿ ರಜಿನಿ ದೂರು ನೀಡಿದ್ದು ಪಟ್ಟಣ ಪೊಲೀಸ್ ಠಾಣೆಯ ಪಿಎಸ್‌ಐ ಬಿ.ವಿ. ವರ್ಷ ಠಾಣೆ ಮೊಕದ್ದಮೆ ಸಂಖ್ಯೆ111/2025 ಕಲಂ 103,238, ರೆ/ವಿ 3(5) ಬಿಎನ್‌ಎಸ್ ಕಾಯ್ದೆ ಅಡಿ ಪ್ರಕರಣ ದಾಖಲಿಸಿಕೊಂಡಿದ್ದಾರೆ. ಮೊದಲು ಶಶಿಕುಮಾರ್ ನೀಡಿದ ದೂರಿನ ಮೇರೆಗೆ ಪ್ರಕರಣವನ್ನು ಅನುಮಾನಸ್ಪದ ಸಾವು ಎಂದು ದಾಖಲಿಸಿಕೊಂಡಿದ್ದ ಪೊಲೀಸರು ನಂತರ ಮೃತಳ ತಾಯಿ ರಜಿನಿ ನೀಡಿದ ದೂರಿನ ಮೇರೆಗೆ ಕೊಲೆ ಹಾಗೂ ಸಾಕ್ಯ ನಾಶ ಪ್ರಕರಣ ದಾಖಲಿಸಿಕೊಳ್ಳುತ್ತಾರೆ. ಶನಿವಾರ ಚಾಮರಾಜನಗರ ಜಿಲ್ಲಾ ಸಿಮ್ಸ್ ಆಸ್ಪತ್ರೆಯ ಶವಗಾರದಲ್ಲಿ ಮೃತದೇಹವನ್ನು ವೈದ್ಯರು ಮರಣೋತ್ತರ ಪರೀಕ್ಷೆ ನಡೆಸಿ ವಾರಸುದಾರರಿಗೆ ನೀಡಿದ್ದರು. ಬಳಿಕ ಪೊಲೀಸರಿಂದ ಸೋನಾಕ್ಷಿ ಶವ ಪಡೆದ ಆಕೆಯ ತಾಯಿ ರಜಿನಿ ಹಾಗೂ ಕುಟುಂಬದವರು ಮೃತದೇಹವನ್ನು ಊರಿಗೆ ತರದೇ ಚಾಮರಾಜನಗರ ಎಡಬೆಟ್ಟದಲ್ಲಿ ಅಂತ್ಯಸಂಸ್ಕಾರ ನಡೆಸಿದ್ದಾರೆ.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ಬಿ.ಟಿ. ಕವಿತಾ ಎರಡು ತಂಡಗಳನ್ನು ರಚನೆ ಮಾಡಿ ಆರೋಪಿಯನ್ನು ತ್ವರಿತಗತಿಯಲ್ಲಿ ಬಂಧಿಸಲು ಕ್ರಮ ಕೈಗೊಂಡಿದ್ದರು. ಹಳೇ ಹಂಪಾಪುರ ಸುವರ್ಣಾವತಿ ನದಿಯ ದಡದಲ್ಲಿ ಹೂತಿದ್ದ ಶವವನ್ನು ಹೊರ ತೆಗೆದ ಪೊಲೀಸರಿಗೆ ಶವದ ಗುರುತು ಹಾಗೂ ವಿಳಾಸ ಪತ್ತೆ ಸವಾಲಾಗಿತ್ತು. ಆದರೆ ಆರೋಪಿಗಳ ಪತ್ತೆಗಾಗಿ ಕಾರ್ಯಾಚರಣೆಗಿಳಿದ ಪೊಲೀಸರಿಗೆ ಅಷ್ಟೊಂದು ರಿಸ್ಕ್ ಆಗಲಿಲ್ಲ, ಏಕೆಂದರೆ ಮೃತಳ ತಾಯಿ ರಜನಿ ಪೊಲೀಸರಿಗೆ ದೂರು ನೀಡುವಾಗಲೇ ಆರೋಪಿಗಳ ಹೆಸರನ್ನು ಉಲ್ಲೇಖಿಸುವ ಮೂಲಕ ಸುಳಿವು ನೀಡಿದ್ದರು. ರಜನಿ ದೂರಿನ ಆಧಾರದ ಮೇಲೆ ಕಾರ್ಯಾಚರಣೆಗಿಳಿದ ಕೊಳ್ಳೇಗಾಲ ವೃತ್ತ ನಿರೀಕ್ಷಕ ಎಂ. ಶಿವಮಾದಯ್ಯ ನೇತೃತ್ವದ ಪಟ್ಟಣ ಠಾಣಾ ಪೊಲೀಸರ ತಂಡ ತನ್ನ ಹೆಂಡತಿಯ ತವರೂರು ತಾಲ್ಲೂಕಿನ ಟಗರಪುರ ಮೋಳೆ ಗ್ರಾಮದಲ್ಲಿ ತಲೆಮರೆಸಿಕೊಂಡಿದ್ದ ಕೊಲೆ ಆರೋಪಿ ಮಾದೇಶ ಅಲಿಯಾಸ್ ಮಹೇಶ್‌ನನ್ನು ಶನಿವಾರ ಮಧ್ಯಾಹ್ನ ವಶಕ್ಕೆ ಪಡೆದಿದೆ. ಹಾಗೆಯೇ ಮತ್ತೊಬ್ಬ ಆರೋಪಿ ಬಾಬು ಅಲಿಯಾಸ್ ಚಿಕ್ಕ ಬಾಬು ಇವರನ್ನು ವಶಕ್ಕೆ ಪಡೆದು ವಿಚಾರಣೆಗೆ ಒಳಪಡಿಸಿದಾಗ ಮಾದೇಶ ಅಲಿಯಾಸ್ ಮಹೇಶ್ ಸೋನಾಕ್ಷಿಯ ಜೊತೆ


ಮಾದೇಶನ ಮನೆ ಮುಂದೆ ಪೊಲೀಸ್ ಅಧಿಕಾರಿಗಳು

☞ 10

# ...ಗೆಣೆಕಾರನಿಂದಲೇ ಹೆಣವಾದ ಸೋನಾಕ್ಷಿ!!

9 ☞

ಅಕ್ರಮ ಸಂಬಂಧ ಇಟ್ಟು ಕೊಂಡು ಬಸ್ತೀಪುರ ಬಡಾವಣೆಯಲ್ಲಿ ಮನೆ ಮಾಡಿ ಇರಿಸಿಕೊಂಡಿದ್ದನು. ಜೂನ್ 15ರಂದು ಇಬ್ಬರ ನಡುವೆ ವೈಮನಸ್ಸು ಉಂಟಾಗಿ ಜಗಳವಾಗಿತ್ತು. ಮತ್ತೆ ಜೂನ್ 16 ರಂದು ಮತ್ತೆ ಇಬ್ಬರ ನಡುವೆ ಜಗಳವಾಗಿ ಸೋನಾಕ್ಷಿಯನ್ನು ಬೈಕ್‌ನಲ್ಲಿ ಕೂರಿಸಿಕೊಂಡು ಹಳೇ ಹಂಪಾಪುರ ಸುವರ್ಣಾವತಿ ನದಿಯ ಬಳಿ ಹಲ್ಲೆ ಮಾಡಿ ಸಾಯಿಸಿ ಶವವನ್ನು ಅಲ್ಲೇ ಮಣ್ಣನ್ನು ತೆಗೆದು ಗುಂಡಿಯೊಳಗೆ ಹೂತು ಹಾಕಿದ್ದೇನೆಂದು ಪೊಲೀಸ್ ವಿಚಾರಣೆ ವೇಳೆ ಬಾಯಿ ಬಿಟ್ಟಿದ್ದಾನೆ. ಅದರಂತೆ ಪೊಲೀಸರು ಹಂತಕ ತಪ್ಪಿಸಿಕೊಳ್ಳುವ ಮೊದಲೆ ಮೊಬೈಲ್ ಕರೆ ಆಧಾರದ ಮೇಲೆ ಹೂತಿಟ್ಟ ಶವದ ಸುತ್ತ ಅಡ್ಡಾಡಿದ್ದ ಮಾಹಿತಿ ಕಲೆ ಹಾಕಿದಾಗ ಸೋನಾಕ್ಷಿಯ ಕೊಲೆಯ ಹಿಂದೆ ಹಂತಕ ಮಾದೇಶನದ್ದೆ ಕೈವಾಡ ಇದೆ ಎಂಬುದು ಪೊಲೀಸರ ಮುಂದೆ ಸಾಬೀತಾಗಿದೆ. ಅದರಂತೆ ಆತನ ಬಂಧನವಾಗಿದೆ.


ಸೋನಾಕ್ಷಿ ಹಾಗೂ ಮಾದೇಶ



### ಪೊಲೀಸ್ ವಶದಲ್ಲಿ ಇಟ್ಟಿಗೆ ಬಾಬು

ಬಂಧಿತ ಆರೋಪಿ ಕೊಳ್ಳೇಗಾಲ ಉಪ್ಪಾರಮೋಳೆ ನಿವಾಸಿ ಮಾದೇಶ್ ಜತೆ ಅಕ್ರಮ ಸಂಬಂಧ ಹೊಂದಿದ್ದ ಮೃತ ಸೋನಾಕ್ಷಿ ಜತೆಗೆ ಇದೇ ಬಡಾವಣೆಯಲ್ಲಿ ಕೆಎಂಬಿ ಮಣ್ಣಿನ ಇಟ್ಟಿಗೆ ಫ್ಯಾಕ್ಟರಿ ನಡೆಸುತ್ತಿರುವ ಬಾಬು ಎಂಬಾತನೂ ಅನೈತಿಕ ಸಂಬಂಧ ಇಟ್ಟುಕೊಂಡಿದ್ದನು ಎಂದು ಹೇಳಲಾಗಿದೆ. ಈ ಕಾರಣಕ್ಕಾಗಿ ಸೋನಾಕ್ಷಿ ಕೊಲೆ ಪ್ರಕರಣದ ವಿಚಾರಣೆಗೆ ಪೊಲೀಸರು ಇಟ್ಟಿಗೆ ಬಾಬುವನ್ನು ವಶಕ್ಕೆ ಪಡೆದು ವಿವಿಧ ಆಯಾಮಗಳಲ್ಲಿ ತೀವ್ರ ವಿಚಾರಣೆಗೊಳಪಡಿಸಿದ್ದಾರೆ. ಈತ ಸೋನಾಕ್ಷಿ ಸೇರಿದಂತೆ ಇನ್ನೂ ಕೆಲ ಮಹಿಳೆಯರೊಟ್ಟಿಗೆ ಅನೈತಿಕ ಸಂಬಂಧವಿರಿಸಿ ಕೊಂಡಿದ್ದಾನೆ ಎಂಬ ಅನುಮಾನದ ಹಿನ್ನೆಲೆ ಈತನ ಮೊಬೈಲ್ ಕಾಲ್ ಡೀಟೈಲ್ಸ್ ತಿಳಿಯುವ ಸಂಬಂಧ ಪೊಲೀಸರು ಸಿಡಿಆರ್ ದಾಖಲೆ ಪರಿಶೀಲಿಸಲಿದ್ದಾರೆ ಎಂದು ತಿಳಿದು ಬಂದಿದೆ. ಹಾಗೆಯೇ ಪ್ರಾಥಮಿಕ ವಿಚಾರಣೆ ನಡೆಸಿದ ಬಳಿಕ ಪರರ ಹೆಂಡತಿಯ ಹಿಂದೆ ಬಿದ್ದ ಮಾದೇಶ ಜೈಲು ಪಾಲಾಗಿದ್ದಾನೆ. ನ್ಯಾಯಾಲಯದಿಂದ ಆರೋಪಿಯನ್ನು ಪೊಲೀಸ್ ಕಸ್ಟಡಿಗೆ ಪಡೆದ ಬಳಿಕ ನಿಯಮಾನುಸಾರ ಆತನನ್ನು ಕೊಲೆ ಮಾಡಿದ ಸ್ಥಳದ ಮಹಜರು, ಕೃತ್ಯಕ್ಕೆ ಬಳಸಿದ ವಸ್ತುಗಳನ್ನು ಪೊಲೀಸರು ಜಪ್ತಿ ಮಾಡಿದ್ದಾರೆ. ಬಸ್ತೀಪುರದ ನಾಯಕ ಬೀದಿಯಲ್ಲಿ ಸೋನಾಕ್ಷಿ ವಾಸವಿದ್ದ ಬಾಡಿಗೆ ಮನೆ ಹಾಗೂ ಅಲ್ಲಿಂದ ಆಕೆಯನ್ನು ಮುಳ್ಳೂರು ರಸ್ತೆಯ ಹೊನ್ನಹೊಳೆವರೆಗೆ ಕೂರಿಸಿಕೊಂಡು ಹೋದ ಬೈಕ್ ಅನ್ನು ಸೀಜ್ ಮಾಡಿದ್ದಾರೆ.

### ಮಾದೇಶ್ ಮನೆ ಧ್ವಂಸಗೊಳಿಸಿದ ಮೃತಳ ಕುಟುಂಬಸ್ಥರು

ಸೋನಾಕ್ಷಿ ಅಂತ್ಯ ಸಂಸ್ಕಾರದ ನಂತರ ಸಂಜೆ ಊರಿಗೆ ಹಿಂದಿರುಗಿದ ಸೋನಾಕ್ಷಿ ಕುಟುಂಬ ಇತ್ತ ಕೊಲೆ ಆರೋಪಿ ಮಾದೇಶ್‌ಗೆ ಸೇರಿದ ಬಡಾವಣೆಯಲ್ಲಿರುವ 2 ಮನೆಯನ್ನು ಆಕ್ರೋಶದಿಂದ ಧ್ವಂಸಗೊಳಿಸಿದ್ದಾರೆ. ಇದನ್ನು ಆರೋಪಿ ಮಹೇಶ್ ಸಂಬಂಧಿ ಶ್ರೀನಿವಾಸ್ ಪ್ರಶ್ನಿಸಿದಕ್ಕೆ ಅವನ ಮೇಲೆ ಹಲ್ಲೆ ಮಾಡಿದ್ದಾರೆ. ಪೊಲೀಸರ ವಶದಲ್ಲಿದ್ದ ಮತ್ತೊಬ್ಬ ಆರೋಪಿ ಇಟ್ಟಿಗೆ ಬಾಬು ಮನೆಯ ಮುಂದೆ ನಿಂತಿದ್ದ ಬಾಬುವಿನ ಬುಲೆಟ್ ಬೈಕ್ ಅನ್ನು ಕಲ್ಲಿನಿಂದ ಜಜ್ಜಿ ಧ್ವಂಸ ಮಾಡಿದ್ದಾರೆ.


ಪೊಲೀಸ್ ಕಸ್ಟಡಿಯಲ್ಲಿ ಆರೋಪಿ ಮಾದೇಶ

ಹಾದಿ ತಪ್ಪಿದ ಹೆಣ್ಣು ಮಗಳೊಬ್ಬಳು ಗಂಡ, ಮಕ್ಕಳನ್ನು ಬಿಟ್ಟು ಪರಪುರುಷನ ಸಂಗ ಮಾಡಿದ ತಪ್ಪಿಗೆ ಸೋನಾಕ್ಷಿ ಹೆಣವಾಗಿದ್ದಾಳೆ. ಕಂಡವರ ಹೆಂಡತಿಯ ಸಹವಾಸ ಮಾಡಿದ ಮಾದೇಶ ಜೈಲು ಪಾಲಾಗಿದ್ದಾನೆ. ಏನು ತಪ್ಪು ಮಾಡದ ಅಮಾಯಕ ಮಕ್ಕಳು ತಾಯಿಯನ್ನು ಕಳೆದುಕೊಂಡು ತಬ್ಬಲಿಗಳಾಗಿವೆ. ಇದೆಂಥಾ ವಿಪರ್ಯಾಸ... ☯

# ಸಿದ್ದರಾಮಯ್ಯಗೆ ಅಗ್ನಿಪರೀಕ್ಷೆ ಆರಂಭ!

2 ☞

ಬಿಹಾರದಲ್ಲಿ ಕಾಂಗ್ರೆಸ್ ಏಕಾಂಗಿಯಾಗಿ ಸ್ಪರ್ಧಿಸಿ ಗೆಲ್ಲುವುದು ಸಾಧ್ಯವಾಗದ ಮಾತಾಗಿದೆ. ಹೀಗಾಗಿ ಆರ್ ಜೆಡಿಯ ಲಾಲೂಪ್ರಸಾದ್ ಯಾದವ್ ಅವರ ಸಖ್ಯ ಅನಿವಾರ್ಯವಾಗಿದೆ. ಬಿಜೆಪಿ ಮತ್ತು ನಿತೀಶ್ ಕುಮಾರ್ ನೇತೃತ್ವದ ಜೆಡಿಯು ಈಗಾಗಲೇ ಅಲ್ಲಿ ಆಡಳಿತ ನಡೆಸುತ್ತಿದೆ. ಜೆಡಿಯುನ ಮುಖ್ಯಸ್ಥ ಸಿಎಂ ನಿತೀಶ್ ಕುಮಾರ್ ಕಾಂಗ್ರೆಸ್ ಜತೆಗೆ ಕೈಜೋಡಿಸುವುದಂತು ಸಾಧ್ಯವಾಗದ ಮಾತಾಗಿದೆ.



ಈ ಹಿಂದೆ ಬಿಜೆಪಿ ಸಖ್ಯ ತೊರೆದು ಕಾಂಗ್ರೆಸ್‌ಗೆ ಬೆಂಬಲ ನೀಡಿ ಕಾಂಗ್ರೆಸ್ ಮತ್ತು ಆರ್‌ಜೆಡಿ ಆಡಳಿತ ನಡೆಸುವಂತೆ ಮಾಡಿದ್ದ ನಿತೀಶ್ ಕುಮಾರ್ ಅದರ ಹಿಂದೆ ಪ್ರಧಾನಿಯಾಗುವ ಕನಸು ಇಟ್ಟುಕೊಂಡಿದ್ದರು. ಹೀಗಾಗಿ ಅವತ್ತು ಬಿಜೆಪಿ ಮೈತ್ರಿಯನ್ನು ಮೊಟಕುಗೊಳಿಸಿದ್ದರು. ಆದರೆ ಇವತ್ತಿನ ಪರಿಸ್ಥಿತಿ ಆ ರೀತಿಯಿಲ್ಲ, ಅದಕ್ಕಿಂತ ಹೆಚ್ಚಾಗಿ ಈ ಹಿಂದೆ ಪ್ರಧಾನಿಯಾಗುವ ಬಯಕೆಯಿಂದ ಇಂಡಿ ಒಕ್ಕೂಟ ರಚನೆ ಮಾಡಿಸಿದ್ದ ಅವರು ತನ್ನನ್ನು ಪ್ರಧಾನಿ ಅಭ್ಯರ್ಥಿ ಮಾಡಲ್ಲ ಎಂಬುದು ಗೊತ್ತಾಗುತ್ತಿದ್ದಂತೆಯೇ ಅಲ್ಲಿಂದ ಕಾಲ್ಕಿತ್ತಿದ್ದರು. ನಂತರ ಕೈಕಾಲು ಹಿಡಿದು ಬಿಜೆಪಿ ಸಖ್ಯ ಬೆಳೆಸಿ ಮುಖ್ಯಮಂತ್ರಿಯಾದರು.

ಸದ್ಯ ಬಿಹಾರದಲ್ಲಿ ಎನ್‌ಡಿಎ ಗಟ್ಟಿಯಾಗಿದೆ. ಈಗಾಗಲೇ ಹಲವು ಬಾರಿ ಪ್ರಧಾನಿ ನರೇಂದ್ರ ಮೋದಿ ಬಿಹಾರದಲ್ಲಿ ರೋಡ್ ಶೋ ಸೇರಿದಂತೆ ಬಹಿರಂಗ ಪ್ರಚಾರ ನಡೆಸಿದ್ದಾರೆ. ಆ ಮೂಲಕ ಅಲ್ಲಿ ಬಿಜೆಪಿಯನ್ನು ಪ್ರಬಲಗೊಳಿಸುವ ಕೆಲಸಕ್ಕೆ ಕೈ ಹಾಕಿದ್ದಾರೆ. ಬಿಜೆಪಿ ಸೇರಿದಂತೆ ಜೆಡಿಯು ಜಂಟಿಯಾಗಿ ಚುನಾವಣೆಗೆ ಈಗಿನಿಂದಲೇ ತಯಾರಿ ಆರಂಭಿಸಿವೆ. ಕಾಂಗ್ರೆಸ್ ಇನ್ನೂ ಕೂಡ ಆ ನಿಟ್ಟಿನಲ್ಲಿ ದೊಡ್ಡ ಮಟ್ಟದಲ್ಲಿ ಪ್ರಚಾರಕ್ಕಿಳಿದಂತೆ ಕಾಣಿಸುತ್ತಿಲ್ಲ. ಚುನಾವಣೆ ಹತ್ತಿರವಾದಂತೆಯೇ ಕಾಂಗ್ರೆಸ್ ಮತ್ತು ಆರ್‌ಜೆಡಿ ಸ್ಥಾನ ಹೊಂದಾಣಿಕೆ ಹೇಗೆ ಮಾಡುತ್ತವೆ ಎನ್ನುವುದು ಅಷ್ಟೇ ಮುಖ್ಯವಾಗುತ್ತದೆ. ವಿಧಾನಸಭಾ ಚುನಾವಣೆಯಾಗಿರುವುದರಿಂದ ಕಾಂಗ್ರೆಸ್ ಹೆಚ್ಚು ಸ್ಥಾನ ಪಡೆದರೆ ಪ್ರಾದೇಶಿಕ ಪಕ್ಷವಾಗಿರುವ ಆರ್‌ಜೆಡಿ ದುರ್ಬಲವಾಗುವ ಭಯವೂ ಇಲ್ಲದಿಲ್ಲ.

ಕಾಂಗ್ರೆಸ್ ಬಿಹಾರ ಚುನಾವಣೆಯನ್ನು ಯಶಸ್ವಿಯಾಗಿ ನಡೆಸಬೇಕಾದರೆ ಕರ್ನಾಟಕ ಅಗತ್ಯತೆ ಇದ್ದೇ ಇದೆ. ಪ್ರಚಾರಕ್ಕೆ ನಾಯಕರು ಬೇಕು ಹಾಗೆಯೇ ಸಂಪನ್ಮೂಲವೂ ಇಲ್ಲಿಂದಲೇ ರವಾನೆಯಾಗಬೇಕಿದೆ. ಈಗ ರಾಜ್ಯದ ಕಾಂಗ್ರೆಸ್ ನಾಯಕರಿಗೆ ಬಿಹಾರ ಚುನಾವಣೆ ಸವಾಲ್ ಆಗಿ ಪರಿಣಮಿಸಿರುವುದರಲ್ಲಿ ಎರಡು ಮಾತಿಲ್ಲ, ರಾಜ್ಯದಲ್ಲಿ ಸರ್ಕಾರ ಗ್ಯಾರಂಟಿ ಯೋಜನೆ ಜಾರಿಗೆ ತಂದಿದ್ದು ಅದರ ಫಲಗಳನ್ನು ಪಡೆಯುತ್ತಿದ್ದರೂ ಅದರ ಬಗ್ಗೆ ವಿರೋಧವಂತೂ ಇದ್ದೇ ಇದೆ. ಇದರಾಚೆಗೆ ಮುಸ್ಲಿಂ ಓಲೈಕೆಯಲ್ಲಿ ತೊಡಗಿಸಿಕೊಂಡು ಹಿಂದೂ ವಿರೋಧಿ ಧೋರಣೆ ತಾಳುತ್ತಿದೆ ಎಂಬ ಆರೋಪ ಮುನ್ನಲೆಯಲ್ಲಿದೆ.

ಇನ್ನು ಒಕ್ಕಲಿಗ ಮತ್ತು ಲಿಂಗಾಯಿತ ನಾಯಕರ ವಿರೋಧದ ನಡುವೆಯೂ ಹತ್ತು ವರ್ಷಗಳ ಹಿಂದಿನ ಸಾಮಾಜಿಕ ಮತ್ತು ಆರ್ಥಿಕ ಸಮೀಕ್ಷೆ ನಡೆಸಿದ್ದ ಕಾಂತರಾಜು ಆಯೋಗದ ವರದಿಯನ್ನೂ ಜಾರಿಗೆ ತಂದೇ ತರುತ್ತೇವೆ ಎಂದು ಬೊಬ್ಬಿರಿದಿದ್ದ ಸಿಎಂ ಸಿದ್ದರಾಮಯ್ಯ ಸೇರಿದಂತೆ ದಲಿತ, ಹಿಂದುಳಿದ ಸಚಿವರು ಮತ್ತು ಶಾಸಕರು ಇದೀಗ ಹೈಕಮಾಂಡ್ ಮಾತಿಗೆ ತೆಪ್ಪಗಾಗಿ ಮರು ಸರ್ವೆಗೆ ಹೊರಟಿರುವುದು ರಾಜ್ಯ ಸರ್ಕಾರವನ್ನು ಅದರಲ್ಲೂ ಸಿಎಂ ಸಿದ್ದರಾಮಯ್ಯನವರನ್ನು ಅನುಮಾನದಿಂದ ನೋಡುವಂತಾಗಿದೆ. ಮುಂದೆ ಏನೇನು ಬೆಳವಣಿಗೆ ಆಗುತ್ತದೆ ಎನ್ನುವುದನ್ನು ಕಾದು ನೋಡೋಣ... ☯

5 ☞

ಪತ್ತೆಯಾಗಿದೆ. ಈ ಸಂಬಂಧ ಕಿಕ್ಕೇರಿ ಪೊಲೀಸ್ ಠಾಣೆ ಎಸ್‌ಐ ರೇವತಿ ಅವರು ಪ್ರಕರಣ ದಾಖಲಿಸಿಕೊಂಡು ಹೆಚ್ಚಿನ ತನಿಖೆ ನಡೆಸುತ್ತಿದ್ದಾರೆ. ಅತ್ತ ಗಂಡ ನಂದೀಶ್ ಹೇಳುವ ಪ್ರಕಾರ ಪ್ರೀತಿ ಚಿನ್ನಾಭರಣ ಸಹಿತ ಬಂದಿದ್ದಳು. ಹೀಗಾಗಿ ಅವಳ ಕೊಲೆ ಮಾಡಿ ಚಿನ್ನಾಭರಣವನ್ನು ಪುನೀತ್ ದೋಚಿರುವುದಾಗಿ ಆರೋಪ ಮಾಡುತ್ತಿದ್ದಾನೆ. ಇನ್ನು ಪುನೀತ್ ಆಕೆಯನ್ನು ಅವಳ ಬಳಿಯಿದ್ದ ಚಿನ್ನಾಭರಣಕ್ಕಾಗಿ ಕೊಲೆ ಮಾಡಿ ಕಥೆ ಕಟ್ಟಿದ್ದಾನಾ? ಎಂಬುದು ತನಿಖೆಯಿಂದ ಗೊತ್ತಾಗಬೇಕಿದೆ.



ಅದು ಏನೇ ಇರಲಿ... ವಿವಾಹಿತೆಯಾಗಿ ಮನೆ ಮಕ್ಕಳು ಅಂಥ ಸಂಸಾರದ ಜವಬ್ದಾರಿಯನ್ನು ನಿಭಾಯಿಸುವ ಸಮಯದಲ್ಲಿ ಅಪರಿಚಿತ ಪರಪುರುಷನ ಸಹವಾಸಕ್ಕೆ ಬಿದ್ದು ಪ್ರೀತಿ, ಪ್ರೇಮ, ಪ್ರಣಯ ಅಂಥ ಆತನ ಹಿಂದೆ ಹೋಗಿ ಅವನಿಂದಲೇ ಕೊಲೆಯಾಗಿ ಹೋಗಿರುವುದು ದುರಂತವೇ ಸರಿ... ಇದು ಮುಂದೆ ಈ ರೀತಿ ಮಾಡುವವರಿಗೆ ಎಚ್ಚರಿಕೆಯ ಗಂಟೆ ಎಂದರೆ ತಪ್ಪಾಗಲಾರದು. ಅನೈತಿಕ ಸಂಬಂಧಗಳು ನಮಗೆ ತಾತ್ಕಾಲಿಕ ಸುಖಗಳನ್ನು ನೀಡಬಹುದಾದರೂ ಬದುಕನ್ನು ಸುಖವಾಗಿಡಲ್ಲ ಎಂಬುದಕ್ಕೆ ಪ್ರೀತಿಯ ದುರಂತ ಸಾವು ಸಾಕ್ಷಿಯಾಗಿದೆ. ☯

## ಓದುಗರ ಗಮನಕ್ಕೆ

### ರಾಜಕೀಯ ಸುದ್ದಿಯೂ ಇರುತ್ತದೆ...

'ಪೊಲೀಸ್ ನ್ಯೂಸ್' ವಾರಪತ್ರಿಕೆಯಲ್ಲಿ ಬರೀ ಅಪರಾಧ ವರದಿಗಳು ಮಾತ್ರ ಬರುತ್ತದೆ ಅಂದುಕೊಳ್ಳಬೇಡಿ. ಬದಲಾದ ಕಾಲಮಾನದಲ್ಲಿ ಇನ್ನು ಮುಂದೆ ರಾಜಕೀಯ, ಭ್ರಷ್ಟಾಚಾರ, ಮುಚ್ಚಿ ಹೋಗಿರುವ 'ಕ್ರೈಂ' ಮುಂತಾದ ರಹಸ್ಯ ವರದಿಗಳನ್ನು ಬ್ಲಾಸ್ಟ್ ಮಾಡಲಿದ್ದೇವೆ. ನಿಮ್ಮ ಊರುಗಳಲ್ಲಿ ಇಂತಹ ಬ್ಲಾಸ್ಟ್ ಮಾಡುವಂತಹ ಸುದ್ದಿಗಳಿದ್ದರೆ ನಮಗೆ ಕಳುಹಿಸಿ ಕೊಡಿ. ನಿಮ್ಮ ಹೆಸರು, ವಿಳಾಸವನ್ನು ರಹಸ್ಯವಾಗಿಡುವ ಜವಾಬ್ದಾರಿ ನಮ್ಮದು. ನೀವು ಕಳುಹಿಸುವ ವರದಿಗೆ ದಾಖಲೆಗಳಿದ್ದರೆ ಒಳ್ಳೆಯದು. ಅಕಸ್ಮಾತ್ ದಾಖಲೆಗಳು ಇಲ್ಲದಿದ್ದಲ್ಲಿ, ನೀವು ಕಳುಹಿಸುವ ವರದಿಯಲ್ಲಿ ದಾಖಲೆಗಳು ಸಿಗುವ ಜಾಗವನ್ನು ನಮೂದಿಸಿದರೆ ಸಾಕು, ದಾಖಲೆ ಎತ್ತುವ ಜವಾಬ್ದಾರಿ ನಮ್ಮದು.

ನಮ್ಮ ವಿಳಾಸ :

8884452699

policenewsreporter@gmail.com

ನಂ. 165, 8ನೇ ಮುಖ್ಯರಸ್ತೆ, ಬಿಇಎಂಎಲ್ ಬಡಾವಣೆ,
ಬಸವೇಶ್ವರನಗರ, ಬೆಂಗಳೂರು-560 079

080-23588510

# ಆರ್. ಅಶೋಕ್ ಆರೋಪಗಳಿಗೆ ತಿರುಗೇಟು ನೀಡಿದ ಪ್ರಿಯಾಂಕ್ ಖರ್ಗೆ!

**ಹೌಸಿಂಗ್ ಬೋರ್ಡ್‌ನಲ್ಲಿ ಕೋಟ್ಯಾಂತರ ರೂ. ಅವ್ಯವಹಾರ ನಡೆದಿದೆ, ಮನಿ ಕೊಟ್ರೆ ಮಾತ್ರ ಮನೆ! ಕಾಂಗ್ರೆಸ್ ಸರ್ಕಾರ ಬಿಹಾರ್ ಎಲೆಕ್ಷನ್‌ಗಾಗಿ ಕಲೆಕ್ಷನ್ ಮಾಡಿಸುತ್ತಿದೆ... ಕಳೆದ ವಾರ ಹೀಗೆಲ್ಲಾ ಆರೋಪ ಮಾಡಿದ್ದ ವಿಪಕ್ಷ ನಾಯಕ ಆರ್. ಅಶೋಕ್ ಅವರ ಆರೋಪಗಳಿಗೆ ಇದೀಗ ಸಚಿವ ಪ್ರಿಯಾಂಕ್ ಖರ್ಗೆ ತಿರುಗೇಟು ನೀಡಿದ್ದಾರೆ!**



ಶಾಸಕರಾದ ಬಿ.ಆರ್. ಪಾಟೀಲ್ ಅವರು ಹಿರಿಯರು. ಅವರ ಹೋರಾಟ ಮನೋಭಾವ ಹಾಗೂ ಸಿದ್ಧಾಂತಗಳ ಬಗ್ಗೆ ಗೌರವವಿದೆ. ಏನಾದರೂ ಸಮಸ್ಯೆಗಳಿದ್ದರೆ ಸಿಎಂ, ಡಿಸಿಎಂ ಹಾಗೂ ಖರ್ಗೆ ಸಾಹೇಬರ ಬಳಿ ಚರ್ಚಿಸಲಿ ಎಂದು ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಮತ್ತು ಕಲಬುರಗಿ ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು.

**ಕಲಬುರಗಿಯ ಐವಾನ್**

ಶಾಹಿ ಅತಿಥಿಗೃಹದಲ್ಲಿ ತಮ್ಮನ್ನು ಭೇಟಿ ಮಾಡಿದ ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡುತ್ತಿದ್ದ ಅವರು, ಬಿ.ಆರ್.ಪಾಟೀಲ್ ಅವರ ಹೇಳಿಕೆಯಿಂದ ಸರ್ಕಾರಕ್ಕೆ ಮುಜುಗರವಾಗಿದೆಯೇ ಎಂದು ಕೇಳಲಾದ ಪ್ರಶ್ನೆಗೆ ಉತ್ತರಿಸುತ್ತಾ, ಅವರು ಹಿರಿಯರು ಏನಾದರೂ ಸಮಸ್ಯೆ ಇದ್ದರೆ ಸೂಕ್ತವಾದ ವೇದಿಕೆಯಲ್ಲಿ ಹಿರಿಯರೊಂದಿಗೆ ಚರ್ಚಿಸಬೇಕಿತ್ತು. ಹೀಗೆ ಬಹಿರಂಗವಾಗಿ ಹೇಳುವುದರಿಂದ ಸರ್ಕಾರಕ್ಕೆ ಮುಜುಗರವಾಗತ್ತದೆ ಎಂದರು.

ಫೋನ್‌ನಲ್ಲಿ ನಡೆದ ಸಂಭಾಷಣೆಯಲ್ಲಿ ಅಧಿಕಾರಿ ಸ್ಪಷ್ಟವಾಗಿ ಪಾಟೀಲ್ ಅವರ ಆರೋಪಗಳನ್ನು ಅಲ್ಲಗಳೆದು ಅಂತಹ ಯಾವುದಾದರೂ ಲೋಪ ಆಗಿದ್ದಕ್ಕೆ ಆಧಾರ ಕೊಟ್ಟರೆ ಕಾನೂನು ಕ್ರಮ ಜರುಗಿಸುವುದಾಗಿ ಹೇಳಿದ್ದಾರೆ. ಅದನ್ನು ಹಿರಿಯರಾದ ಪಾಟೀಲರು ಸಿಎಂ ಅವರ ಬಳಿ ಚರ್ಚಿಸಬೇಕಿತ್ತು. ಈಗ ಸಿಎಂ ಅವರನ್ನು ಕರೆದಿದ್ದಾರೆ ಅಲ್ಲಿ ಏನು ಚರ್ಚೆ ನಡೆಯುತ್ತದೆಯೋ ನೋಡೋಣ ಎಂದರು.

ಜಯದೇವ ಆಸ್ಪತ್ರೆಯಲ್ಲಿ ಚಿತ್ತಾಪುರ ಹಾಗೂ ಸೇಡಂ ತಾಲೂಕಿನವರೇ ತುಂಬಿಕೊಂಡಿದ್ದಾರೆ ಎಂದು ಬಿ.ಆರ್. ಪಾಟೀಲ್ ಆರೋಪಿಸಿದ್ದಾರಲ್ಲ.... ಎಂದು ಕೇಳಿದಾಗ ಯೋಜನೆಗಳನ್ನು ತಂದಾಗ ಆಯಾ ಶಾಸಕರ ಕ್ಷೇತ್ರದ ಜನರು ಉದ್ಯೋಗ ನಿರೀಕ್ಷಿಸುವುದು ಸಹಜ ಎಂದರು.

ರಾಜ್ಯದಲ್ಲಿ ಅಭಿವೃದ್ಧಿ ಕುಂಠಿತಗೊಂಡಿದೆ ಎನ್ನುವ ಮಾತನ್ನು ಅಲ್ಲಗಳೆದ ಸಚಿವರು, ಗ್ಯಾರಂಟಿ ಯೋಜನೆಗಳಿಗೆ 50,000 ಕೋಟಿ ರೂ. ಖರ್ಚು ಮಾಡಲಾಗಿದೆ. ಇದರಿಂದಾಗಿ ಜನರ ಆರ್ಥಿಕ ಸ್ಥಿರತೆ ಉಂಟಾಗಿದೆ. ಕೇಂದ್ರ ಸರ್ಕಾರದ ನೀತಿಗಳಿಂದಾಗಿ ಸಮಸ್ಯೆ ಎದುರಿಸುತ್ತಿದ್ದ ಜನರಿಗೆ ಇದರಿಂದ ಅನುಕೂಲವಾಗಿದೆ ಎಂದರು.

ಶಾಸಕ ರಾಜುಕಾಗೆ ಅವರ ಹೇಳಿಕೆಗೆ ಪ್ರತಿಕ್ರಿಯೆ ನೀಡಿದ ಪ್ರಿಯಾಂಕ್ ಖರ್ಗೆ ರಾಜ್ಯದ ಪ್ರತಿಯೊಬ್ಬ ಶಾಸಕರು ಹೆಚ್ಚಿನ ಅನುದಾನ ಕ್ಷೇತ್ರಕ್ಕೆ ನಿರೀಕ್ಷೆ ಮಾಡುತ್ತಾರೆ ಅದರಲ್ಲಿ ತಪ್ಪೇನಿದೆ? ಎಂದು ಕೇಳಿ, ಶಾಸಕ ಬೇಳೂರು ಗೋಪಾಲಕೃಷ್ಣ ಅವರು ವಸತಿಯೋಜನೆಯ ಬಗ್ಗೆ ಆರೋಪ ಕೇಳಿ ಬಂದಾಗ ವಸತಿ ಸಚಿವರ ರಾಜೀನಾಮೆ ಬಗ್ಗೆ ಮಾತನಾಡಿರಬಹುದು ಎಂದರು.

ಕೇಂದ್ರ ಸರ್ಕಾರ ರಾಜ್ಯಕ್ಕೆ ಅನುದಾನ ಬಿಡುಗಡೆ ಮಾಡುವಲ್ಲಿ ತೋರಿಸುತ್ತಿರುವ ಅಸಡ್ಡೆಯಿಂದಾಗಿ ಸಮಸ್ಯೆಯಾಗಿದೆ ಎಂದು ಅಸಮಧಾನ ವ್ಯಕ್ತಪಡಿಸಿದ ಪ್ರಿಯಾಂಕ್, 15 ನೆಯ ಹಣಕಾಸು ಆಯೋಗದಿಂದ ರಾಜ್ಯಕ್ಕೆ ಬರಬೇಕಾದ ಅನುದಾನದ ಪಾಲಿನಲ್ಲಿ ರೂ 50,000 ಕೋಟಿ ಬಂದಿಲ್ಲ. ಇದು ಹಣಕಾಸಿನ ಸಮಸ್ಯೆಗೆ ಕಾರಣವಾಗಿದೆ ಎಂದರು ಆರೋಪಿಸಿದರು.

ಜಲಜೀವನ್ ಮಿಷನ್ ಅಡಿಯಲ್ಲಿ ಅಭಿವೃದ್ಧಿ ಕೈಗೊಳ್ಳಲು ಕೇಂದ್ರ ರೂ 2,700 ಕೋಟಿ ಬಿಡುಗಡೆ ಮಾಡಬೇಕಿತ್ತು, ಆದರೆ ರೂ 500 ಕೋಟಿ ಬಿಡುಗಡೆ ಮಾಡಿದೆ. ನಾವು ಕೆಲಸ ಅರ್ಧಕ್ಕೆ ನಿಲ್ಲಿಸಬಾರದು ಎಂದು ರಾಜ್ಯದಿಂದ ಅನುದಾನ ಬಿಡುಗಡೆ ಮಾಡಿ ಕೆಲಸ ಮುಂದುವರೆಸಿದ್ದೇವೆ. ಜೊತೆಗೆ ರಾಜ್ಯ ಸರ್ಕಾರದಿಂದ ಗ್ರಾಮೀಣ ಭಾಗದ ರಸ್ತೆಗಳ ಸುಧಾರಣೆಗಾಗಿ ರೂ 5,000 ಕೋಟಿ ಅನುದಾನ ಬಳಸಿ ಪ್ರಗತಿ ಪಥ ಹಾಗೂ ಕಲ್ಯಾಣ ಪಥ ಯೋಜನೆ ಜಾರಿಗೆ ಮಾಡುತ್ತಿದ್ದೇವೆ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸುತ್ತಾ ಹೇಳಿದರು.



ಉದ್ದೇಶಿತ ಅಮೇರಿಕಾ ಪ್ರವಾಸಕ್ಕೆ ಕೇಂದ್ರ ಅನುಮತಿ ನಿರಾಕರಿಸಿದ್ದಕ್ಕೆ ರಾಜಕೀಯ ಕಾರಣವೇ ಎಂದು ಕೇಳಿದ ಪ್ರಶ್ನೆಗೆ ಉತ್ತರಿಸಿದ ಸಚಿವರು, ರಾಜಕೀಯವಲ್ಲದೇ ಮತ್ತೇನು?



ಕೇಂದ್ರ ಸರ್ಕಾರದ ಅನುಮತಿ ನಿರಾಕರಣೆಯಿಂದಾಗಿ ರಾಜ್ಯಕ್ಕೆ ಬರಬೇಕಿದ್ದ ನಿರೀಕ್ಷಿತ ರೂ 15,000 ಕೋಟಿ ಬಂಡವಾಳ ನಿಂತುಹೋಗಿದ್ದು ಜೊತೆಗೆ ಕನಿಷ್ಠ ಮೂರು ಸಾವಿರ ಜನರಿಗೆ ಉದ್ಯೋಗ ಕೈತಪ್ಪಿದೆ. ಈ ಹಿಂದೆ ತಾವು ಹಾಗೂ ಸಚಿವ ಎಂ.ಬಿ. ಪಾಟೀಲ್ ಅಮೇರಿಕಾ ಪ್ರವಾಸ ಕೈಗೊಂಡಿದ್ದರಿಂದ ರೂ. 32,000 ಕೋಟಿ ಬಂಡವಾಳ ಹೂಡಿಕೆಯ ಒಪ್ಪಂದವಾಗಿದ್ದು, ಸುಮಾರು ರೂ 21,000 ಕೋಟಿಗೂ ಅಧಿಕ ಬಂಡವಾಳ ಹೂಡಲಾಗಿತ್ತು ಇದರಿಂದ 18,000 ರಿಂದ 20,000 ಜನರಿಗೆ ಉದ್ಯೋಗ ದೊರಕಿತ್ತು ಎಂದು ನೆನಪಿಸಿಕೊಂಡರು.


ಕೇಂದ್ರ ವಿದೇಶಾಂಗ ಸಚಿವರಿಗೆ ಅನುಮತಿ ನಿರಾಕರಣೆಗೆ ವಿವರಣೆ ನೀಡುವಂತೆ ಪತ್ರ ಬರೆಯಲಾಗಿದೆ ಅವರಿಂದ ಇನ್ನೂ ಉತ್ತರ ಬಂದಿಲ್ಲ. ಅವರು ನಮ್ಮ ಯಾವ ಪತ್ರಕ್ಕೆ ಉತ್ತರ ಕೊಟ್ಟಿದ್ದಾರೆ? ಕೇಂದ್ರದಲ್ಲಿರುವುದು ಎನ್ ಡಿ ಎ ಸರ್ಕಾರವಲ್ಲನೋ ಡೇಟಾ ಅವಲೇಬಲ್ ಸರ್ಕಾರ ಎಂದು ಟೀಕಿಸಿದರು. ಈಗ ಅಮೇರಿಕಾ ಹೋಗಬಹುದೇ ಎಂದು ಕೇಳಲಾದ ಪ್ರಶ್ನೆಗೆ 'ಟ್ರೇನ್ ಹೋದ ಮೇಲೆ ಟಿಕೇಟ್ ತಗೊಂಡು ಪ್ರಯೋಜನವೇನು?' ಎಂದು ಸೂಚ್ಯವಾಗಿ ಹೇಳಿ, ಶರತ್ ಬಚ್ಚೇಗೌಡ ಅವರು ಅಮೇರಿಕಾದಿಂದ ವಾಪಸ್ ಬಂದ ಮೇಲೆ ಚರ್ಚಿಸಲಾಗುವುದು ಎಂದರು.

ರಾಜ್ಯಕ್ಕೆ ಬರಬೇಕಾಗಿದ್ದ ಬಂಡವಾಳವನ್ನು ಕೇಂದ್ರ ಸರ್ಕಾರ ಮಹಾರಾಷ್ಟ್ರ, ಗುಜರಾತ್, ಆಸಾಂ ರಾಜ್ಯಗಳಿಗೆ ಬಿಡುಗಡೆ ಮಾಡಿದೆ. ಆಸ್ಸಾಂನಲ್ಲಿ ಸೆಮಿಕಂಡಕ್ಟರ್ ಸ್ಥಾಪನೆ ಮಾಡುತ್ತಿದ್ದಾರೆ. ಇಲ್ಲಿ ನಾವು ಕಷ್ಟಪಡಬೇಕು ಅಲ್ಲಿ ಸಬ್ಸಿಡಿ ಎಂದು ಬಂಡವಾಳ ಬಿಡುಗಡೆ ಮಾಡಲಾಗುತ್ತದೆ. ಅವರು ಕಷ್ಟಪಟ್ಟು ಬಂಡವಾಳ ಆಕರ್ಷಿಸಲಿ ಎಂದು ಪ್ರಿಯಾಂಕ್ ಹೇಳಿದರು.

ಬಿಜೆಪಿ ನಾಯಕರು ಸಚಿವ ಜಮೀರ್ ಅಹಮದ್ ಖಾನ್ ಅವರ ರಾಜೀನಾಮೆ ಒತ್ತಾಯಿಸಿದ್ದಾರೆ ಎಂದು ಪ್ರಶ್ನಿಸಿದಾಗ ಮೊದಲು ಬಿಜೆಪಿ ರಾಜ್ಯಾಧ್ಯಕ್ಷರ ರಾಜೀನಾಮೆಗೆ ಅವರದೇ ಪಕ್ಷದ ಕೆಲವರು ಒತ್ತಾಯಿಸುತ್ತಿದ್ದಾರಲ್ಲ ಎಂದು ತಿರುಗೇಟು ನೀಡಿದರು.

ರಾಜ್ಯದ ಸಚಿವರಿಂದ ಬಿಹಾರ್ ಚುನಾವಣೆಗೆ ಹಣ ಸಂಗ್ರಹಿಸಲು ಹೇಳಲಾಗಿದೆ ಎಂದು ವಿರೋಧ ಪಕ್ಷದ ನಾಯಕ ಆರ್. ಅಶೋಕ್ ಹೇಳಿದ್ದಾರಲ್ಲ ಎಂದು ಕೇಳಲಾದ ಪ್ರಶ್ನೆಗೆ ಉತ್ತರಿಸಿದ ಅವರು, ಬಿಜೆಪಿ ರಾಜ್ಯದಲ್ಲಿಯೂ ಅಧಿಕಾರದಲ್ಲಿತ್ತಲ್ಲ, ಆಗ ಅವರೂ ಹೀಗೆ ಮಾಡಿದ್ದರ? ಎಂದು ತಿರುಗೇಟು ನೀಡಿದರು. ಶಾಸಕರಾದ ಅಲ್ಲಮಪ್ರಭು ಪಾಟೀಲ್, ತಿಪ್ಪಣ್ಣಪ್ಪ ಕಮಕನೂರು, ಜಗದೇವ ಗುತ್ತೇದಾರ ಇದ್ದರು. ☯

---




ಗಂಡನ ಅವಶ್ಯಕತೆ ಲೈಂಗಿಕ ಸುಖಕ್ಕಾಗಿ ಮಾತ್ರ, ಆದರೆ ಇಂದಿನ ಕಾಲದಲ್ಲಿ, ಅದಕ್ಕೆ ಪರಿಹಾರಗಳು ಮಾರುಕಟ್ಟೆಯಲ್ಲಿಯೂ ಲಭ್ಯವಿದೆ.

ಈ ವಾಕ್ಯವನ್ನು ಕೇಳಿ ನನ್ನ ಹೆತ್ತವರು ಚಿಂತಿತರಾಗುತ್ತಿದ್ದರು. ನಾನು ವಿದ್ಯಾವಂತ, ಸ್ವಾವಲಂಬಿ ಮಹಿಳೆ, ನನ್ನ ಜೀವನವನ್ನು ನಡೆಸಲು ನನಗೆ ಗಂಡನ ಅಗತ್ಯವಿಲ್ಲ ಎಂದು ಭಾವಿಸುತ್ತೇನೆ. ಆದರೆ ನನ್ನ ಹೆತ್ತವರು ಮದುವೆಯು ಒಂದು ಪ್ರಮುಖ ಸಾಮಾಜಿಕ ಮತ್ತು ಕೌಟುಂಬಿಕ ಜವಾಬ್ದಾರಿ ಎಂದು ನನಗೆ ಮತ್ತೆ ಮತ್ತೆ ವಿವರಿಸುತ್ತಿದ್ದರು. ಅಂತಿಮವಾಗಿ, ನಾನು ಈ ವಿಷಯದ ಬಗ್ಗೆ ನನ್ನ ಮನೋವೈದ್ಯರನ್ನು ಸಂಪರ್ಕಿಸಿದೆ.

ನಾನು ಮದುವೆಯಾಗಲು ಬಯಸುವುದಿಲ್ಲ ಎಂದು ನಾನು ಅವನಿಗೆ ಹೇಳಿದಾಗ ಅವನು ನಕ್ಕನು ಮತ್ತು ನೀವು ಜೀವನದಲ್ಲಿ ಬಹಳಷ್ಟು ಮಾಡುತ್ತೀರಿ. ಆದರೆ ವಿಷಯಗಳು ನಿಮ್ಮ ರೀತಿಯಲ್ಲಿ ನಡೆಯದ ಸಮಯ ಬರುತ್ತದೆ. ನೀವು ವೈಫಲ್ಯವನ್ನು ಎದುರಿಸುತ್ತೀರಿ ಮತ್ತು ನಿಮ್ಮ ಆಸೆಗಳು ಈಡೇರುವುದಿಲ್ಲ, ಆಗ ನೀವು ಯಾರನ್ನು ದೂಷಿಸುತ್ತೀರಿ? ನೀವು ನಿಮ್ಮನ್ನು ದೂಷಿಸುತ್ತೀರಾ? ನಾನು ತಕ್ಷಣ ಉತ್ತರಿಸಿದೆ, ಇಲ್ಲ, ಎಂದಿಗೂ! ಮನೋವೈದ್ಯರು ಮುಗುಳ್ನಕ್ಕು ಹೇಳಿದರು, ಅದಕ್ಕಾಗಿಯೇ ನಿಮಗೆ ಗಂಡ ಬೇಕು, ಇದರಿಂದ ನೀವು ಅವನನ್ನು ದೂಷಿಸಬಹುದು ಮತ್ತು ನಿಮ್ಮ ಬಗ್ಗೆ ಒಳ್ಳೆಯದನ್ನು ಅನುಭವಿಸಬಹುದು.

ಈ ಉತ್ತರವು ನನ್ನನ್ನು ನಗೆಗಡಲಲ್ಲಿ ಮುಳುಗಿಸಿತು. ಮತ್ತು ನನ್ನನ್ನು ಯೋಚಿಸುವಂತೆ ಮಾಡಿತು. ಅವರ ಹಾಸ್ಯದಲ್ಲಿ ಆಳ ಅಡಗಿತ್ತು. ಜೀವನದಲ್ಲಿ ಮದುವೆ ಮತ್ತು ಗಂಡನ ಮಹತ್ವ ಕೇವಲ ದೂಷಿಸುವುದಕ್ಕೆ ಸೀಮಿತವಾಗಿಲ್ಲ. ಈ ಸಂಬಂಧವು ಜೀವನಪರ್ಯಂತ ಒಡನಾಟ, ಭದ್ರತೆ ಮತ್ತು ಸ್ಥಿರತೆಯನ್ನು ಒದಗಿಸುತ್ತದೆ. ಯೌವನದಲ್ಲಿ, ದೇಹವು ಆಕರ್ಷಕವಾಗಿದ್ದರೂ, ಜನರು ನಿಮ್ಮ ಕೋಪೋದ್ರೇಕಗಳನ್ನು ಸಹಿಸಿಕೊಳ್ಳುತ್ತಾರೆ ಮತ್ತು ನೀವು ಸ್ವತಂತ್ರ ಎಂದು ಭಾವಿಸುತ್ತೀರಿ ಎಂದು ನಾನು ಅರಿತುಕೊಂಡೆ. ಆದರೆ ವಯಸ್ಸಾದಂತೆ, ದೇಹದ ಶಕ್ತಿ ಮತ್ತು ಸೌಂದರ್ಯ ಕಡಿಮೆಯಾಗಲು ಪ್ರಾರಂಭಿಸಿದಾಗ, ಜೀವನ ಸಂಗಾತಿ ಮತ್ತು ಕುಟುಂಬದ ಪ್ರಾಮುಖ್ಯತೆಯನ್ನು ಅರ್ಥ ಮಾಡಿಕೊಳ್ಳಲಾಗುತ್ತದೆ. 50 ವರ್ಷಗಳ ನಂತರ, ನೀವು ಒಂಟಿಯಾಗಿರುವಾಗ, ಪ್ರತಿಯೊಂದು ಸಂದರ್ಭದಲ್ಲೂ ನಿಮ್ಮನ್ನು ಬೆಂಬಲಿಸುವುದು ನಿಮ್ಮ ಜೀವನ ಸಂಗಾತಿ.

ಗಂಡ ಮತ್ತು ಹೆಂಡತಿಯ ಸಂಬಂಧವು ಕೇವಲ ಸಾಮಾಜಿಕ ನಿಯಮವಲ್ಲ, ಆದರೆ ಇದು ಇಬ್ಬರೂ ಪರಸ್ಪರರ ಶಕ್ತಿ ಮತ್ತು ದೌರ್ಬಲ್ಯವಾಗುವ ಬಂಧವಾಗಿದೆ. ಈ ಸಂಬಂಧವು ಜೀವನದ ಅನಿಶ್ಚಿತತೆಗಳ ನಡುವೆ ಸ್ಥಿರತೆಯ ಭಾವನೆಯನ್ನು ನೀಡುತ್ತದೆ. ಪತಿ ನಿಮ್ಮನ್ನು ರಕ್ಷಿಸುವುದಲ್ಲದೆ, ಪ್ರತಿಯೊಂದು ಸಂದರ್ಭದಲ್ಲೂ ನಿಮ್ಮೊಂದಿಗೆ ನಿಲ್ಲುತ್ತಾನೆ.

ಒಂದು ಸಮಯದಲ್ಲಿ ನನಗೆ ಮದುವೆ ಅಗತ್ಯವಿಲ್ಲ ಎಂದು ನಾನು ಭಾವಿಸಿದೆ. ಆದರೆ ಕ್ರಮೇಣ ಪ್ರೀತಿ ಮತ್ತು ಮದುವೆಯ ಸಂಬಂಧವು ಆಧ್ಯಾತ್ಮಿಕ ಮತ್ತು ಭಾವನಾತ್ಮಕ ತೃಪ್ತಿಯ ಸಾಧನವಾಗುತ್ತದೆ ಎಂದು ನಾನು ಅರ್ಥಮಾಡಿಕೊಂಡೆ. ಒಂದು ಮನೆಯಲ್ಲಿ ಒಟ್ಟಿಗೆ ವಾಸಿಸುವುದು, ಪರಸ್ಪರ ಸಮಯ ಕಳೆಯುವುದು ಮತ್ತು ಒಂದೇ ಹಾಸಿಗೆಯಲ್ಲಿ ಮಲಗುವುದು – ಈ ಅನುಭವಗಳಿಂದ ಬೆಳೆಯುವ ಪ್ರೀತಿ ಬೇರೆ ಯಾವುದೇ ಸಂಬಂಧದಲ್ಲಿ ಕಂಡುಬರುವುದಿಲ್ಲ.

ನನ್ನಂತೆಯೇ ಮದುವೆಯನ್ನು ತಪ್ಪಿಸಲು ಪ್ರಯತ್ನಿಸಿದ್ದ ನನ್ನ ಅನೇಕ ಸ್ನೇಹಿತರು ಹೊರಗಿನಿಂದ ಸಂತೋಷವಾಗಿ ಮತ್ತು ಮುಕ್ತರಾಗಿ ಕಾಣುತ್ತಿದ್ದರು. ಆದರೆ ನಾನು ಅವರೊಳಗೆ ಒಂಟಿತನ ಮತ್ತು ಅತೃಪ್ತಿಯನ್ನು ಅನುಭವಿಸಿದೆ. ☯

# ಟ್ರಾಫಿಕ್ ಪೊಲೀಸ್ ಬೆನ್ನಿಗೆ ನಿಂತ ಬೊಮ್ಮಸಂದ್ರ ಇಂಡಸ್ಟ್ರಿಯಲ್ ಅಸೋಸಿಯೇಷನ್!

ಸೌಹಾರ್ದತೆ ಅಂದ್ರೆ ಇದು ಕಣ್ರೀ. ಪೊಲೀಸರು ಅಂದ್ರೆ ರಾಕ್ಷಸರಲ್ಲ, ರಕ್ಷಕರು. ಅವರಿಲ್ಲದಿದ್ರೆ ನಾವಾಗಲಿ ನಮ್ಮ ಕುಟುಂಬವಾಗಲಿ ನೆಮ್ಮದಿಯಾಗಿರಲು ಸಾಧ್ಯವೇ. ಪೊಲೀಸ್ ಇರೋದೇ ಜನ ಸೇವೆಗೆ.




ಹೀಗಾಗಿ, ಜನ ಪೊಲೀಸರಿಗೆ ಸಪೋರ್ಟ್ ಆಗಿರಬೇಕು. ಒಬ್ಬರಿಗೊಬ್ಬರು ಇದ್ದರೇನೇ ಉತ್ತಮ ಸಮಾಜ ನಿರ್ಮಾಣ ಸಾಧ್ಯ.

ನಿಮಗೆ ಗೊತ್ತಿರಬೇಕು, ಬೆಂಗಳೂರು ಮಹಾ ನಗರದಲ್ಲಿ ಅತ್ಯಂತ ದೊಡ್ಡ ಕೈಗಾರಿಕಾ ಪ್ರದೇಶ ಬೊಮ್ಮಸಂದ್ರ! ಅಕ್ಕಪಕ್ಕದಲ್ಲಿ ಅತ್ತಿಬೆಲೆ, ಜಿಗಣಿ, ವೀರಸಂದ್ರ, ಎಲೆಕ್ಟ್ರಾನಿಕ್ಸ್ ಸಿಟಿ ಇಂಡಸ್ಟ್ರಿಯಲ್ ಏರಿಯಾಗಳು ಬೃಹದಾಕಾರವಾಗಿ ಬೆಳೆದು ಹೆಮ್ಮರವಾಗಿದ್ದು, ಈ ಭಾಗದ ಕೈಗಾರಿಕೆ ಹಾಗೂ ಐಟಿ ಬಿಟಿ ಖದರ್ರೇ ಬೇರೆಯಾಗಿದೆ ಬಿಡಿ! ಹೊಸೂರು ಮೇನ್ ರೋಡ್. ಚೆನ್ನೈ ಸಂಪರ್ಕ ಕಲ್ಪಿಸೋ ನ್ಯಾಷನಲ್ ಹೈವೇ!

ಸಿಕ್ಕಾಪಟ್ಟೆ ವಾಹನ ಸಂಚಾರ.ಈ ಭಾಗದ ಟ್ರಾಫಿಕ್ ಪೊಲೀಸ್‌ಗೆ ಹಗಲು ರಾತ್ರಿ ಬಿಡುವಿಲ್ಲದ ಕೆಲಸ. ಸ್ವಲ್ಪ ಮೈಮರೆತರೂ ಕಿಲೋ ಮೀಟರ್ ಗಟ್ಟಲೆ ಟ್ರಾಫಿಕ್ ಜಾಮ್ ಆಗಿಬಿಡುತ್ತೆ! ಆಮೇಲೆ ಅದನ್ನು ಕ್ಲಿಯರ್ ಮಾಡೋವಷ್ಟರಲ್ಲಿ ಒಂದು ಜನ್ಮ ಎತ್ತಿದಂತಾಗಿ ತಥ್, ಯಾವನಿಗೆ ಬೇಕಯ್ಯ ಈ ಕೆಲಸ....ಅನ್ನುವಂತಾಗುತ್ತದೆ!

ಇಂತಿರ್ಪ ಹೊಸೂರು ಮುಖ್ಯ ರಸ್ತೆಯಲ್ಲಿ, ಅದರಲ್ಲೂ ಹೊಸ ರೋಡ್, ಇಲೆಕ್ಟ್ರಾನಿಕ್ ಸಿಟಿ, ವೀರಸಂದ್ರ, ಬೊಮ್ಮಸಂದ್ರ, ಚಂದಾಪುರ ಅತ್ತಿಬೆಲೆ..... ಭಾಗದಲ್ಲಿ ಟ್ರಾಫಿಕ್ ಪೊಲೀಸ್ ಕೆಲಸ ಮಾಡುತ್ತಿರೋ ಪೊಲೀಸರಿಗೆ ನಮೋನ್ನಮಃ...

ನಮ್ಮ ಟ್ರಾಫಿಕ್ ಪೊಲೀಸರ ಶ್ರಮವನ್ನು ದಿನಂಪ್ರತಿ ಕಣ್ಣಾರೆ ಕಾಣುತ್ತಿರುವ ಬೊಮ್ಮಸಂದ್ರ ಕೈಗಾರಿಕಾ ಪ್ರದೇಶದ ಕೆಲ ಉದ್ಯಮಿಗಳು ತಮ್ಮ ಬೊಮ್ಮಸಂದ್ರ ಇಂಡಸ್ಟ್ರಿಯಲ್ ಅಸೋಸಿಯೇಷಸ್' (BIA) ಅದರ ಮೂಲಕ ಆಗಾಗ ಈ ಭಾಗದ ಪೊಲೀಸರಿಗೆ ಉತ್ತೇಜನ ನೀಡುವ ಉತ್ತಮ ಕಾರ್ಯಕ್ರಮ ಮಾಡುತ್ತಾರೆ. ನಿಜಕ್ಕೂ ಇದು ಅಭಿನಂದನೀಯ ಕಾರ್ಯ. ಹೆಬ್ಬಗೋಡಿ, ಸೂರ್ಯ ಸಿಟಿ, ಜಿಗಣಿ, ಅತ್ತಿಬೆಲೆ, ಸರ್ಜಾಪುರ... ಈ ಭಾಗದ ಲಾ ಅಂಡ್ ಆರ್ಡರ್ ಪೊಲೀಸ್ ಠಾಣೆಗಳಿಗೆ ಉತ್ತಮ ಕಟ್ಟಡ ನಿರ್ಮಾಣಕ್ಕೆ ನೆರವು ನೀಡುವುದರ ಜೊತೆಗೆ, ಜೀಪ್‌ಗಳು, ಬ್ಯಾರಿ ಕೇಡ್ಸ್, ಸಿಸಿ ಕ್ಯಾಮೆರಾ, ಆಂಬುಲೆನ್ಸ್, ಒಂದಷ್ಟು ಮಂದಿ ಗಾರ್ಡ್, ಕುಡಿಯೋ ನೀರಿನ ಸೌಲಭ್ಯ, ಇತ್ಯಾದಿ... ಸೇವೆಗಳನ್ನು ಕಲ್ಪಿಸಿದ್ದಾರೆ.







ಇದೀಗ ಟ್ರಾಫಿಕ್ ಪೊಲೀಸರ ಉತ್ತೇಜಸುವ ಕಾರ್ಯಕ್ಕೂ ಇಳಿದಿರುವ ಬೊಮ್ಮಸಂದ್ರ ಇಂಡಸ್ಟ್ರಿಯಲ್ ಅಸೋಸಿಯೇಷನ್, ಇತ್ತೀಚಿಗೆ ರಸ್ತೆ ಸುರಕ್ಷತಾ ಅಭಿಯಾನ ಕಾರ್ಯಕ್ರಮವನ್ನು ಆಯೋಜಿಸಿ, ಟ್ರಾಫಿಕ್ ಪೊಲೀಸ್ ಅಧಿಕಾರಿಗಳನ್ನು ಹಾಗೂ ರಸ್ತೆಯಲ್ಲಿ ನಿಂತು ಸುರಕ್ಷತೆ ಕಾರ್ಯ ನಿರ್ವಹಿಸುವ ಸಿಬ್ಬಂದಿ ವರ್ಗವನ್ನು ಸನ್ಮಾನಿಸಿ ಗೌರವ ಸಲ್ಲಿಸಿದೆ. ಈ ವಿಷಯದಲ್ಲಿ ಸಂಘದ ಅಧ್ಯಕ್ಷರಾದ ಎ.ಪ್ರಸಾದ್ ಅವರನ್ನು ಅಭಿನಂದಿಸಲೇ ಬೇಕು.




ಬೊಮ್ಮಸಂದ್ರ ಹೆಬ್ಬಗೋಡಿ ಪೊಲೀಸ್ ಠಾಣಾ ವ್ಯಾಪ್ತಿಗೆ ಬರುತ್ತದೆ. ಈ ಮೊದಲು ಆನೇಕಲ್ ತಾಲೂಕು ವ್ಯಾಪ್ತಿಗೆ ಸೇರಿದ್ದ ಹೆಬ್ಬಗೋಡಿ ಇದೀಗ ಬೆಂಗಳೂರು ಸಿಟಿ ಪೊಲೀಸ್ ವ್ಯಾಪ್ತಿಗೆ ಬಂದಿದೆ! ಹೀಗಾಗಿ, ಬೊಮ್ಮಸಂದ್ರ ಇಂಡಸ್ಟ್ರಿಯಲ್ ಏರಿಯಾವನ್ನು ಹೆಬ್ಬಗೋಡಿ, ಎಲೆಕ್ಟ್ರಾನಿಕ್ ಸಿಟಿ ಪೊಲೀಸ್ ಅಧಿಕಾರಿಗಳೇ ರಕ್ಷಿಸಬೇಕಿದೆ. ಹೀಗಾಗಿ, ಈ ಠಾಣೆಗಳ ಟ್ರಾಫಿಕ್ ಅಧಿಕಾರಿ ಹಾಗೂ ಸಿಬ್ಬಂದಿ ವರ್ಗವನ್ನು ಒಂದೆಡೆ ಸೇರಿಸಿ ಅರ್ಥಪೂರ್ಣ ಕಾರ್ಯಕ್ರಮ ನಡೆಸಲಾಗಿತ್ತು.

ಈ ಕಾರ್ಯಕ್ರಮದಲ್ಲಿ ಆಐಅ ಪದಾಧಿಕಾರಿಗಳಾದ ಸಂಜೀವ್ ಸಾವಂತ್, ಶಿವಕುವರ್, ನರೇಂದ್ರ ಕುರ್ಮಾ, ನಾಗರಾಜ್ ಶೆಟ್ಟಿ ಅಶ್ವಥ್, ಮಧುಸೂದನ್, ನೀಲಕಂಠಯ್ಯ, ಲಿಯೋ ಸೆಕ್ಯೂರಿಯಾ, ಮಲ್ಲಿಕಾರ್ಜುನಪ್ಪ, ಸತೀಶ್‌ಕುಮಾರ್, ಲಾರಿ ಮಾಲೀಕರ ಸಂಘದ ಕೃಷ್ಣಾರೆಡ್ಡಿ, ಮಧು ಸೂದನ್ ರೆಡ್ಡಿ, ಕಿರಣ್, ಪ್ರಭಾಕರ್ ರೆಡ್ಡಿ, ಶಿವಪ್ಪ ರೆಡ್ಡಿ ಮುಂತಾದವರು ನೆರೆದು, ಹೆಚ್ ಎಸ್‌ಆರ್ ಸಬ್ ಡಿವಿಷನ್‌ನ ಎಸಿಪಿ ಶ್ರೀನಿವಾಸ್, ಎಲೆಕ್ಟ್ರಾನಿಕ್ಸ್ ಸಿಟಿ ಟ್ರಾಫಿಕ್ ಪೊಲೀಸ್ ಇನ್ಸ್‌ಪೆಕ್ಟರ್ ಶ್ಯಾಮ್, ಪಿಎಸ್‌ಐ ಜವರೇಗೌಡ, ಎಎಸ್‌ಐ ಶಿವಚಂದ್ರಪ್ಪ ಮುಂತಾದ ಮಹನೀಯರನ್ನು ಸನ್ಮಾನಿಸಿದ್ದಾರೆ. BIA ಅಧ್ಯಕ್ಷ ಎ. ಪ್ರಸಾದ್, ಟ್ರಾಫಿಕ್ ಪೊಲೀಸ್ ಕರ್ತವ್ಯದ ಬಗ್ಗೆ, ಅವರ ಶ್ರಮದ ಬಗ್ಗೆ ವರ್ಣಿಸಿ, ಸಾರ್ವಜನಿಕರು ಅವರ ಬೆನ್ನಿಗೆ ನಿಂತು ರಸ್ತೆ ಸುರಕ್ಷತೆ ಕಾಪಾಡಲು ಸಹಕರಿಸಬೇಕು. BIA ಸದಾ ನಮ್ಮ ಪೊಲೀಸರ ಬೆನ್ನಿಗೆ ನಿಲ್ಲುತ್ತದೆ... ಎಂದು ತಿಳಿಸಿ ಮೇಲ್ಕಂಡ ಪೊಲೀಸ್ ಅಧಿಕಾರಿ ವರ್ಗವನ್ನು ಸನ್ಮಾನಿಸಿದ್ದಾರೆ. ☯

# ...ಮಹಿಳೆ ಬೆತ್ತಲೆ ವಿಡಿಯೋ ಬ್ಲ್ಯಾಕ್‌ಮೇಲ್!

4 ☞

ಸಾವಿತ್ರಮ್ಮನಿಗೆ ಗಂಟಲು ಒಣಗಿತ್ತು. ಅಷ್ಟು ದುಡ್ಡು ಎಲ್ಲಿಂದ ತರೋದು ಅನ್ನೋ ಚಿಂತೆ ಒಂದೆಡೆಯಾದರೆ, ಮಾಟ ತೆಗೆಸದಿದ್ದರೆ ತನ್ನ ಮಕ್ಕಳು ಸಾಯುತ್ತರಲ್ಲ... ಎಂಬ ಭಯ ಇನ್ನೊಂದೆಡೆ ಅವರಿಸಿಕೊಂಡಿತ್ತು! ಪಾಪದ ಮಹಿಳೆ, ಸರಿ ಸ್ವಾಮಿಗಳೇ ದುಡ್ಡು ಹೊಂದಿಸಿಕೊಂಡು ಮತ್ತೆ ಬರುತ್ತೇನೆ... ಎಂದು ಹೇಳಿ ಅಲ್ಲಿಂದ ಹೊರಟಿದ್ದಾಳೆ. ಇವಳಿಗೆ ಗಂಡ ಇಲ್ಲಾ... ಎಂಬ ಮಾಹಿತಿ ಗೊತ್ತಾಗಿತ್ತಲ್ಲ, ಗುರೂ ಶಿಷ್ಯ ಇಬ್ಬರೂ ಅತೀವ ಪ್ರೀತಿಯಿಂದ, ಹೆದರಬೇಡ ನಾವಿದ್ದೇವೆ... ದೇವಿ ಆಶೀರ್ವಾದ ಮಾಡ್ತಾಳೆ... ಅಂತೆಲ್ಲ ಓಲೈಸಿ, ಮೊಬೈಲ್ ನಂಬರ್ ಪಡೆದುಕೊಂಡು ಬೀಳ್ಕೊಟ್ಟಿದ್ದಾರೆ!




**ವಾಟ್ಸಪ್ ಕಾಲ್-ವಿಡಿಯೋ ಕಾಲ್...**

ಈ ಬಳಿಕ ಸಾವಿತ್ರಮ್ಮನಿಗೆ ಕೇರಳದಿಂದ ವಾಟ್ಸಪ್ ಮತ್ತು ವಿಡಿಯೋ ಕರೆಗಳು ಬರತೊಡಗಿವೆ. ಗುರು ಉನ್ನಿ ದಾಮೋದರನ್ ಮಲಯಾಳ ದಲ್ಲಿ ಮಾತಾಡಿದ್ದನ್ನು ಶಿಷ್ಯ ಅರುಣ್ ತಮಿಳಿನಲ್ಲಿ ಹೇಳಿ ಅರ್ಥ ಮಾಡಿಸುತ್ತಿದ್ದ! ಈಕೆಗೆ ಅಲ್ಪ ಸ್ವಲ್ಪ ತಮಿಳು ಬರುತ್ತಿದ್ದರಿಂದ ಭಾಷೆಯ ಸಮಸ್ಯೆ ಆಗಲಿಲ್ಲ. ಊಟ ಆಯ್ತಾ... ಚೆನ್ನಾಗಿದ್ದೀರಾ.... ಮಕ್ಕಳು ಮಲಗಿದ್ದಾರ... ಎಂದೆಲ್ಲ ಯೋಗಕ್ಷೇಮ ವಿಚಾರಿಸಿದ ಐನಾತಿಗಳು, ಕಡೆಯಲ್ಲಿ ಮಾಟ ತೆಗೆಸಬೇಕು... ಹುಷಾರ್... ಎಂದು ಬಾಂಬ್ ಸಿಡಿಸುತ್ತಿದ್ದರು! ಸಾವಿತ್ರಮ್ಮ ಭಯದಿಂದ ಕಂಪಿಸುತ್ತಿದ್ದಳು. ಇನ್ನೂ ಹಣ ಹೊಂದಿಸಿಲ್ಲ, ಹೊಂದಿಸಿಕೊಂಡು ಆದಷ್ಟು ಬೇಗ ಬರುತ್ತೇನೆ ಸ್ವಾಮಿ ಎಂದು ಗೋಗರೆಯುತ್ತಿದ್ದಳು! ಇಂಥ ಸನ್ನಿವೇಶದಲ್ಲಿ ಆ ಐನಾತಿ ಮಾಟಗಾರರು ಏನು ಮಾಡಿದ್ದಾರೆ ಗೊತ್ತೇ...

**ನಗ್ನವಾಗಿ ಕೂರಿಸಿದರು!**

ಮಾಟ ತೆಗೆಸುವುದು ತಡವಾಗುತ್ತಿದೆ, ಇದರಿಂದ ನಿಮಗೆ ತೊಂದರೆ ಆಗುತ್ತದೆ! ಸದ್ಯಕ್ಕೆ, ನಾವು ಹೇಳಿದಂತೆ ಕೇಳು, ದೇವಿಗೆ ವಿಶೇಷ ಪೂಜೆ ಮಾಡುತ್ತೇವೆ ಎಂದು ನಂಬಿಸಿ ವಿಡಿಯೋ ಕಾಲ್ ಮೂಲಕವೇ ಸಾವಿತ್ರಿಯ ಬಟ್ಟೆ ಬಿಚ್ಚಿಸಿ ನಗ್ನವಾಗಿ ಕೂರಿಸಿ ಯೋನಿ ಪೂಜೆ ಮಾಡಿದ್ದಾರೆ!!

ಸಾವಿತ್ರಮ್ಮನಿಗೆ ಇದೆಲ್ಲಾ ಹೊಸತು. ಮಾನ ಮರ್ಯಾದೆಗೆ ಅಂಜಿ ಅದೆಲ್ಲ ಬೇಡ ಸ್ವಾಮಿ ಅಂದ್ರೆ, ಅವರು ಮಾಟ ಮಂತ್ರ ಸಾವು ಅಂತೆಲ್ಲ ಹೇಳಿ ಹೆದರಿಸುತ್ತಿದ್ದರು! ಅವರ ಕೈಗೊಂಬೆಯಾಗಿ ನರಳುತ್ತಿದ್ದ ಸಾವಿತ್ರಮ್ಮ, ಯಾವಾಗ ವಿಡಿಯೋ ಕಾಲ್‌ನಲ್ಲಿ ಬೆತ್ತಲೆಯಾಗಿ ಕುಂತಳೋ, ಫಿನಿಷ್! ಆ ಐನಾತಿಗಳು ಅದನ್ನು ರೆಕಾರ್ಡ್ ಮಾಡಿಕೊಂಡು ಮತ್ತೆ ಮತ್ತೆ ಕುಕ್ಕರು ಗಾಲಿನಲ್ಲಿ ಕೂರುವಂತೆ ಬಲವಂತ ಪಡಿಸಿದ್ದಾರೆ!




**ಹೆದರಿಸಿ ಮತ್ತೆ ಕೇರಳಕ್ಕೆ ಕರೆಸಿಕೊಂಡು ರೇಪ್?!**

ಅಷ್ಟೇ ಅಲ್ಲದೆ, ಮತ್ತೊಂದು ವಿಶೇಷ ಪೂಜೆ ಮಾಡಿ, ಮಾಟ ತೆಗೆಯುವುದಾಗಿ ನಂಬಿಸಿ, ಎಷ್ಟಿದೆಯೋ ಅಷ್ಟು ಹಣವನ್ನು ಎತ್ತಿಕೊಂಡು ಬಾರಮ್ಮ... ಅಂತೇಳಿ ಮತ್ತೆ ಕೇರಳಕ್ಕೆ ಕರೆಸಿಕೊಂಡಿದ್ದಾರೆ. ದೇವಸ್ಥಾನದಲ್ಲಿ ಅದಾಗಲೇ ದೇವಿಗೆ ವಿಶೇಷ ಪೂಜೆ ಸಲ್ಲಿಸಿಯಾಗಿದೆ, ಈಗ ಅರಣ್ಯ ಪ್ರದೇಶದಲ್ಲಿ, ಏಕಾಂತದಲ್ಲಿ ಪೂಜೆ ಮಾಡಬೇಕು... ಎಂದು ನಂಬಿಸಿ, ಕಾಡಿಗೆ ಕರೆದೊಯ್ದು ಅಸಹಜ ಲೈಂಗಿಕ ಕ್ರಿಯೆಗೆ ಒತ್ತಾಯಿಸಿ ಹಿಂಸಿಸಿದ್ದಾರೆ ಎಂದು ಬೆಳ್ಳಂದೂರು ಪೊಲೀಸರ ಮುಂದೆ ಕಣ್ಣೀರಿಟ್ಟಿದ್ದಾರೆ ಸಾವಿತ್ರಮ್ಮ! ಕೇರಳದ ತ್ರಿಶ್ಯೂರ್‌ನ ಪೆರಿಂಗೋಟ್ಟುಕ್ಕಾರದಲ್ಲಿ ನಡೆದ ಮೋಸದ ಪೂಜೆ, ತಾನು ಅನುಭವಿಸಿದ ಚಿತ್ರ ಹಿಂಸೆಯ ಬಗ್ಗೆ ಪೊಲೀಸರಿಗೆ ನೀಡಿದ ದೂರಿನಲ್ಲಿ ಸಂತ್ರಸ್ತೆ ಮಹಿಳೆ ಉಲ್ಲೇಖಿಸಿರುವುದನ್ನು ಓದಿದರೆ ಕಣ್ಣೀರು ಬರುತ್ತದೆ!!

**ಅರುಣ ಸಿಕ್ಕಿಬಿದ್ದ ಉನ್ನಿ ಗಾಯಬ್!**

ಈ ಘಟನೆಯಿಂದ ತೀವ್ರ ಆಘಾತಕ್ಕೊಳಗಾಗಿದ್ದ ಮಹಿಳೆ ಅಲ್ಲಿಂದ ಹೇಗೋ ತಪ್ಪಿಸಿಕೊಂಡು ಬೆಂಗಳೂರಿಗೆ ವಾಪಸಾಗಿದ್ದು, ತನಗಾದ ಅನ್ಯಾಯ ಇನ್ನಾರಿಗೂ ಆಗಬಾರದು, ಆ ಕಾಮುಕರಿಗೆ ಕಪಟಿಗಳಿಗೆ ಬುದ್ಧಿ ಕಲಿಸಬೇಕು ಎಂದು ನಿರ್ಧರಿಸಿ ಬೆಳ್ಳಂದೂರು ಠಾಣೆಗೆ ಬಂದು ದೂರು ಸಲ್ಲಿಸಿದ್ದಾರೆ. ಖಡಕ್ ಎಸ್ಪಿ ಗುಣಾರೆ ತನಿಖೆ ಕೈಗೊಂಡು ಆರೋಪಿಗಳ ಬೆನ್ನಟ್ಟಿದ್ದು, ಸದ್ಯ ಶಿಷ್ಯ ಅರುಣ್ ಸಿಕ್ಕಿಬಿದ್ದಿದ್ದಾನೆ. ಗುರು ಉನ್ನಿ ದಾಮೋದರನ್ ಹೇಗೋ ಮಾಹಿತಿ ತಿಳಿದು ಪೊಲೀಸರ ಕೈಗೆ ಸಿಗದೇ ತಲೆ ಮರೆಸಿಕೊಂಡಿದ್ದಾನೆ. ಬೆಳ್ಳಂದೂರ್ ಕ್ರೈಂ ಸಿಬ್ಬಂದಿ ಅವನ ಪತ್ತೆ ಕಾರ್ಯದಲ್ಲಿ ಮುಳುಗಿದ್ದಾರೆ. ☯

# ಸೂಸೈಡ್ ನಾಟಕವಾಡಿದ ನೌಟಂಕಿ ಹೀನಾ ಕೌಸರ್!

**ಮಂಗಳೂರು**
**ಮೋಹನ್ ಬೋಳಂಗಡಿ**

ಕುಂದಾಪುರದ ಚರ್ಚು ರಸ್ತೆಯ ಕೋಡಿ ಸೇತುವೆ ಬಳಿ ತನ್ನ ಸ್ಕೂಟಿಯಲ್ಲಿ ಡೆತ್‌ನೋಟ್ ಬರೆದಿಟ್ಟು ನಾಪತ್ತೆ ಯಾಗಿರುವ ವಿಠ್ಠಲ್‌ವಾಡಿ ನಿವಾಸಿ ಹೀನಾ ಕೌಸರ್‌ಗಾಗಿ ನದಿ ತುಂಬಾ ಜಾಲಾಡಿದರೂ ಯಾವುದೇ ಸುಳಿವು ಸಿಗದ ಹಿನ್ನಲೆಯಲ್ಲಿ ಶೋಧ ಕಾರ್ಯವನ್ನು ಕೈ ಚೆಲ್ಲಲಾಗಿದೆ. ಆದರೆ ಹೀನಾ ಕೌಸರ್ ತನ್ನ ಪ್ರಿಯತಮ ಸಾಹಿಲ್ ಎಂಬಾತನ ಜೊತೆ ಪರಾರಿಯಾಗಿದ್ದಾಳೆ ಎನ್ನುವುದು ಖಚಿತವಾಗುವುದರೊಂದಿಗೆ ಕುಂದಾಪುರ ಪೊಲೀಸರು ನಿಟ್ಟುಸಿರು ಬಿಟ್ಟಿದ್ದಾರೆ. ಸುಮಾರು 2 ವಾರಗಳ ಕಾಲ ನಾಪತ್ತೆಯಾಗಿದ್ದ ಹೀನಾ ಕೌಸರ್ ಪ್ರಿಯತಮ ಸಾಹಿಲ್‌ನ ಸಖ್ಯ ಬಿಟ್ಟು ಹಳೇ ಗಂಡನ ಪಾದವೇ ಗತಿ ಎಂಬಂತೆ ಮರಳಿ ಗೂಡು ಸೇರಿದ್ದಾರೆ. ಒಟ್ಟಾರೆಯಾಗಿ ಕುಂದಾಪುರ ಪೊಲೀಸರು ರಾತ್ರಿ ಹಗಲು ನಿದ್ದೆಗೆಟ್ಟು ಹುಡುಕಿದ್ದೇ ಬಂತು.



ಸಾಹಿಲ್

### ಚಿನ್ನಾಭರಣಗಳೊಂದಿಗೆ ಪರಾರಿ

ಪತ್ನಿ ಹೀನಾಕೌಸರ್ ನಾಪತ್ತೆ ಸುದ್ದಿ ಕೇಳಿ ವಿದೇಶದಿಂದ ಆಕೆಯ ಪತಿ ಇಕ್ಬಾಲ್ ಆಗಮಿಸಿದ್ದು, ಮನೆಯ ಲಾಕರ್ ತೆಗೆದು ನೋಡಿದಾಗ ಸರಿಸುಮಾರು 15 ಪವನ್ ನಷ್ಟು ಚಿನ್ನವನ್ನು ಆಕೆ ಕೊಂಡೋಯ್ದಿರುವುದು ಬೆಳಕಿಗೆ ಬಂದಿದೆ. ಸ್ಕೂಟಿ, ಸೂಸೈಡ್ ನೋಟ್, ಸೇತುವೆ, ನದಿ ಕೇವಲ ಪ್ರಕರಣ ಹಾದಿ ತಪ್ಪಿಸಲು ನೌಟಂಕಿ ಹೀನಾ ರಚಿಸಿದ ಪ್ರಕರಣ ನಾಟಕವೆನ್ನಲಾಗುತ್ತಿದೆ. ಅವಳ ನಾಪತ್ತೆ ಬೆನ್ನಿಗೆ ಹೀನಾಳ ಪ್ರಿಯಕರ ಹೆಮ್ಮಾಡಿ ಮೂಲದ ವಿವಾಹಿತ ಸಾಹಿಲ್ ಸಹಿತ ನಾಪತ್ತೆ ಯಾಗಿರುವುದು ಇಬ್ಬರ ಪ್ರೇಮ್ ಕಹಾನಿಗೆ ಟ್ವಿಸ್ಟ್ ಸಿಕ್ಕಿದಂತಾಗಿದೆ.

### ಯಾರೀಕೆ...

ಕುಂದಾಪುರ ಮುಖ್ಯ ರಸ್ತೆಯ ಫ್ಲಾಟ್ ಒಂದರಲ್ಲಿ ತಾಯಿ ಹಾಗೂ ಇಬ್ಬರು ಪುಟ್ಟ ಮಕ್ಕಳೊಂದಿಗೆ ವಾಸವಿದ್ದ ಹೀನಾಳ ಆರ್ಡರ್‌ಗೆ ತನ್ನ ಪಾಯಿಂಟ್ ಹೋಟೆಲಿನಿಂದ ಬಿಸಿ ಬಿಸಿ ಬಿರಿಯಾನಿ, ತಂದೂರಿ, ಚಿಲ್ಲಿ ಸಪ್ಲೈ ಮಾಡುತಿದ್ದವನು



ಇದೇ ಸಾಹಿಲ್ ಇವನಿಗೂ ಮದುವೆಯಾಗಿ ಎರಡು ಮಕ್ಕಳಿವೆ. ಚಿಲ್ಲಿ ಸಪ್ಲೈ ಮಾಡುತ್ತಲೇ ಹೀನಾಳ ಮೋಹಕ್ಕೆ ಚಿಲ್ ಆಗಿದ್ದಾನೆ. ಇಬ್ಬರೂ ಸತ್ತು ಹೋಗುವಷ್ಟು ಪ್ರೀತಿಗೆ ಬಿದ್ದಿದ್ದಾರೆ. ಅದಕ್ಕೂ ಮುನ್ನ ನೌಟಂಕಿ ಹೀನಾ ಇನ್ನೊಬ್ಬ ಯುವಕನ ಪ್ರೇಮಪಾಶಕ್ಕೆ ಸಿಲುಕಿದ್ದು ಫ್ಲಾಟ್‌ನ ನೆರೆ ನಿವಾಸಿಯಾಗಿದ್ದ ಕುಂದಾಪುರ ಕಂಡ ಬಹು ಚರ್ಚಿತ ಲೇಡಿ ಅಬಿದ ಎಂಬಾಕೆ ಹೀನಾಳಿಗೆ ಸಾತ್ ನೀಡಿದ್ದಾಳೆ. ಆ ಯುವಕನ ಜತೆಯಿರುವ ಅವಳ ಕೆಲವು ಖಾಸಗಿ ವಿಡಿಯೋ ಫೋಟೋಗಳನ್ನು ಕೂಡಾ ಅಬಿದ ತನ್ನ ಮೊಬೈಲ್ ನಲ್ಲಿ ಸೇವ್ ಮಾಡಿಕೊಂಡಿದ್ದಾಳೆನ್ನಲಾಗಿದೆ ಅದ್ಯಾಕೋ ಅಬಿದ ಮತ್ತು ಹೀನಾಳ ನಡುವೆ ಜಗಳ ಏರ್ಪಟ್ಟು ಹೀನಾಳ ಆವತ್ತಿನ ಪ್ರಿಯಕರನನ್ನು ಪೊಲೀಸ್ ಠಾಣೆಗೆ ಕರೆಸಲಾಗಿತ್ತು. ಅಲ್ಲಿ ಇನ್ನೂ ಮುಂದೆ ಹೀನಾಳ ಸುದ್ದಿಗೆ ತಾನು ಹೋಗಲಾರೆ ಎಂದು ಫಿರಾ ಬರೆದು ಕೊಟ್ಟ ಆ ಯುವಕನ ಎಪಿಸೋಡ್ ಅಲ್ಲಿಗೆ ಮುಗಿದಿತ್ತು. ಅದಾಗಲೇ ತನ್ನ ಚೈನೀಸ್ ಫುಡ್ ಸಪ್ಲೈ ಮೂಲಕ ಹೀನಾ ಮನೆಯಲ್ಲಿ ನಿಕಟನಾಗಿದ್ದ ಸಾಹಿಲ್, ಠಾಣೆ ಮೆಟ್ಟಿಲೇರಿದ ಹೀನಾ ಅಬಿದಾ ಕೇಸಿನಲ್ಲಿ ಹೀನಾಳ ಗಂಡ ಇಕ್ಬಾಲ್ ಜತೆ ಠಾಣೆ ತನಕವೂ ಹೋಗಿ ಸಾತ್ ನೀಡಿದ್ದಾನೆ.

ಇಕ್ಬಾಲ್ ತನ್ನ ಹೆಂಡತಿಯನ್ನು ಎಷ್ಟೊಂದು ಹಚ್ಚಿಕೊಂಡಿದ್ದನೆಂದರೆ, ಅರಮನೆಯಂತಹ ಮನೆ ಕಟ್ಟಿಸಿ ಕೊಟ್ಟಿದ್ದಾನೆ, ಚಿನ್ನ ಬಣ್ಣಕ್ಕೆ ಯಾವುದೇ ಕೊರತೆ ಇಲ್ಲದಂತೆ ಕೇಳಿದ್ದು ತಂದು ಕೊಟ್ಟಿದ್ದಾನೆ. ಅವಳೇ ಚಾಯ್ಸ್ ಮಾಡಿದ ಹಡಗಿನಂತಹ ಕಾರನ್ನು ಇತ್ತೀಚೆಗಷ್ಟೇ ಖರೀದಿಸಿದ್ದಾನೆ. ಅವನೆಷ್ಟು ಅಮಾಯಕನೆಂದರೆ ಹೆಂಡತಿಯ ಮೊದಲ ಪ್ರಿಯಕರನಿಂದ ಇಷ್ಟೆಲ್ಲಾ ರಾದ್ಧಾಂತ ನಡೆದು, ಠಾಣೆ ಮೆಟ್ಟಿಲು ಹತ್ತಿ ಬಂದರೂ ಅವಳನ್ನು ಕ್ಷಮಿಸಿದ್ದಾನೆ. ಆದದನ್ನೆಲ್ಲಾ ಮರೆತು ಬಿಡು ಪುಟ್ಟ ಮಕ್ಕಳಿದ್ದಾರೆ ಅವರ ಭವಿಷ್ಯದ ಬಗ್ಗೆ ಯೋಚಿಸು ಎಂದು ಬುದ್ಧಿ ಹೇಳಿದ್ದಾನೆ. ಸಾಹಿಲ್‌ಗೆ ಅದೆಷ್ಟು ನಂಬಿದ್ದಾನೆಂದರೆ ಮನೆ ಕಡೆ ನೋಡ್ತಾ ಇರು ಎಂದು ಹೇಳಿ ತಾನು ವಿಮಾನ ಹತ್ತಿದ್ದಾನೆ.

ಇದೀಗ ಹೆಂಡತಿಯ ವಿಲಕ್ಷಣ ಸುದ್ದಿ ಕೇಳಿ ಊರಿಗೆ ಬಂದಿದ್ದಾನೆ. ಮನೆ ಸಹಿತ ಎಲ್ಲರ ಬದುಕನ್ನೂ ಖಾಲಿ ಮಾಡಿ ಹೋದ ಹೀನಾಳನ್ನು ಸೈತಾನಿ ರೂಪ ಕಂಡು ತತ್ತರಿಸಿ ,ಏನೊಂದು ಅರ್ಥವಾಗದೇ ಅಚ್ಚರಿಯ ಕಂಗಳಿಂದ ದಿಟ್ಟಿಸುತ್ತಿರುವ ಮುಗ್ಧ ಮಕ್ಕಳನ್ನು ತಬ್ಬಿಕೊಂಡು ಕಣ್ಣೀರು ಸುರಿಸುತ್ತಿದ್ದಾನೆ.

### ಸ್ಕೂಟಿ, ಡೆತ್ ನೋಟ್ ಪತ್ತೆ!

ಕುಂದಾಪುರ ಚರ್ಚು ರಸ್ತೆಯ ಕೋಡಿ ಸೇತುವೆ ಬಳಿ ಸ್ಕೂಟಿ ನಿಲ್ಲಿಸಿ ವಿವಾಹಿತ ಎರಡು ಮಕ್ಕಳ ತಾಯಿ ಬೆಳ್ಳಂಬೆಳ್ಳಗೆ ನಾಪತ್ತೆಯಾಗಿದ್ದು, ಸ್ಕೂಟಿ ಬಳಿ ಆಕೆಯ ಚಪ್ಪಲಿ ಹಾಗೂ ಆಕೆ ಬರೆದಿರುವ ಡೆತ್ ಪತ್ತೆಯಾಗಿದೆ. ಅಬಿದ ಎಂಬ ಸ್ವಜಾತಿಯ ಖತರ್ನಾಕ್ ಮಹಿಳೆ ತನಗೆ ಬ್ಯಾಂಕ್‌ನಿಂದ ಚಿನ್ನ ಬಿಡಿಸಿ ಕೊಡುವಂತೆ ಹಣಕ್ಕಾಗಿ ಬ್ಲಾಕ್ ಮೇಲ್ ಮಾಡುತ್ತಿದ್ದು, ನನ್ನ ಕೆಲವು ಖಾಸಗಿ ವಿಡಿಯೋಗಳು ಆಕೆಯ ಬಳಿ ಇದೆ ಅದನ್ನು ಅವಳು ವಿದೇಶದಲ್ಲಿರುವ ನನ್ನ ಗಂಡನಿಗೆ ಸೆಂಡ್ ಮಾಡಿದ್ದಾಳೆ ಇದರಿಂದ ಬೇರೆ ದಾರಿ ಇಲ್ಲದೆ ಸಾವನ್ನು ಅಪ್ಪಿಕೊಳ್ಳುತ್ತಿದ್ದೇನೆ ಎಂಬರ್ಥದಲ್ಲಿರುವ ಸೂಸೈಡ್ ನೋಟ್ ಓದುತ್ತಲೇ ಬೆಚ್ಚಿ ಬಿದ್ದ ಪೊಲೀಸರು, ಅಗ್ನಿಶಾಮಕ ದಳದೊಂದಿಗೆ ಜಂಟಿಯಾಗಿ ಫಿಲ್ಡಿಗೆ ಇಳಿದು ಬಿಟ್ಟಿದ್ದಾರೆ. ಆದರೆ ಸಂಜೆ ತನಕ ಇಡೀ ನದಿಯನ್ನು ಜಾಲಾಡಿದರೂ ಆಕೆಯ ಸುಳಿವು ಲಭ್ಯವಾಗದೇ ಪೊಲೀಸರು ಹುಡುಕಾಟ ಸ್ಥಗಿತಗೊಳಿಸಬೇಕಾಯ್ತು.ಆದರೆ ಅಷ್ಟರಲ್ಲಾಗಲೇ ಅವಳ ಪ್ರಿಯಕರ ಎನ್ನಲಾದ ಹೆಮ್ಮಾಡಿ ಮೂಲದ ಸಾಹಿಲ್ ಎಂಬ ಯುವಕನೂ ನಾಪತ್ತೆಯಾಗಿ ಪ್ರಕರಣ ಮತ್ತೊಂದು ವಿಭಿನ್ನ ತಿರುವು ಪಡೆದು ಕೊಂಡಿದೆ.

### ಯಾಮಾರಿಸಿದ ಹೀನಾ ಕೌಸರ್?

ಅಂದ ಹಾಗೆ ಅವಳು ಹೀನಾ ಕೌಸರ್ ಉಡುಪಿ ಮೂಲದವಳು. ಗಂಡ ವಿದೇಶದಲ್ಲಿದ್ದಾನೆ ಮೂರು ಹಾಗೂ ಒಂದನೇ ತರಗತಿ ಕಲಿಯುತ್ತಿರುವ ಎರಡು ಪುಟ್ಟ ಮಕ್ಕಳಿವೆ. ವಿಠ್ಠಲವಾಡಿಯಲ್ಲಿ ವಾಸ ಇದು ಹೀನಾಳ ಪುಟ್ಟ ಬಯೋಡಾಟ. ಈ ಹಿಂದೆ ಎಂ.ಪಿ ರಸ್ತೆಯಲ್ಲಿ ಬಾಡಿಗೆ ಮನೆಯಲ್ಲಿರುವ ಅಬಿದಾ ಎಂಬ ಬಹು ಚರ್ಚಿತ ಮಹಿಳೆಯ ಸಂಪರ್ಕಕ್ಕೆ ಬಂದ ಹೀನಾ ಅವಳೊಂದಿಗೆ ನಡೆಸಿದ ಹಣಕಾಸಿನ ವ್ಯವಹಾರದಲ್ಲಿ ಶರಂಪರ ಕದನಕ್ಕೆ ಇಳಿದು ಬಿಟ್ಟಿದ್ದಾಳಂತೆ. ಇಬ್ಬರ ಜಟಾಪಟಿ ಠಾಣೆಯ ಮೆಟ್ಟಿಲಿನ ತನಕವೂ ತಲುಪಿದೆ. ಅದೊಂದು ಮಗ್ಗಲಾದರೆ ಹೀನಾಳ ಇನ್ನೊಂದು ಮಗ್ಗಲಲ್ಲಿ ಸಾಹಿಲ್ ಎಂಬ ವಿವಾಹಿತ ಸದ್ದು ಮಾಡಿದ್ದಾನೆ. ಹೆಮ್ಮಾಡಿ ಮೂಲದ ಇವನಿಗೆ ಕುಂದಾಪುರದಲ್ಲಿ ಬಿರಿಯಾನಿ ಹೋಟೆಲ್ ಇದೆ. ಮದುವೆಯಾಗಿ ಪುಟ್ಟ ಎರಡು ಮಕ್ಕಳ ತಂದೆಯಾಗಿದ್ದಾನೆ. ಅದ್ಯಾವುದೋ ಗಳಿಗೆಯಲ್ಲಿ ಹೀನಾಳ ಪರಿಚಯವಾಗಿ ಅವಳ ತೆವಲಿಗೆ ಬಿದ್ದಿದ್ದಾನೆ ಇಬ್ಬರೂ ಎರಡು ಜನ್ಮಕಾಗುವಷ್ಟು ಪ್ರೀತಿಯಲ್ಲಿ ಬಿದ್ದು ಬಿಟ್ಟಿದ್ದಾರೆ. ಇಬ್ಬರ ನಾ ಜಾಯಿಸ್ ರಿಸ್ತಾ ಸಾಹಿಲ್ ಮನೆ ತನಕವೂ ಕೇಳಿ ಬಂದು ಎರಡೂ ಕುಟುಂಬಗಳಲ್ಲೂ ಅಸಹನೆ ಭುಸುಗುಟ್ಟಿದೆ ಹಿರಿಯರ ಬುದ್ಧಿ ವಾದದಲ್ಲಿ ತೆರೆ ಮರೆಯ ಸಂಧಾನವಾಗಿದೆ ಇದು ಹೀನಾ ಮಿಸ್ಸಿಂಗ್ ಸ್ಟೋರಿಯ ಹಿಂದಿನ ಶಾರ್ಟ್ ಫ್ಲಾಶ್ ಬ್ಯಾಕ್. ಕೇಳಿ ಬರುವ ಹಾಗೆ ತಡ ರಾತ್ರಿ ಹೀನಾ ಹಾಗೂ ಸಾಹಿಲ್ ಇಬ್ಬರೂ ಕೋಡಿ ಸೇತುವೆ ಮೇಲೆ ಗೋಚರಿಸಿದ್ದಾರೆ ಎಂಬ ಮಾಹಿತಿ ಇದೆ. ತನ್ನ ಮನೆ ಬಿಡುವ ಮುನ್ನ ಬೊಗಸೆ ತುಂಬುವಷ್ಟು ಚಿನ್ನವನ್ನು ಸಾಹಿಲ್ ತೆಗೆದುಕೊಂಡು ಬಂದರೆ, ತನ್ನ ಮಗಳಿನ ಕತ್ತಿನಲ್ಲಿದ್ದ ಚಿನ್ನದ ಸರವನ್ನು ಹೀನಾ ಎತ್ತಾಕಿ ತಂದಿದ್ದಾಳೆ. ಇಬ್ಬರೂ ತಮ್ಮ ಸ್ಕೂಟರುಗಳ ಮೇಲೆ ಕೋಡಿ ಸೇತುವೆ ಬಳಿ ಬಂದಿದ್ದಾರೆ. ಅಲ್ಲೇನಾಯ್ತೋ ನೋಡುವ ಎಂದರೆ ಸೇತುವೆಗೆ ಅಳವಡಿಸಲಾದ ಸಿಸಿ ಕೆಮೊ ಉಸಿರು ಚೆಲ್ಲಿ ಅದೆಷ್ಟೋ ಕಾಲವಾಗಿದೆ.

ಇಲ್ಲಿ ಹೀನಾ ತನ್ನ ಸ್ಕೂಟಿಯಲ್ಲಿ ಡೆತ್ ನೋಟ್ ಇರಿಸಿ ಹೊಳೆಗೆ ಹಾರಿ ಆತ್ಮಹತ್ಯೆ ಮಾಡಿಕೊಂಡಂತೆ ಸೀನ್ ಕ್ರಿಯೇಟ್ ಮಾಡಿದ್ದಾಳಾ? ಗೊತ್ತಿಲ್ಲಾ. ಅಚ್ಚರಿ ಎಂಬಂತೆ ಮಧ್ಯಾಹ್ನದ ವೇಳೆ ಸಾಹಿಲ್ ನಾಪತ್ತೆಯಾಗಿರುವ ಖಬರ್ ಅವನ ಮನೆಯಿಂದ ಎದ್ದು ಬಂದಿದೆ. ಕುಂದಾಪುರ ಲೊಕೇಶನ್ ತೋರಿಸುವ ಇಬ್ಬರ ಮೊಬೈಲ್ ಗಳೂ ಸ್ವಿಚ್ ಆಫ್ ಆಗಿದೆ. ಅಂದಹಾಗೆ ಹೀನಾ ಬೆಳಗಿನ ಜಾವ ಹೊಳೆಗೆ ಹಾರಿದ್ದಾಳೆಂದು ಊಹಿಸಲಾದ ಸಮಯ ನದಿಯಲ್ಲಿ ಇಳಿತವಿದ್ದು ಮೊಳಕಾಲಷ್ಟು ನೀರಿದ್ದಿರಬಹುದು ಎಂದು ಅದೇ ಸಮಯದಲ್ಲಿ ಸೇತುವೆ ಬಳಿ ಬಲೆ ಹಾಕುವ ಮೀನುಗಾರರು ತಮ್ಮ ಕಣ್ಣಿಗೆ ಬೀಳದೆ ನದಿಗೆ ಹಾರಿರುವ ಹೀನಾಳ ಬಗ್ಗೆ ಹೇಳುತ್ತಾರೆ. ಇಷ್ಟಾಗಿಯೂ ನದಿಯಲ್ಲಿ ಗೋಚರಿಸದ ಹೀನಾಳಿಗಾಗಿ ಪೊಲೀಸರು, ಅಗ್ನಿ ಶಾಮಕ ದಳ ದಿನವಿಡೀ ಜಾಲಾಡಿದೆ. ಆದರೆ ಪರಿಣಾಮ ಶೂನ್ಯ.



### ವಿದೇಶದಿಂದ ಬಂದ ಪತಿ

ಪತ್ನಿಯ ನಾಪತ್ತೆ ಸುದ್ದಿ ಕೇಳಿ ವಿದೇಶದಿಂದ ಆಕೆಯ ಪತಿ ಇಕ್ಬಾಲ್ ಆಗಮಿಸಿದ್ದು, ಮನೆಯ ಲಾಕರ್ ತೆಗೆದು ನೋಡಿದಾಗ ಸರಿಸುಮಾರು 15ಪವನ್‌ನಷ್ಟು ಚಿನ್ನವನ್ನು ಆಕೆ ಕೊಂಡೊಯ್ದಿರುವುದು ಬೆಳಕಿಗೆ ಬಂದಿದೆ. ಸ್ಕೂಟಿ,


ಹೀನಾ ಕೌಸರ್

ಸೇತುವೆ, ನದಿ, ಸೂಸೈಡ್ ನೋಟ್ ಮುಂತಾದುಗಳನ್ನು ಪ್ರಕರಣವನ್ನು ತನಿಖೆಯ ಹಾದಿ ತಪ್ಪಿಸಲು ನೌಟಂಕಿ ಹೀನಾ ರಚಿಸಿದ ನಾಟಕವೆನ್ನಲಾಗುತ್ತಿದೆ. ಅವಳ ನಾಪತ್ತೆ ಬೆನ್ನಿಗೆ ಹೆಮ್ಮಾಡಿ ಮೂಲದ ವಿವಾಹಿತ ಸಾಹಿಲ್ ಸಹ ನಾಪತ್ತೆ ಯಾಗಿರುವುದು ಇಬ್ಬರ ಪ್ರೇಮ್ ಕಹಾನಿಗೆ ಟ್ವಿಸ್ಟ್ ಸಿಕ್ಕಿದಂತಾಗಿದೆ.

ಮೊದಲು ಕುಂದಾಪುರ ಮುಖ್ಯ ರಸ್ತೆಯ ಫ್ಲಾಟ್ ಒಂದರಲ್ಲಿ ತಾಯಿ ಹಾಗೂ ಇಬ್ವರು ಪುಟ್ಟ ಮಕ್ಕ ಳೊಂದಿಗೆ ವಾಸವಿದ್ದ ಹೀನಾಳ ಫುಡ್ ಆರ್ಡರ್ ಗೆ ತನ್ನ ಫುಡ್ ಮಾರ್ಕ್ ಹೋಟೆಲಿನಿಂದ ಬಿಸಿಬಿರಿಯಾನಿ, ತಂದೂರಿ, ಚಿಲ್ಲಿ ಸಪ್ಲೈ ಮಾಡುತಿದ್ದವನು ಇದೇ ಸಾಹಿಲ್, ಇವನಿಗೂ ಮದುವೆಯಾಗಿ ಎರಡು ಮಕ್ಕಳಿವೆ. ಚಿಲ್ಲಿ ಸಪ್ಲೈ ಮಾಡುತ್ತಲೇ ಹೀನಾಳ ಮೋಹಕ್ಕೆ ಚಿಲ್ ಆಗಿದ್ದಾನೆ. ಇಬ್ಬರೂ ಸತ್ತು ಹೋಗುವಷ್ಟು ಪ್ಯಾರ್ ಎಂಬ ತೆವಲಿಗೆ ಬಿದ್ದಿದ್ದಾರೆ. ಸಾಹಿಲ್‌ನ ಜತೆ ಪ್ರಣಯಕ್ಕೂ ಮುನ್ನ ಹೀನಾ ಫ್ಲಾಟ್‌ನ ನೆರೆ ನಿವಾಸಿಯಾಗಿದ್ದ ಕುಂದಾಪುರ ಕಂಡ ಬಹು ಚರ್ಚಿತ ಲೇಡಿ ಅಬಿದ ಎಂಬಾಕೆಯ ಸ್ನೇಹದಿಂದ ಇನ್ನೊಬ್ಬ ಅನ್ಯ ಮತೀಯ ಯುವಕನ ಪ್ರೇಮಪಾಶಕ್ಕೆ ಸಿಲುಕಿದ್ದಾಳೆ ಈ ಅಬಿದಾ ಎಂತಹ ಖತರ್ನಾಕ್ ಎಂದರೆ ಆ ಯುವಕ ಮತ್ತು ಹೀನಾಳ ಖಾಸಗಿ ಕ್ಷಣಗಳನ್ನು ಸದ್ದಿಲ್ಲದೇ ತನ್ನ ಮೊಬೈಲ್‌ನಲ್ಲಿ ತುಂಬಿಸಿಕೊಂಡಿದ್ದಾಳೆ.ಯಾವಾಗ ಸಾಹಿಲ್ ನ ಹೆಜ್ಜೆಗಳು ತನ್ನ ಬೆಡ್‌ರೂಮ್‌ನ ತನಕ ಬರಲಾರಂಭಿಸಿದವೋ, ಹಳೆ ಪ್ರೇಮಿಯನ್ನು ಬೇಕೆಂದೆ ಅವಾಯ್ಡ್ ಮಾಡಲಾರಂಭಿಸಿದ್ದಾಳೆ ಹೀನಾ. ಅಷ್ಟರ ತನಕ ಪುಕ್ಕಟೆ ಮಜಾ ಉಡಾಯಿಸಿದ ಯುವಕ ಅವಳ ಕಡೇಗೆಣನೆಗೆ ಕುದ್ದು ಹೋಗಿ ತಿರುಗಿ ಬಿದ್ದಿದ್ದಾನೆ ವಿಡಿಯೋ ಶೇರ್ ಮಾಡುವುದಾಗಿ ಧಮ್ಕಿ ಹಾಕಿದ್ದಾನೆ ಇದೇ ವಿಚಾರಕ್ಕೆ ಅಬಿದ ಮತ್ತು ಹೀನಾಳ ನಡುವೆ ಶರಂಪರ ಜಗಳವಾಗಿ ಪ್ರಕರಣ ಪೊಲೀಸ್ ಠಾಣೆ ತನಕವೂ ಹೋಗಿದೆ. ಅಲ್ಲಿ ಆ ಯುವಕನನ್ನು ಕರೆಸಿ ಇನ್ನೂ ಮುಂದೆ ಹೀನಾಳ ಸುದ್ದಿಗೆ ತಾನು ಹೋಗಲಾರೆ ಎಂದು ಮುಚ್ಚಳಿಕೆ ಬರೆಸಿ ಕೊಳ್ಳಲಾಗಿತ್ತು. ಆ ಯುವಕನ ಎಪಿಸೋಡ್ ಅಲ್ಲಿಗೆ ಮುಗಿದು ಹೋಗಿದ್ದರೂ ಅಬಿದ ಮತ್ತು ಹೀನಾಳ ನಡುವಿನ ವೈಮನಸ್ಸು ಮಾತ್ರ ಹಾಗೆ ಉಳಿದು ಹೋಗಿತ್ತು. ಅದಾವಾಗ ಈ ಪ್ರಕರಣದಲ್ಲಿ ಹೀನಾ ಮತ್ತು ಆಕೆಯ ಗಂಡ ಇಕ್ಬಾಲ್‌ನಿಗೆ ಸಾತ್ ಕೊಟ್ಟವನು ಹೀನಾಳ ಮನೆಗೆ ಚಿಲ್ಲಿ ಸಪ್ಲೈ ಮಾಡಿ ಬೆಡ್‌ರೂಮ್ ತನಕ ಸಾಗುತ್ತಿದ್ದವನು ಇದೇ ಸಾಹಿಲ್ ಇದು ಹೀನಾಳ ಕ್ರೈಮ್ ಫೈಲ್!

☞ 14

# ‘ಪಂಕಜ’ ಖ್ಯಾತಿಯ ಶೆಫಾಲಿ ಹಾರ್ಟ್ ಅಟ್ಯಾಕ್ ಡೆತ್!



ಬಾಲಿವುಡ್‌ನ ಖ್ಯಾತ ನಟಿ ಹಾಗೂ ಮಾಡೆಲ್ ಶೆಫಾಲಿ ಜರಿವಾಲಾ ಕಳೆದ ಶುಕ್ರವಾರ ತಡರಾತ್ರಿ ಹೃದಯ ಸ್ತಂಭನದಿಂದ ನಿಧನ ಹೊಂದಿದ್ದಾರೆ. ಈ ಸುದ್ದಿ ತಿಳಿಯುತ್ತಿದ್ದಂತೆ ಬಾಲಿವುಡ್‌ನ ನಟ, ನಟಿಯರು ಬಿಗ್ ಶಾಕ್‌ಗೆ ಒಳಗಾಗಿದ್ದಾರೆ. ಕನ್ನಡದಲ್ಲಿ ಪುನೀತ್ ರಾಜ್‌ಕುಮಾರ್ ನಟನೆಯ ‘ಹುಡುಗರು’ ಸಿನಿಮಾದಲ್ಲಿ ಪಂಕಜ... ಸಾಂಗ್‌ಗೆ ಶೆಫಾಲಿ ಜರಿವಾಲಾ ಹೆಜ್ಜೆ ಹಾಕಿದ್ದರು. ಈ ಹಾಡು ಇಂದಿಗೂ ಆಗಾಗ ಟಿವಿಗಳಲ್ಲಿ ಬರುತ್ತದೆ. ಜಾತ್ರೆ ಮತ್ತಿತರೇ ಫಂಕ್ಷನ್‌ಗಳಲ್ಲಿ ಈ ಹಾಡು ಮೊಳಗಿ ನೆರೆದ ಜನ ಡಾನ್ಸ್ ಮಾಡುತ್ತಾರೆ.

ನಟಿ ಶೆಫಾಲಿಗೆ ಶುಕ್ರವಾರ ತಡರಾತ್ರಿ ಎದೆನೋವು ಕಾಣಿಸಿಕೊಂಡಿದೆ. ತಕ್ಷಣ ಶೆಫಾಲಿ ಅವರನ್ನು ಅವರ ಪತಿ ಪರಾಗ್ ತ್ಯಾಗಿ ಹಾಗೂ ಕುಟುಂಬಸ್ಥರು ಮುಂಬೈನ ಬೆಲ್‌ವ್ಯೂ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದರು. ಆದರೆ, ಅಷ್ಟರಲ್ಲಾಗಲೇ ಶೆಫಾಲಿ ಉಸಿರು ನಿಂತು ಹೋಗಿತ್ತು! ಆಸ್ಪತ್ರೆಯಿಂದ ಹೊರ ಬರುವಾಗ ಪತಿ ಪರಾಗ್ ತ್ಯಾಗಿ ಯಾವುದೇ ಪ್ರತಿಕ್ರಿಯೆ ನೀಡದೇ ಹಾಗೇ ಹೋದರು ಎನ್ನಲಾಗಿದೆ.

ಅಂದಹಾಗೆ, 2002ರಲ್ಲಿ ಕಾಂಟಾ ಲಗಾ ಎನ್ನುವ ಹಾಡಿನ ಮೂಲಕ ಶೆಫಾಲಿ ಜರಿವಾಲಾ ಹೆಚ್ಚು ಪ್ರಖ್ಯಾತಿಯನ್ನು ಪಡೆದಿದ್ದರು. ಹಿಂದಿ ಬಿಗ್‌ಬಾಸ್- 13ರಲ್ಲಿ ಶೆಫಾಲಿ ಕಾಣಿಸಿಕೊಂಡಿದ್ದರು. ಶೆಫಾಲಿ ಜರಿವಾಲಾ ಹಾಗೂ ಉತ್ತರ ಪ್ರದೇಶ ಮೂಲದ ಪರಾಗ್ ತ್ಯಾಗಿ ಅವರು 2014ರಲ್ಲಿ ಮದುವೆಯಾಗಿದ್ದರು.

ಮದುವೆ ಆದ ಮೇಲೂ ಶೆಫಾಲಿ ಹಲವಾರು ರಿಯಾಲಿಟಿ ಶೋಗಳಲ್ಲಿ ಕಾಣಿಸಿಕೊಂಡಿದ್ದರು. ಪರಾಗ್ ತ್ಯಾಗಿ, ಶೆಫಾಲಿ ಜರಿವಾಲಾ ಟೆಲಿವಿಷನ್ ಹಾಗೂ ಸಿನಿಮಾ ಎರಡರಲ್ಲೂ ಕೆಲಸ ಮಾಡುತ್ತಿದ್ದವರು.



ಶೆಫಾಲಿ ಜರಿವಾಲಾ ಅವರು ಗುಜರಾತ್‌ನ ಅಹಮದಾಬಾದ್‌ನಲ್ಲಿ ಡಿಸೆಂಬರ್ 15, 1982ರಂದು ಜನಿಸಿದ್ದರು. ಇಸವಿ 2002ರಲ್ಲಿ ಕಾಂಟಾ ಲಗಾ ಹಾಡಿನ ಮೂಲಕ ಹೆಸರಾಗಿದ್ದ ಶೆಫಾಲಿ, ರಾತ್ರೋರಾತ್ರಿ ಸೆನ್ಸೇಷನ್ ಕ್ರಿಯೇಟ್ ಮಾಡಿದ್ದರು. 1964ರಲ್ಲಿ ಬಿಡುಗಡೆಯಾದ ಸಂಜೋತಾ ಸಿನಿಮಾದ ಪ್ರಸಿದ್ಧ ಹಾಡಾದ ಕಾಂಟಾ ಲಗಾ... ಹಾಡನ್ನು ಮರುಸೃಷ್ಟಿಸಲಾಗಿತ್ತು. ಆ ಹಾಡನ್ನು ಲತಾ ಮಂಗೇಶ್ಕರ್ ಅವರು ಹಾಡಿದ್ದು ಕಲ್ಯಾಣ್‌ಜಿ-ಆನಂದ್‌ಜಿ ಸಂಗೀತ ನೀಡಿದ್ದರು.

ಹಿಂದಿ ಬಿಗ್‌ಬಾಸ್ ಸೀಜನ್-13ರಲ್ಲಿ ಶೆಫಾಲಿ ಭರ್ಜರಿಯಾಗಿ ಮಿಂಚಿದ್ದಳು. ಬೂಗಿ ಹೂಗಿ, ನಾಚ್ ಬಲಿಹೇ ಶೋಗಳಲ್ಲಿ ಭಾಗವಹಿಸಿ ಫೇಮಸ್ ಆಗಿದ್ದಳು. 2024ರಲ್ಲಿ ಬಂದಿದ್ದ ಸೈತಾನಿ ರಾಸ್ ಮೈನ್ ಚಿತ್ರದಲ್ಲಿ ಕಪಾಲಿಕ ಪಾತ್ರ ನಿರ್ವಹಿಸಿ ಜಗದ್ವಿಖ್ಯಾತಿ ಪಡೆದಿದ್ದಳು.



ಇವಳ ಗಂಡ ಪರಾಗ್ ತ್ಯಾಗಿ ಧಾರಾವಾಹಿ ಲೋಕದಲ್ಲಿಯೇ ಇರುವುದರಿಂದ ಇವಳಿಗೆ ಇಂತಹ ಹಲವು ಶೋಗಳಲ್ಲಿ ಮಿಂಚುವ ಅವಕಾಶ ಸಿಕ್ಕಿತ್ತು ಎನ್ನಬಹುದು. ಟಿವಿ ಲೋಕದಲ್ಲಿ ಅಷ್ಟೊಂದು ಮಿಂಚಿದ ಶೆಫಾಲಿಗೆ ಬಿಗ್ ಸ್ಕ್ರೀನ್ ಮೇಲೆ ಅಷ್ಟಾಗಿ ಮಿಂಚುವ ಅವಕಾಶ ಸಿಗಲೇ ಇಲ್ಲ. ಮುಜಸೇ ಶಾದಿ ಕರೋಗಿ ಚಿತ್ರದಲ್ಲಿ ಸಣ್ಣ ಪಾತ್ರವೊಂದರಲ್ಲಿ ಅಭಿನಯಿಸಿದ್ದನ್ನು ಬಿಟ್ಟರೆ ಅಂತಹ ಇನ್ನೊಂದು ಪಾತ್ರ ಸಿಗಲೇ ಇಲ್ಲ. ಬರೀ ಐಟಂ ಸಾಂಗ್ ಮಾಡುವುದೇ ಆಗಿತ್ತು. ಇದೇ ದಾರಿಯಲ್ಲಿ ಸಾಗಿ ನಮ್ಮ ಸ್ಯಾಂಡಲ್‌ವುಡ್‌ಗೆ ಕಾಲಿಟ್ಟು ‘ಹುಡುಗರು’ ಚಿತ್ರದಲ್ಲಿ ಪಂಕಜ... ಹಾಡಿಗೆ ನರ್ತಿಸಿದ್ದಳು. ಈ ಹಾಡು ಸೂಪರ್ ಹಿಟ್ ಆಗಿತ್ತು. ಕಾಕತಾಳೀಯವೇನೆಂದರೆ, ಪುನೀತ್ ರಾಜ್‌ಕುಮಾರ್ ಕೂಡ ಕಾರ್ಡಿಯಾಕ್ ಅರೆಸ್ಟಾಗಿಯೇ ತೀರಿಕೊಂಡರು. ಇಂದು ಈ ಪಂಕಜ ಕೂಡ ಇದೇ ರೀತಿ ತೀರಿಕೊಂಡಿದ್ದಾಳೆ!

# ದಿಸ್ ಈಸ್ ಫಕಿ...ಗ್ ಇಂಡಿಯಾ! ನೀವೆಲ್ಲ ರೇಪಿಸ್ಟ್‌ಗಳು!! ಕನ್ನಡಿಗನಿಗೆ ಹಿಂದಿ ಮಹಿಳೆ ಅವಾಜ್!!!

ಕರ್ನಾಟಕದಲ್ಲಿ ಹಿಂದಿ ಭಾಷಿಕರ ದರ್ಪ-ಅಟ್ಟಹಾಸ ಮುಂದುವರಿದಿದೆ! ಇತ್ತೀಚೆಗೆ ಪರಭಾಷಿಕರು ಕನ್ನಡ, ಕನ್ನಡಿಗರ ವಿಚಾರವಾಗಿ ಕಾಲು ಕೆರೆದು ಜಗಳಕ್ಕೆ ಬರುತ್ತಿರುವ ಘಟನೆಗಳು ಮರುಕಳಿಸುತ್ತಲೇ ಇವೆ. ಇದು ರಾಷ್ಟ್ರಮಟ್ಟದಲ್ಲಿ ಸುದ್ದಿಯಾಗಿದ್ದೂ ಇದೆ. ಈ ಘಟನೆಗಳು ರಾಜಧಾನಿ ಬೆಂಗಳೂರಿನಲ್ಲೇ ಅಧಿಕವಾಗಿದೆ. ಇದೀಗ ಹಿಂದಿ ಮಹಿಳೆಯೊಬ್ಬರು ಕನ್ನಡಿಗರೊಂದಿಗೆ ಕಿರಿಕ್ ಮಾಡಿಕೊಂಡಿದ್ದಾರೆ. ಅಲ್ಲದೆ ವಾಗ್ವಾದ ಮಾಡುವ ಭಾರತದ ಬಗ್ಗೆಯೂ ಇಂಗ್ಲೀಷ್‌ನಲ್ಲಿ ಅತಿ ಕೆಟ್ಟ ಪದ ಬಳಸಿದ್ದಾರೆ. ಈ ವಿಡಿಯೋ ಸೋಷಿಯಲ್ ಮೀಡಿಯಾದಲ್ಲಿ ಹರಿದಾಡುತ್ತಿದೆ. ಭಾರತದ ಬಗ್ಗೆಯೇ ಆ ಮಹಿಳೆ ಈ ರೀತಿ ಪದ ಬಳಕೆ ಮಾಡಿರುವುದಕ್ಕೆ ಆಕ್ರೋಶ ವ್ಯಕ್ತವಾಗುತ್ತಿದೆ. ಆ ಮಹಿಳೆ ಬಳಸಿದ ಆ ಪದ ಯಾವುದು? ಎಂಬುದನ್ನು ಮುಂದೆ ಓದಿಕೊಳ್ಳಿ...





ಈ ವಿಡಿಯೋ ವೈರಲ್ ಆಗಿದ್ದು, ಅನಿಲ್ ಎಂಬುವವರು ಘಟನೆ ಬಗ್ಗೆ ವಿವರಿಸಿದ್ದಾರೆ. ಇವರ ಪ್ರಕಾರ, ಆ ಮಹಿಳೆ ತನ್ನ ಕುಟುಂಬದೊಂದಿಗೆ ಬೆಂಗಳೂರಿನಲ್ಲಿ ನೆಲೆಸಿದ್ದಾರೆ. ಇವರ ಮನೆಯ ರಸ್ತೆಯಲ್ಲೇ ಇರುವ ಕನ್ನಡಿಗ ಯುವಕನೊಬ್ಬ ಕಾರಿನಲ್ಲಿ ಸಮಸ್ಯೆ ಕಾಣಿಸಿಕೊಂಡಿದ್ದರಿಂದ ಅವರ ಮನೆ ಬಳಿ ಕಾರು ನಿಲ್ಲಿಸಿ ಏನಾಗಿದೆ ಎಂದು ಪರಿಶೀಲನೆ ನಡೆಸುತ್ತಿದ್ದ, ಆಗ ಕಾರಿನಿಂದ ಜೋರಾಗಿ ಸದ್ದು ಬಂದಿದ್ದರಿಂದ ಆ ಮಹಿಳೆ ಮನೆಯಾಚೆ ಬಂದು, ಅಪ್ ಕೌನ್ ಹೈ? ಯಹಾ ಕ್ಯಾ ಕರ್ ರಹೆ ಹೈ?? (ನೀನು ಯಾರು? ಇಲ್ಲೇನು ಮಾಡ್ತಿದ್ದೀಯಾ?) ಎಂದು ಅವಾಜ್ ಹಾಕಿದ್ದಾಳೆ! ಜೊತೆಗೆ, ಅವಳ ಸಹೋದರ ನೂ ಸೇರಿಕೊಂಡಿದ್ದಾನೆ!!

ಆ ಮಹಿಳೆ ಹಾಗೂ ಅವಳ ಸಹೋದರ ಇಬ್ಬರೂ ಸೇರಿಕೊಂಡು ಕನ್ನಡಿಗನ ಮೇಲೆ ದರ್ಪ ತೋರಿರುವುದು ವಿಡಿಯೋದಲ್ಲಿ ಸೆರೆಯಾಗಿದೆ. ಅಲ್ಲದೆ ಈ ಯುವಕನೊಂದಿಗೆ ವಾಗ್ವಾದ ನಡೆಸಿ ಅವಾಚ್ಯ ಪದಗಳಿಂದ ನಿಂದಿಸಿದ್ದಾರೆ. ಇನ್ನು ಆ ಮಹಿಳೆ ಹಾಗೂ ಅವಳ ಸಹೋದರ ಹಿಂದಿಯಲ್ಲೇ ಅವಾಜ್ ಹಾಕಿದ್ದಾರೆ. ಆಗ ಕನ್ನಡದಲ್ಲಿ ಮಾತನಾಡುವಂತೆ ಯುವಕ ಕೇಳಿದ್ದಾನೆ. ಇದಕ್ಕೆ ಆ ಮಹಿಳೆ ಕೋಪದಿಂದ 'This is F...ing India' ಎಂದು ಎರಡೆರಡು ಭಾರಿ ಕೆಟ್ಟ ಪದ ಬಳಕೆ ಮಾಡಿದ್ದಾಳೆ! ಭಾರತದ ಬಗ್ಗೆ ಆ ಪದ ಬಳಸಿದ್ದಕ್ಕೆ ಅಲ್ಲಿದ್ದವರು ಆಕೆಯನ್ನು ತರಾಟೆಗೆ ತೆಗೆದುಕೊಂಡಿದ್ದಾರೆ.

ಕನ್ನಡ ಗೊತ್ತಿಲ್ಲ, ನೀವೆಲ್ಲ ರೇಪಿಸ್ಟ್‌ಗಳು! ಆಗ ಕನ್ನಡಿಗ ಯುವಕ ಕೂಡ ‘ನನ್ನನ್ನು ಗುರಾಯಿಸಬೇಡ, ಅಂತಹ ಕೆಟ್ಟ ಮಾತುಗಳನ್ನಾಡಬೇಡ’ ಎಂದು ಮಹಿಳೆಗೆ ಎಚ್ಚರಿಕೆ ಕೊಟ್ಟಿದ್ದಾನೆ. ಬಳಿಕ ಆಕೆಯ ಸಹೋದರ ಮಧ್ಯಪ್ರವೇಶಿಸಿ ಇಂಗ್ಲೀಷ್‌ನಲ್ಲೇ ಜೋರು ಮಾಡಿದ್ದಾನೆ.

‘ನನಗೆ ಕನ್ನಡ ಗೊತ್ತಿಲ್ಲ, ಇಂಗ್ಲಿಷ್‌ನಲ್ಲಿ ಮಾತಾಡು’ ಎಂದು ಅವಾಜ್ ಹಾಕಿದ್ದಾನೆ. ಇದಕ್ಕೆ ಒಪ್ಪದ ಕನ್ನಡಿಗ ‘ನಾನು ಕನ್ನಡದಲ್ಲೇ ಮಾತನಾಡ್ತೀನಿ’ ಎಂದು ಬಿಸಿ ಮುಟ್ಟಿಸಿದ್ದಾನೆ. ಇದಕ್ಕೆ ‘ನೀವೆಲ್ಲ ರೇಪಿಸ್ಟ್‌ಗಳು, ಇದನ್ನು ಬೇಕಾದ್ರೆ ನಾನು ನೂರು ಬಾರಿ ಹೇಳ್ತೀನಿ’ ಎಂದು ಹಿಂದಿ ಭಾಷಿಕ ದರ್ಪದಿಂದ ಮಾತನಾಡಿರುವುದು ವಿಡಿಯೋದಲ್ಲಿದೆ!!

ಈ ವಿಡಿಯೋ ಸದ್ಯ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದ್ದು, ಭಾರತದ ಬಗ್ಗೆ ಆ ಕೆಟ್ಟ ಪದ ಬಳಸಿದ ಆ ಮಹಿಳೆ ಹಾಗೂ ಕನ್ನಡಿಗರನ್ನು ರೇಪಿಸ್ಟ್ ಎಂದು ಅವಮಾನಿಸಿರುವ ಆಕೆಯ ಹಾಗೂ ಅವಳ ಸಹೋದರ ಇಬ್ಬರ ವಿರುದ್ಧ ಕಾನೂನು ಕ್ರಮ ತೆಗೆದುಕೊಳ್ಳುವಂತೆ ಕನ್ನಡಿಗರು ಆಗ್ರಹಿಸಿದ್ದಾರೆ. ಈ ಭಿಕಾರಿ ವಲಸಿಗರಿಂದ ಕನ್ನಡಿಗರಿಗೆ ತೊಂದರೆ ಆಗದ ದಿನವೇ ಇಲ್ಲ ಕಣ್ರೀ. ಪ್ರಜ್ಞಾವಂತ ಕನ್ನಡಿಗರು, ಇಂತಹ ದೇಶದ್ರೋಹಿ ಹಾಗೂ ನಾಡದ್ರೋಹಿಗಳಿಗೆ ಕಠಿಣ ಶಿಕ್ಷೆ ಆಗಲೇಬೇಕು ಎಂದು ಸೋಷಿಯಲ್ ಮೀಡಿಯಾಗಳಲ್ಲಿ ಧ್ವನಿ ಎತ್ತಿದ್ದಾರೆ. ಈ ದನಿಗೆ ಕನ್ನಡ ಹೋರಾಟಗಾರರು ಸ್ಪಂದಿಸಬೇಕಿದೆ. ಹಾಗೂ ಸರ್ಕಾರವೂ ಸ್ಪಂದಿಸಬೇಕು. ಯಾಕೆಂದರೆ, ಇದು ಕನ್ನಡ ನಾಡು...

13 ☜

ಆದರೆ ಹೆಂಡತಿಯನ್ನು ತೀರಾ ಹಚ್ಚಿಕೊಂಡಿದ್ದ ಇಕ್ಬಾಲ್ ಅವಳಿಗಾಗಿ ವಿಠ್ಠಲ ವಾಡಿಯಲ್ಲಿ ಅರಮನೆಯಂತಹ ಮನೆ ಕಟ್ಟಿಸಿ ಕೊಟ್ಟಿದ್ದಾನೆ. ಅವಳೇ ಚಾಯ್ಸ್ ಮಾಡಿದ ಹಡಗಿನಂತಹ ಕಾರನ್ನು ಸಹ ಇತ್ತೀಚಿಗೆ ಖರೀದಿಸಿದ್ದಾನೆ. ಹೆಂಡತಿಗೇರಿದ ಚರ್ಬಿಯಿಂದ ಇಷ್ಟೆಲ್ಲಾ ರಾದ್ಧಾಂತ ನಡೆದು ತಾನು ಠಾಣೆ ಮೆಟ್ಟಲು ಹತ್ತ ಬೇಕಾಗಿ ಬಂದರೂ ಅವಳನ್ನು ಕ್ಷಮಿಸಿದ್ದಾನೆ. ಆದದನ್ನೆಲ್ಲಾ ಮರೆತು ಬಿಡು ಪುಟ್ಟ ಮಕ್ಕಳಿದ್ದಾರೆ ಅವರ ಭವಿಷ್ಯದ ಬಗ್ಗೆ ಯೋಚಿಸು ಎಂದು ಬುದ್ಧಿ ಹೇಳಿದ್ದಾನೆ.

ಅವನೆಂತಾ ಅಮಾಯಕನೆಂದರೆ ಖುದ್ದು ಸಾಹಿಲ್‌ನ ಪತ್ನಿಯೇ ಅವನ ಮನೆಗೆ ಬಂದು ನನ್ನ ಗಂಡ ಮತ್ತು ನಿನ್ನ ಹೆಂಡತಿಯ ನಡುವೆ ನಾ ಜಾಯಿಸ್ ಸಂಬಂಧ ಇದೆ ಅಂತಾ ರಂಪಾಟ ಮಾಡಿದರೂ ಅದನ್ನು ನಂಬದೆ,ಮನೆ ಕಡೆ ಸ್ವಲ್ಪ ನೋಡ್ತಾ ಇರು ಹಾಗಂತ ಹೇಳುವಷ್ಟರ ಮಟ್ಟಿಗೆ ನಮಕ್ ಹರಾಮ್ ಸಾಹಿಲ್ ನನ್ನು ನಂಬಿಬಿಟ್ಟಿದ್ದ ಇಕ್ಬಾಲ್ ವಿದೇಶಕ್ಕೆ ಹಾರಿದ್ದಾನೆ. ಇದೀಗ ಎದೆ ಬಿರಿದು ಹೋಗುವ ಸುದ್ದಿ ಕೇಳಿ ಊರಿಗೆ ಬಂದಿದ್ದಾನೆ. ಮನೆ ಸಹಿತ ಎಲ್ಲರ ಬದುಕಿಗೆ ಬೆಂಕಿಯಿಕ್ಕಿ ಹೋದ ಹೀನಾಳನ್ನು ನೆನೆಸಿ,ಏನೊಂದು ಅರ್ಥವಾಗದೇ ಅಚ್ಚರಿಯ ಕಂಗಳಿಂದ ದಿಟ್ಟಿಸುತ್ತಿರುವ ಮುಗ್ಧ ಮಕ್ಕಳನ್ನು ತಬ್ಬಿಕೊಂಡು ಕಣ್ಣೀರು ಸುರಿಸುತ್ತಿದ್ದಾನೆ.

ತನ್ನ ತೆವಲಿಗೆ ತನ್ನದೇ ಸುಂದರ ಸಂಸಾರಕ್ಕೆ ಕಿಚ್ಚಿಟ್ಟ ನೌಟಂಕಿ ಹೀನಾ, ಅತ್ತ ಅಬಿದಾಳನ್ನು ಹಣಿಯಲು ಡೆತ್ ನೋಟ್ ಬರೆದು ಪೊಲೀಸರಂತಹ ಪೊಲೀಸರನ್ನು ಯಾಮಾರಿಸಿದರೆ ಇತ್ತ ಸಾಹಿಲ್ ನೊಂದಿಗೆ ಸದ್ದಿಲ್ಲದೇ ಪರದೇಸಿಯಾಗಿದ್ದಾಳೆ.

ಅಷ್ಟೊಂದು ವಿಶಾಲ ಹೃದಯಿ ಗಂಡ, ಎಂಥವರೂ ಮುದ್ದಾಡ ಬಹುದಾದಂತ ಮುಗ್ಧ ಮಲ್ಲಿಗೆಯಂತಹ ಮಕ್ಕಳು, ಅವರನ್ನು ಬಿಟ್ಟುಹೋಗುವ ಮನಸ್ಸಾದರೂ ಅವಳಿಗೆ ಹೇಗೆ ಬಂತು? ಪುಟ್ಟ ಮಗಳ ಕತ್ತಿನಲ್ಲಿದ್ದ ಸರವನ್ನು ಸಹ ನಿರ್ದಯವಾಗಿ ಎಳೆದೊಯ್ದ ಕಟುಕಿ ಅವಳು!

ಕೊನೆಗೂ ಹೀನಾ ಕೌಸರ್‌ನನ್ನು ಸಾಹಿಲ್ ನಡು ಬೀದಿಯಲ್ಲಿ ಕೈ ಬಿಟ್ಟಿದ್ದಾನೆ. ಆಕೆ ತನ್ನ ಗಂಡನ ಮನೆ ಸೇರಿದ್ದಾಳೆ. ಹೊಸತೊಂದು ಕತೆ ಹೊಸೆದಿದ್ದಾಳೆ. ಅದನ್ನು ಇಕ್ಬಾಲ್ ನಂಬಿದ್ದಾನೆ. ಅಲ್ಲಿಗೆ ಆಕೆಯ ಸೂಸೈಡ್ ನಾಟಕ ಅಂತ್ಯವಾಗಿದೆ.

# ಭಾರತದ ಜಾತಿ ತಾರತಮ್ಯವನ್ನ ಪ್ರಶ್ನಿಸುತ್ತಿರುವ 'ಕಬಾಲಿ' ಡೈರೆಕ್ಟರ್ ಪಾ. ರಂಜಿತ್...



ಪಾ. ರಂಜಿತ್! ತಮಿಳು ಚಲನಚಿತ್ರ ರಂಗದ ಖ್ಯಾತ ಬರಹಗಾರರು ಮತ್ತು ನಿರ್ದೇಶಕರು. ಚಿಕ್ಕ ವಯಸ್ಸಿನಲ್ಲೇ ಸೂಪರ್ ಸ್ಟಾರ್ ರಜನಿಕಾಂತ್‌ರಿಗೆ ನಿರ್ದೇಶನ ಮಾಡಿದವರು.(ಕಬಾಲಿ ಕಾಲ) ಇತ್ತೀಚಿಗೆ ವಿಕ್ರಂ ಅಭಿನಯದಲ್ಲಿ ಬಂದಿದ್ದ ತಂಗಲಾನ್ ಕೂಡ ಅವರ ನಿರ್ದೇಶನದ್ದೇ. ಪಾ.ರಂಜಿತ್ ಅವರ ಸಿನಿಮಾಗಳ ವಿಶೇಷವೇನೆಂದರೆ, ಜಾತಿ ಭೇದ, ವರ್ಣ ತಾರತಮ್ಯ, ಸಂವಿಧಾನದ ಆಶಯಗಳು!

ಈ ಹಿನ್ನಲೆಯಲ್ಲಿ ಯಾವುದೇ ಹಮ್ಮು ಭಿಮ್ಮು ಇಲ್ಲದೆ, ನಿರ್ಭಿಡೆಯಿಂದ ಚಿತ್ರಕತೆ ಬರೆಯುತ್ತಾರೆ ಮತ್ತದನ್ನು ಯಾವ ಗಲಭೆಯು ಇಲ್ಲದಂತೆ ರಿಲೀಸ್ ಮಾಡಿ ಸವರ್ಣಿಯರನ್ನೂ ಚಿಂತನೆಗೆ ಹಚ್ಚುತ್ತಾರೆ! ಸಂವಿಧಾನ ಶಿಲ್ಪಿ ಡಾ. ಬಿ.ಆರ್.ಅಂಬೇಡ್ಕರ್ ಅವರ ಚಿಂತನೆಗಳನ್ನು ಓರೆಗೆ ಹಚ್ಚುವ ಕೆಲಸ ಮಾಡುತ್ತಲೇ ವಿಶ್ವ ವಿಖ್ಯಾತಿಗಳಿಸಿರುವ ಪಾ. ರಂಜಿತ್ ರವರನ್ನು ಅಮೇರಿಕ ಪತ್ರಕರ್ತರು ಕೂಡ ಸಂದರ್ಶನ ಮಾಡಲು ಹಾತೊರೆಯುತ್ತಾರೆ!

ಈ ಲೇಖನ 'ವಾಷಿಂಗ್ಟನ್ ಪೋಸ್ಟ್'ನಲ್ಲಿ ಮೂಡಿಬಂದದ್ದು... ಇದನ್ನ ಕನ್ನಡಕ್ಕೆ ತರ್ಜುಮೆ ಮಾಡಿದವರು ಹರೀಶ್ ಗಂಗಾಧರ್. ಶ್ರೀಯುತರನ್ನು ಸ್ಮರಿಸುತ್ತ... ಪಾ. ರಂಜಿತ್ ಅವರಿಗೆ ಅವರಪ್ಪ ನಿನ್ ಜಾತಿ ಬಗ್ಗೆ ಎಲ್ಲೂ ಹೇಳಿಕೊಳ್ಬೇಡ ಅಂತ ಆಗಾಗ ನೆನಪಿಸುತ್ತಿದ್ದರಂತೆ! ತಾಯಿಯ ಈ ಕಿವಿಮಾತುಗಳ ಹೊರತಾಗಿಯೂ ಇಲ್ಲಿಯವರೆಗೆ ಇಡೀ ಚಿತ್ರರಂಗದಲ್ಲಿ ತೀರಾ ವಿರಳವೆನ್ನಬಹುದಾದ ಧೈರ್ಯವನ್ನೇ ತೋರಿದ, ತನ್ನ ಅಸ್ಮಿತೆಯನ್ನೇ ತನ್ನ ಚಿತ್ರಗಳಲ್ಲಿ ಕೇಂದ್ರವಾಗಿಸಿಕೊಂಡ ಪಾ. ರಂಜಿತ್ ಭಾರತದ ಮೊದಲ ಯಶಸ್ವಿ ಬರಹಗಾರ ಹಾಗೂ ನಿರ್ದೇಶಕ/ನಿರ್ಮಾಪಕ. ದಶಕಗಳ ಸಕಾರಾತ್ಮಕ ಕಾನೂನು ಕ್ರಮ ಹಾಗು ತಾರತಮ್ಯ ನಿಷೇಧ ಕಾಯ್ದೆಗಳಿದ್ದರು ದೇಶದಲ್ಲಿ ಆಳವಾಗಿ ಬೇರೂರಿರುವ ಜಾತಿ ಆಧಾರಿತ ದಬ್ಬಾಳಿಗೆ ಕನ್ನಡಿ ಹಿಡಿಯುವ ರಂಜಿತ್ ಚಿತ್ರಗಳಲ್ಲಿ ದಲಿತರೇ ಮುಖ್ಯ ಪಾತ್ರಧಾರಿಗಳು.

ಅಮೇರಿಕಾದ ನಾಗರೀಕ ಹಕ್ಕು ಚಳುವಳಿ ಕಾಲದ ಕಪ್ಪುಕಲಾವಿದರಿಂದ ಪ್ರೇರಿತರಾದ ರಂಜಿತ್ ತಮಿಳುನಾಡಿನಲ್ಲಿ ಈ ಹಿಂದೆ ಅಸ್ಪೃಶ್ಯರೆಂದು ಕರೆಸಿಕೊಳ್ಳುತ್ತಿದ್ದ ದಲಿತ ಸಮುದಾಯದ ಸಬಲೀಕರಣಕ್ಕೆ ಪಣ ತೊಟ್ಟು ವೇಗವಾಗಿ ಜನಪ್ರಿಯವಾಗುತ್ತಿರುವ ಸಾಂಸ್ಕೃತಿಕ ಕೇಂದ್ರವೊಂದನ್ನು ಸೃಷ್ಟಿಸಿದ್ದಾರೆ. ಇಲ್ಲಿಯವರೆಗೆ ಕೆಳಜಾತಿಯವರನ್ನ ಕಡೆಗಣಿಸಿದ ಅಥವಾ ಟೈಪ್ ಕಾಸ್ಟ್ ಮಾಡಿದ ಜನಪ್ರಿಯ ಸಂಸ್ಕೃತಿಯನ್ನ ಸಂಪೂರ್ಣವಾಗಿ ಬದಲಾಯಿಸುವುದೇ ಇದರ ಗುರಿಯಾಗಿದೆ. ಈ ನಿಟ್ಟಿನಲ್ಲಿ ರಂಜಿತ್ ಹಲವು ದಿಟ್ಟ ಹೆಜ್ಜೆಗಳನಿಟ್ಟಿದ್ದಾರೆ- ದಲಿತ ಲೇಖಕ ಹಾಗು ಕವಿಗಳಿಗೆ ಮುದ್ರಣಾಲಯ, ಜಾತಿ ವಿರೋಧಿ ಮ್ಯೂಸಿಕ್ ಬ್ಯಾಂಡ್, ದಲಿತ ಬದುಕು ಹಾಗು ಆಹಾರವನ್ನ ತೋರಿಸುವ ಯುಟ್ಯೂಬ್ ಚಾನೆಲ್...

ನನ್ನ ಆಹಾರಾಭ್ಯಾಸಗಳು, ಸಂಗೀತ, ಕಲೆಯೆಲ್ಲವೂ ಜನಪ್ರಿಯ ಸಂಸ್ಕೃತಿಯಲ್ಲಿ ಬಿಂಬಿತವಾಗುವುದಕ್ಕಿಂತ ವಿಭಿನ್ನವಾಗಿವೆ. ಇದು ಜಾತಿಯತೇ ಕುರಿತು ಮಾತನಾಡುವುದಲ್ಲ, ಇದು ನನ್ನ ಸಂಸ್ಕೃತಿಯ ಮೇಲೆ ಚೆಲ್ಲುವ ಬೆಳಕು ಎಂದು ತಮ್ಮ ಚೆನ್ನೈ ಆಫೀಸ್‌ನಲ್ಲಿ ಕುಳಿತು ಅಭಿಮಾನದ ಮಾತುಗಳನ್ನಾಡುತ್ತಾರೆ ರಂಜಿತ್.

ದಲಿತರು ಹಿಂದೂ ಧರ್ಮದ ತಾರತಮ್ಯ ಶ್ರೇಣಿ ವ್ಯವಸ್ಥೆಯ ಕೆಳ ಮೆಟ್ಟಿಲುಗಳ ಮೇಲೆ ಜಾಗ ಪಡೆಯುತ್ತಾರೆ. ವ್ಯಕ್ತಿಯ ಸ್ಥಾನ ಮಾನಗಳು ಆತನ ಹುಟ್ಟಿನಿಂದ ನಿರ್ಧಾರಿತವಾಗುತ್ತವೆ. ಮೀಸೆ ಬೆಳೆಸಿಕೊಂಡ ಅಥವಾ ಮದುವೆಯಲ್ಲಿ ಕುದುರೆ ಏರಿದನೆಂಬ ತೀರಾ ಕ್ಷುಲ್ಲಕ ಎನ್ನಬಹುದಾದ ಕಾರಣಗಳಿಗಾಗಿ ಮೇಲ್ಜಾತಿಯಿಂದ ಕೊಲ್ಲಲ್ಪಟ್ಟಿದ್ದಾರೆ ಅಥವಾ ನಾನಾ ರೀತಿಯ ಹಿಂಸೆಗೆ ಒಳಗಾಗಿದ್ದಾರೆ. ಇರಲು ನೆಲೆ, ಮೂಲಭೂತ ಸೌಕರ್ಯ ಅಥವಾ ಅಂತರ ಜಾತಿ ವಿವಾಹಗಳಿಗಾಗಿ ದೊಡ್ಡ ಮಟ್ಟದ ಹೋರಾಟವನ್ನೇ ಮಾಡಬೇಕಾಗುತ್ತದೆ. ಈ ದೇಶದಲ್ಲಿ ಜಲಗಾರರಾಗಿ, ಜಾಡಮಾಲಿಗಳಾಗಿ, ಹೊಲಸು ಗುಂಡಿಗಳನ್ನ ತನ್ನ ಕೈಗಳಿಂದ ತೊಳೆದು ಬದುಕಬೇಕಾದಂತಹ ಒತ್ತಡ ಸಮಾಜ ಅವರ ಮೇಲೆ ಹೇರಿದೆ. ಜಾತಿ ಪದ್ದತಿ ಅನ್ನೋದು ಬರಿಯ ಭಾರತದಲ್ಲಿ ಮಾತ್ರ ಬಲಿಷ್ಠವಾಗಿರದೆ ಅಮೇರಿಕದಲ್ಲಿ ನೆಲೆಸಿರುವ ಭಾರತೀಯರಲ್ಲೂ ಆಳವಾಗಿ ಬೇರೂರಿದೆ. ಜಾತಿ ಎಂಬ ಪಿಡುಗನ್ನ ಪ್ರಪಂಚಾದ್ಯಂತ ನೆಲೆಸಿರುವ ಇಂಡಿಯನ್ ಡಯಾಸ್ಪೋರಗಳಲ್ಲಿ ಕಾಣಬಹುದು.

ಹೋರಾಟವೆಂಬುದು ದಲಿತನ ಪ್ರತಿ ದಿನದ ಅನುಭವ. ಅದೇ ಅವನ ಬದುಕು. ನನ್ನ ಬದುಕು ಕೂಡ ಒಂದು ಪ್ರಬಲ ಪ್ರತಿರೋಧ. ನಾನಷ್ಟೇ ಅಲ್ಲ ನನ್ನವರೆಲ್ಲಾ ಶೋಷಣೆ, ದಬ್ಬಾಳಿಕೆ, ಹಾಗು ತಾರತಮ್ಯ ಕುರಿತಾದ ಕಥೆಗಳ ಉಗ್ರಾಣ ಎನ್ನುತ್ತಾರೆ ಪಾ. ರಂಚಿತ್.

ಈ ವರ್ಷ ಚಿತ್ರೋದ್ಯಮಕ್ಕೆ ರಂಜಿತ್ ಕಾಲಿಟ್ಟು ದಶಕ ಕಳೆದಿವೆ. ಅಮೇರಿಕಾದ ಕಪ್ಪು ಇತಿಹಾಸ ಮಾಸದಿಂದ ಪ್ರೇರಿತರಾಗಿ ಏಪ್ರಿಲ್ ತಿಂಗಳಲ್ಲಿ ರಂಜಿತ್ ಆಯೋಜಿಸಿದ್ದ ದಲಿತ ಇತಿಹಾಸ ಮಾಸದಲ್ಲಿ ನೂರಾರು ಜನರು ಭಾಗವಹಿಸಿದ್ದರು. ಅದೊಂದು ಕಲಾ ಹಬ್ಬ, ಸಂಭ್ರಮ ಮತ್ತು ಅದ್ದೂರಿ ಉತ್ಸವ. ಕಳೆದ ತಿಂಗಳು ರಂಜಿತ್ ಕಾನ್ಸ್ ಸಿನಿ ಉತ್ಸವದಲ್ಲಿ ಮೊದಲ ಬಾರಿ ಕಾಣಿಸಿಕೊಂಡರು ಕೂಡ. ಮುಂಬರುವ ದಿನಗಳಲ್ಲಿ ಬುಡಕಟ್ಟು ಜನಾಂಗಕ್ಕೆ ಸೇರಿದ ನಾಯಕನ ಕತೆ ಆಧಾರಿತ ಚಿತ್ರದ ಮೂಲಕ ಬಾಲಿವುಡ್‌ಗೂ ಪಾದಾರ್ಪಣೆ ಮಾಡಲಿದ್ದಾರೆ.

ನಾನಾ ವೇದಿಕೆಗಳಲ್ಲಿ ತಮ್ಮ ಕತೆಗಳನ್ನ ಹಂಚಿಕೊಳ್ಳಲು ಹಲವರಿಗೆ ರಂಜಿತ್ ಉತ್ತೇಜಿಸಿ ಅವಕಾಶ ಕಲ್ಪಿಸಿಕೊಡುತ್ತಿದ್ದಾರೆ. ರಂಜಿತ್ ಸೃಷ್ಟಿಸಿದ ಅಧಿಕೃತ ಯುಟ್ಯೂಬ್ ಚಾನೆಲ್- ನೀಲಂ ಸೋಷಿಯಲ್ ಕಛೇರಿಯಲ್ಲಿ, ಇಪ್ಪತ್ತೊಂದು ವರ್ಷದ ಹುಡುಗಿ ಅಭಿಷಾ ತನ್ನ ಜನರ ಬಗ್ಗೆ ರ್‍ಯಾಪ್ ಸಾಂಗ್ ಒಂದನ್ನು ಹಾಡುತ್ತಿದ್ದಾಳೆ. ''ಅವರ ಕಣ್ಣೋಟದಿಂದ ದೂರಾಗಿ ನೆಲೆಸಿದವು ಊರ ಹೊರಗೆ ಯಾರಿಗೂ ಬೇಡವಾಗಿ ನಮ್ಮ ನಾಡಿನಲ್ಲೇ ಬದುಕಬೇಕಾಯಿತು. ನಿರಾಶ್ರಿತರಾಗಿ ಹಕ್ಕುಗಳನ ಕಿತ್ತು ಕೊಂಡಿರಿ ಎಂದು ಬಾಳಲಿಲ್ಲ ನಾವು ನಿಮ್ಮಲ್ಲಿ ಒಂದಾಗಿ.'' ದಲಿತರು ಪ್ರತಿಭಟನೆಗಳಲ್ಲಿ ಬಳಸುವ ವಾದ್ಯಗಳ ಕುರಿತು ಸಾಕ್ಷ್ಯಚಿತ್ರ ಮಾಡಿದ್ದಾಳೆ ಅಭಿಷ. ಚೆನ್ನೈ ನಗರದ ಸ್ಲಂ ವಾಸಿಗಳನ್ನ ಏಕಾಏಕಿ ಹೊರಹಾಕಿದರ ಬಗ್ಗೆ ಕತೆಗಳನ್ನ ಬರೆದಿದ್ದಾಳೆ. ಮೇಲಿನ ರ್‍ಯಾಪ್ ಸಾಂಗಿಗೆ ಈ ಕತೆಗಳೆ ಸ್ಫೂರ್ತಿಯಾದವು. ''ನಾ ಹಾಡಿದ ಹಾಡು, ಬರೆದ ಕತೆಗಳು ಕೆಲ ಜನರಿಗಷ್ಟೇ ತಲಪಬಹುದು. ಸಣ್ಣ ಅಲೆಗಳನ್ನಾದರೂ ಸೃಷ್ಟಿಸಲು ನಾನು ಇವುಗಳನ್ನ ಮಾಡಲೇಬೇಕು... ನನ್ನ ದನಿ ಮುಖ್ಯ. ನನ್ನ ದನಿ ಮುಖ್ಯ. ನನ್ನ ಕೆಲಸ ಮುಖ್ಯ. ನಾನು ಈ ಕೆಲಸ ಮಾಡದಿದ್ದರೆ ಬೇರಾರು ಮಾಡರು.'' ಎನ್ನುತ್ತಾಳೆ ಅಭಿಷ.

ರಂಜಿತ್ ಆರಂಭಿಸಿದ ಚಾನೆಲ್‌ನಲ್ಲಿ ತುಂಬಾ ಜನಪ್ರಿಯವಾದ ಕಾರ್ಯಕ್ರಮ ದಲಿತರ ಆಹಾರದ್ದು. ಇತ್ತೀಚಿನ ಎಪಿಸೋಡ್ ದನದ ಮಾಂಸದಿಂದ ಮಾಡಿದ ಭಕ್ಷ್ಯದ ಬಗ್ಗೆ ಇತ್ತು. ಶತಶತಮಾನಗಳಿಂದ ಬೇರೆಲ್ಲರಿಂದ ಬೇರ್ಪಟ್ಟು ಬಾಳಿದ ದಲಿತ ಸಮುದಾಯಕ್ಕೆ ದನದ ಮಾಂಸ ಮಹತ್ವದ ಆಹಾರ. ದನದ ಮಾಂಸದ ಮೇಲೀಗ ನಿಷೇಧ ಹೇರಲಾಗಿದೆ. ಗೋವು ಹಿಂದೂಗಳಿಗೆ ಪವಿತ್ರವಾದುದು. ಸಾಕಾಷ್ಟು ದಲಿತರು ಗೋವಿನ ಹೆಸರಲ್ಲಿ ಹಿಂಸೆ ಅನುಭವಿಸಿದ್ದಾರೆ. ಮತ್ತೊಂದೆಡೆ ದಲಿತರನ್ನ ಹೊರತುಪಡಿಸಿ ವರರು ಕುದುರೆ ಏರಿ ಮೆರವಣಿಗೆ ಹೋಗುವುದು ಭಾರತದಲ್ಲಿ ಸಂಪ್ರದಾಯ. ದಲಿತರು ಕುದುರೆ ಏರಿದಾಗ ಅಹಿತಕರ ಘಟನೆಗಳು ನಡೆದು ಹೋಗಿದೆ.

ಹಲವಾರು ಸ್ಟುಡಿಯೋಗಳಿಗೆ ತವರಾಗಿರುವ ಚೆನ್ನೈನ ಮತ್ತೊಂದು ಮೂಲೆಯಲ್ಲಿ ರಂಜಿತ್ ಕೂಗೈ ಎಂಬ ಗ್ರಂಥಾಲಯ ಕಟ್ಟಿದ್ದಾರೆ. ಗೈ ಎಂದರೆ ತಮಿಳಿನಲ್ಲಿ ಗೂಬೆ ಎಂದರ್ಥವಾದರೂ ಜಾತಿ ದೌರ್ಜನ್ಯವನ್ನ ಉಗ್ರವಾಗಿ ವಿರೋಧಿಸಿದ ಜನಪ್ರಿಯ ತಮಿಳು ಕಾದಂಬರಿ 'ಕೂಗೈ' ಶೀರ್ಷಿಕೆಯನ್ನೇ ಗ್ರಂಥಾಲಯಕ್ಕಿಡಲಾಗಿದೆ.

ಸಣ್ಣ ಸಣ್ಣ ಪಟ್ಟಣ ಹಾಗೂ ಹಳ್ಳಿಗಳಿಂದ ಕನಸುಗಳನೊತ್ತು ತಮಿಳು ಚಿತ್ರೋದ್ಯಮದಲ್ಲಿ ಕೆಲಸ ಮಾಡಲು ಬಹಳ ಮಂದಿ ಬರುತ್ತಾರೆ. ಅವರು ಇಲ್ಲಿಗೆ ಬಂದ ಮೇಲೆ ದಾರಿ ಕಾಣದಾಗುತ್ತದೆ. ಎನ್ನುತ್ತಾರೆ ಮೂವತ್ತು ಮೂರೂ ವಯಸ್ಸಿನ ಮೂರ್ತಿ. ಮೂರ್ತಿ ಗ್ರಂಥಾಲಯದ ಮೇಲ್ವಿಚಾರಕ. ಸಿನೆಮಾ ಸಂಬಂಧಿತ ನೂರಾರು ಪುಸ್ತಕಗಳಿವೆ ಕೂಗೈನಲ್ಲಿ. ಅಲ್ಲಿ ಕಾರ್ಯಾಗಾರ ನೆಡೆಯುತ್ತವೆ. ಉತ್ತಮ ಚಿತ್ರಗಳು ಪ್ರದರ್ಶನಗೊಳ್ಳುತ್ತವೆ.

ಹಳ್ಳಿಯಲ್ಲಿ ಬರಿಯ ತಾಯಿಯ ಆರೈಕೆಯಲ್ಲಿ ಬೆಳೆದಿದ್ದ ಮೂರ್ತಿ ಹಲವು ಕನಸುಗಳನ್ನ ಹೊತ್ತುಕೊಂಡು ಚಿತ್ರೋದ್ಯಮಕ್ಕೆ ಬಂದರು. ಆದರೆ ಏನನ್ನೂ ಸಾಧಿಸಲಾಗದೆ ಹೀನಾಯವಾಗಿ ಸೋತರು. ವರುಷಗಳ ನಂತರ ಚೆನ್ನೈ ನಗರಕ್ಕೆ ಮರಳಿ ಬಂದಾಗ ಗ್ರಂಥಾಲಯ ನಿರ್ಮಾಣ ಹಂತದಲ್ಲಿತ್ತು. ಹೊಸದಾಗಿ ಕಲಿತು, ಬೆಳೆಯಲು ನೆಲೆಯೊಂದು ಸಿಕ್ಕಿತು. ಹೋದ ವರುಷ ಸಹಾಯಕ ನಿರ್ದೇಶಕನಾಗಿ ಚಿತ್ರವೊಂದಕ್ಕೆ ಕೆಲಸ ಮಾಡುವ ಅವಕಾಶ ಮೂರ್ತಿಗೆ ಸಿಕ್ಕಿದೆ. ''ರಂಜಿತ್ ನಮಗೆಲ್ಲ ದಾರಿ ತೋರಿ ಬೆಳೆಸಿದರು. ಮುಂದಿನ ದಶಕದಲ್ಲಿ ಚಿತ್ರೋದ್ಯಮದ ಶ್ರೇಷ್ಠ ನಿರ್ದೇಶಕರು ಕೂಗೈನಿಂದ ಬರಲಿದ್ದಾರೆ'' ಎಂದು ವಿಶ್ವಾಸದಿಂದ ಹೇಳುತ್ತಾರೆ ಮೂರ್ತಿ.

ಇಷ್ಟೊಂದು ಮಹತ್ವಾಕಾಂಕ್ಷೆಯುಳ್ಳ ಮೂವತ್ತೊಂಬತ್ತು ವರ್ಷದ ರಂಜಿತ್ ನಿರಂಹಕಾರಿ. ಬಿಳಿಯ ಕಾಟನ್ ಶರ್ಟ್ ಮತ್ತು ನೀಲಿ ಷರಾಯಿ ತೊಟ್ಟು ತನ್ನ ಸಾಧಾರಣವಾಗಿ ಸಜ್ಜುಗೊಳಿಸಿದ, ಚಲನಚಿತ್ರ ಸಂಬಂಧಿ ಯಾವುದೇ ಪರಿಕರ ಉಪಕರಣಗಳಿಲ್ಲದ ಆಫೀಸ್ಗೆ ಬರೋದು ಸಾಮಾನ್ಯ. ಆಫೀಸಿನಲ್ಲೋ ಎಲ್ಲೆಲ್ಲೂ ಪುಸ್ತಕಗಳು! ಸಂವಿಧಾನ ಶಿಲ್ಪಿ, ದಲಿತರ ಮಹಾನಾಯಕ ಗೌರವಾನ್ವಿತ ಭೀಮ್‌ರಾವ್ ಅಂಬೇಡ್ಕರ್‌ರವರ ಚಿತ್ರಗಳು, ಪ್ರತಿಮೆಗಳು.

ರಂಜಿತ್ ವೃತ್ತಿ ಜೀವನ ಆತನ ಮೊದಲೆರಡು ಚಿತ್ರಗಳ ಭಾರಿ ಯಶಸ್ಸಿನಿಂದ ಆರಂಭಗೊಂಡಿತು. ತಮಿಳು ಚಿತ್ರಗಳಲ್ಲಿ ಜಾತಿ ಪ್ರಾತಿನಿಧಿತ್ವದ ಬದಲಾಯಿಸಿದ ಶ್ರೇಯಸ್ಸು ರಂಜಿತ್ಗೆ ಸಲ್ಲಬೇಕು. ''ಆತನೊಬ್ಬ ಅತ್ಯುತ್ತಮ ನಿರ್ದೇಶಕ. ಯಾವುದೇ ಅಳುಕಿಲ್ಲದೆ, ಭಯವಿಲ್ಲದೆ ತಮ್ಮ ಐಡೆಂಟಿಟಿಯ ಕುರಿತು ಮಾತನಾಡುವ ಧೈರ್ಯ ತುಂಬಿ ಹೊಸಬರಿಗೆ ಹೊಸ ಹಾದಿ ಸೃಷ್ಟಿಸಿದ್ದಾನೆ ರಂಜಿತ್'' ಅನ್ನೋದು ಪ್ರಖ್ಯಾತ ಸಿನಿ ವಿಮರ್ಶಕ ಭಾರದ್ವಾಜ್ ರಂಗನ್‌ರವರ ಅಭಿಪ್ರಾಯ.

ರಂಜಿತ್ ಅವರಿಗೆ ಬಹುದೊಡ್ಡ ಬ್ರೇಕ್ ಸಿಕ್ಕಿದ್ದು ಜಗತ್ತಿನಾದ್ಯಂತ ಕೋಟ್ಯಂತರ ಅಭಿಮಾನಿಗಳಿದ್ದ ರಜನಿಕಾಂತ್ ಅವರನ್ನ ಭೇಟಿಯಾದಾಗ. ಇವರಿಬ್ಬರ ಜೋಡಿ ಎರಡು ಮೆಗಾ ಹಿಟ್ ಗಳನ್ನು ನೀಡಿತು. ಕಬಾಲಿ ಮತ್ತು ಕಾಲ. ಕಾಲ'(ಕಪ್ಪು) ಚಿತ್ರದಲ್ಲಿ ರಜನಿಕಾಂತರದು ದಲಿತ ಮುಖಂಡನ ಪಾತ್ರ. ಮುಂಬೈ ಸ್ಲಾಮ್ ಒಂದರಲ್ಲಿ ಬದುಕುವ ಈತ ಭ್ರಷ್ಟ ರಾಜಕಾರಣಿಯೊಬ್ಬನನ್ನ ಎದುರಿ ಹಾಕಿಕೊಳ್ಳುತ್ತಾನೆ. ಕಬಾಲಿ ಈ ಜೋಡಿಯ ಮತ್ತೊಂದು ಚಿತ್ರ. ಎರಡು ಚಿತ್ರಗಳು ಬಾಕ್ಸ್ ಆಫೀಸ್ ಗಳಿಕೆಯಲ್ಲೂ ಬಾರಿ ಸದ್ದು ಮಾಡಿದವು.

''ಮೊದಲೆಲ್ಲಾ ನಿರ್ಮಾಪಕರು ಇಂತಹ ಚಿತ್ರದಲ್ಲಿ ಹೂಡಿಕೆ ಮಾಡಲು ಹಿಂಜರಿಯುತ್ತಿದ್ದರು. ಹೂಡಿದ ದುಡ್ಡು ವಾಪಸ್ ಬರಲ್ಲ ಅಂತ ಸಬೂಬು ಹೇಳುತ್ತಿದ್ದರು. ನನ್ ಐಡಿಯಾ ತುಂಬಾ ಸಿಂಪಲ್. ಮುಖ್ಯ ವಾಹಿನಿ ಚಲನಚಿತ್ರಗಳ ವೀಕ್ಷಕರು ಕೂಡ ನಮ್ಮ ಚಿತ್ರಗಳಲ್ಲಿ ತೊಡಗಿಸಿಕೊಳ್ಳುವಂತಹ ಎಂಟರ್‌ಟೈನಿಂಗ್ ಚಿತ್ರ ಮಾಡಬೇಕು ಎನ್ನುತ್ತಾರೆ ರಂಜಿತ್.




ಜಾತಿ ದಬ್ಬಾಳಿಕೆ ಹಾಗು ತಾರತಮ್ಯ ಕುರಿತಾದ ತೀಕ್ಷ್ಣ ನಿಷ್ಪಕ್ಷಪಾತ ವಿಮರ್ಶೆಗಳನ್ನ ಹಿಂದೂ ಧರ್ಮದ ಟೀಕೆಯೆಂದೇ ಗ್ರಹಿಸುವ ಹಿಂದೂ ರಾಷ್ಟ್ರವಾದಿಗಳ ತೀವ್ರ ವಿರೋಧ ರಂಜಿತನನ್ನ ವಿಚಲಿತಗೊಳಿಸಿಲ್ಲ. ಹಿಂದೂ ಫೋಬಿಯ ಎಲ್ಲರ ಮನಸಲ್ಲಿ ಮೂಡಿಸಿದ ಆರೋಪವೂ ರಂಜಿತ್ ಮೇಲಿದೆ. ಪುರಾತನ ಹಿಂದೂ ರಾಜನ ಬಗ್ಗೆ ನೀಡಿದ ಹೇಳಿಕೆಯಿಂದ ರಂಜಿತ್ ವಿರುದ್ಧ ದೂರು ದಾಖಲಾಗಿದೆ. ಈ ದೂರುಗಳು, ನಿಂದನೆಗಳಾವುದರ ಬಗ್ಗೆಯು ರಂಜಿತ್ ತಲೆ ಕೆಡಿಸಿಕೊಂಡಿಲ್ಲ ''ಜನ ನನ್ನನ್ನ ಮುಂಗೋಪಿ ಅಂತ ಅಂದುಕೊಂಡಿದ್ದಾರೆ ಆದರೆ ನಾನು ಮುಂಗೋಪಿಯಲ್ಲ, ನನ್ನ ದೈವ ಅಂಬೇಡ್ಕರ್ ರಂತೆ ನಾನು ಕೂಡ ಹಠಮಾರಿ ಮತ್ತು ನನ್ನ ಗುರಿಗಳಿಗೆ ಸದಾ ಬದ್ಧನಷ್ಟೇ. ಸಮಾನತೆಯೊಂದೇ ನಾನು ಮುಂದಿನ ಪೀಳಿಗೆ ಬಿಟ್ಟು ಹೋಗ ಬಯಸುವ ಸ್ವತ್ತು'' ಎನ್ನುತ್ತಾರೆ ರಂಜಿತ್!

(ವಾಷಿಂಗ್ಟನ್ ಪೋಸ್ಟ್‌ನಲ್ಲಿ ಪ್ರಕಟವಾದ ಲೇಖನ)

ಕನ್ನಡಕ್ಕೆ ಅನುವಾದ: ಹರೀಶ್ ಗಂಗಾಧರ್

POLICE NEWS REGISTERED KA/BGW-1618/2024-26 REGD. WITH RNI NO. 36669/82 PAGES : 16 | POSTED AT BANGALORE PSO BG 560026 Every Tuesday | Publishing Date : 29.6.2025

# ಲಕ್ಷ್ಮೀ ನಿವಾಸದಿಂದ ಹೊರಬಿದ್ದರೇಕೆ ಶ್ವೇತಾ?!

ಜೀ ಕನ್ನಡ ವಾಹಿನಿಯಲ್ಲಿ ಪ್ರಸಾರವಾಗುತ್ತಿರುವ ಜನಪ್ರಿಯ ಧಾರಾವಾಹಿ ಲಕ್ಷ್ಮೀ ನಿವಾಸದಲ್ಲಿ ಪ್ರಮುಖ ಪಾತ್ರ ನಿರ್ವಹಿಸುತ್ತಿದ್ದ ನಟಿ ಶ್ವೇತಾ ಹೊರಬಂದಿದ್ದಾರೆ! ಮನೆಯ ಯಜಮಾನಿ, ತುಂಬು ಕುಟುಂಬದ ತಾಯಿ 'ಲಕ್ಷ್ಮೀ' ಪಾತ್ರ ನಿರ್ವಹಿಸುತ್ತಿದ್ದ ನಟಿ ಶ್ವೇತಾ ಅವರು ವೈಯಕ್ತಿಕ ಕಾರಣಗಳಿಂದ ಧಾರಾವಾಹಿಯಿಂದ ನಿರ್ಗಮಿಸಿದ್ದಾರೆ. ಇದರಿಂದ ಪ್ರೇಕ್ಷಕರಿಗೆ ಶಾಕ್ ಆಗಿದ್ದು, ದಿಢೀರನೆ ಸೀರಿಯಲ್‌ನಿಂದ ಹೊರನಡೆಯಲು ಕಾರಣವೇನು ಎಂದು ಚಿಂತಿತರಾಗಿದ್ದಾರೆ.






ಶ್ವೇತಾ ಅವರು ಈ ಧಾರಾವಾಹಿಯ ಕೇಂದ್ರಬಿಂದುವಾಗಿದ್ದು ಬಹಳ ಪ್ರೇಕ್ಷಕರಿಗೆ ಹತ್ತಿರವಾಗಿದ್ದರು. ಈ ಧಾರಾವಾಹಿ ಮುಂದೆ ಪುಟ್ಟಕ್ಕನ ಮಕ್ಕಳು ಕೂಡ ವೀಕ್ ಎನ್ನಿಸಿಕೊಂಡಿದೆ! ಹೀಗಿರುವಾಗಲೇ ಶ್ವೇತಾ ಅವರು ದಿಢೀರನೆ ತಮ್ಮ ಪಾತ್ರಕ್ಕೆ ಗುಡ್‌ಬೈ ಹೇಳಿರುವುದು ಅಚ್ಚರಿಗೆ ಕಾರಣವಾಗಿದೆ. ಈ ನಡುವೆ ತಮ್ಮ ಇನ್‌ಸ್ಟಾಗ್ರಾಂನಲ್ಲಿ ಪೋಸ್ಟ್ ಹಂಚಿಕೊಂಡಿರುವ ನಟಿ ಶ್ವೇತಾ ಅವರು, 'ಈ ಸೀರಿಯಲ್‌ನಿಂದ ಹೊರಬರಲು ಬೇರೇನೂ ಅಲ್ಲ, ನನ್ನ ತಾಯಿಯ ಆರೋಗ್ಯ ಸಮಸ್ಯೆಯಿಂದಾಗಿ ಲಕ್ಷ್ಮಿ ನಿವಾಸದಿಂದ ವಿರಾಮ ತೆಗೆದುಕೊಳ್ಳುತ್ತಿದ್ದೇನೆ. ಕರ್ನಾಟಕವು ತುಂಬಾ ದಯೆಯಿಂದ ವರ್ತಿಸಿದ್ದಕ್ಕಾಗಿ ಮತ್ತು ನನ್ನನ್ನು ಸಂಪೂರ್ಣವಾಗಿ ಸ್ವೀಕರಿಸಿದ್ದಕ್ಕಾಗಿ ಧನ್ಯವಾದಗಳು. ಸೆಟ್‌ಗಳಲ್ಲಿ ಕೆಲವರನ್ನು ತುಂಬಾ ಮಿಸ್ ಮಾಡಿಕೊಳ್ಳುತ್ತೇನೆ. ನನ್ನನ್ನು ಮತ್ತೆ ಕನ್ನಡ ಪ್ರೇಕ್ಷಕರಿಗೆ ಪರಿಚಯಿಸಿದ್ದಕ್ಕಾಗಿ ಜೀ ಕನ್ನಡ ವಾಹಿನಿಗೆ ತುಂಬಾ ಧನ್ಯವಾದಗಳು, ನೀವು ನಿಜಕ್ಕೂ ಅದ್ಭುತ, ಶೀಘ್ರದಲ್ಲೇ ನಿಮ್ಮೆಲ್ಲರನ್ನೂ ಮತ್ತೆ ಭೇಟಿಯಾಗುತ್ತೇವೆ' ಎಂದು ಬರೆದುಕೊಂಡಿದ್ದಾರೆ.

ನಟಿ ಶ್ವೇತಾ ಅವರ ಮೂಲ ಹೆಸರು ವಿನೋದಿನಿ.ಅವರು ತಮಿಳುನಾಡಿನವರು. ಚೈತ್ರದ ಪ್ರೇಮಾಂಜಲಿ, ಗೆಜ್ಜೆನಾದ, ಕರ್ಪೂರದ ಗೊಂಬೆ, ಅಕ್ಕ ತಂಗಿ, ಮಿನುಗು ತಾರೆ, ಹೆತ್ತವರು ಸೇರಿದಂತೆ ಕನ್ನಡದಲ್ಲಿ ಹಲವು ಸಿನಿಮಾಗಳಲ್ಲಿ ನಟಿಸಿದ್ದಾರೆ. ಬಳಿಕ ತಮಿಳು ಕಿರುತೆರೆಗೆ ತೆರಳಿದ್ದ ಅವರು ಲಕ್ಷ್ಮೀ ನಿವಾಸ ಸೀರಿಯಲ್ ಮೂಲಕ ಕನ್ನಡ ಕಿರುತೆರೆಗೂ ಕಾಲಿಟ್ಟಿದ್ದರು.

ಹಲವು ವರ್ಷಗಳ ಬಳಿಕ ಹಿರಿತೆರೆಯಿಂದ ಅವರು ಕಿರುತೆರೆಯ ಮೂಲಕ ಕನ್ನಡ ಪ್ರೇಕ್ಷಕರ ಮುಂದೆ ಪ್ರತ್ಯಕ್ಷರಾಗಿದ್ದರು. ಅವರ ನಟನೆ ಕೂಡ ಮೆಚ್ಚುಗೆ ಪಡೆದಿತ್ತು. ಸೀರಿಯಲ್ ಕೂಡ ಟಿಆರ್‌ಪಿಯಲ್ಲಿ ನಂಬರ್ ಒನ್ ಸ್ಥಾನದಲ್ಲಿತ್ತು. ಹೀಗಿರುವಾಗಲೇ ನಟಿ ಶ್ವೇತಾ ಅವರು ನಿರ್ಗಮಿಸಿರುವುದು ನಿರ್ಮಾಪಕರಿಗೆ ಹಾಗೂ ಪ್ರೇಕ್ಷಕರಿಗೆ ದೊಡ್ಡ ಹೊಡೆತ! ಅಂದಹಾಗೆ, ಇದೀಗ ಲಕ್ಷ್ಮಿ ನಿವಾಸ ಲಕ್ಷ್ಮಿಯ ಪಾತ್ರವನ್ನು 'ಬಾ ನನ್ನ ಪ್ರೀತಿಸು' ಖ್ಯಾತಿಯ ನಟಿ ಮಾಧುರಿ ನಿರ್ವಸುತ್ತಿದ್ದಾರೆ. ಆದರೆ, ಶ್ವೇತಾ ಕಳೆ ಹಾಗೂ ನಟನೆ ಇಲ್ಲಿ ಕಾಣಿಸುತ್ತಿಲ್ಲವಷ್ಟೇ... ☯

# ಅನದರ್ ಬ್ಲಾಕ್ ಬಸ್ಟರ್ ಕಮಿಂಗ್ ಫ್ರಮ್ ಧನುಷ್!



ಧನುಷ್ ಅಭಿನಯಿಸಿದ ಚಿತ್ರಗಳೆಲ್ಲ ಸೂಪರ್ ಹಿಟ್ ಹಿಟ್! ಅದರಲ್ಲೂ ಒಳ್ಳೆಯ ನಿರ್ದೇಶಕರು ಸಿಕ್ಕಿಬಿಟ್ರೆ ಬ್ಲಾಕ್ ಬಸ್ಟರ್ ಗ್ಯಾರೆಂಟಿ! ಇದೀಗ ತೆಲುಗಿನ ಸ್ಟಾರ್ ಡೈರೆಕ್ಟರ್ ಶೇಖರ್ ಕಮ್ಮುಲ, ಧನುಷ್ ಜೊತೆಯಾಗಿ 'ಕುಬೇರ' ಚಿತ್ರಿಸಿ ತೆರೆಗೆ ಅರ್ಪಿಸಿದ್ದಾರೆ.



ಪ್ಯಾನ್ ಇಂಡಿಯಾ ಚಿತ್ರವಾಗಿ ದೇಶದೆಲ್ಲೆಡೆ ರಿಲೀಸ್ ಆಗಿರುವ ಈ ಸಿನಿಮಾದಲ್ಲಿ 'ಕಿಂಗ್' ನಾಗಾರ್ಜುನ ಸ್ಪೆಷಲ್ ರೋಲ್ ಮಾಡಿದ್ದಾರೆ. ಮೊದಲ ದಿನವೇ ಜಾತ್ರೆ! ಈ ಸಿನಿಮಾ ಬ್ಲಾಕ್ ಬಸ್ಟರ್ ಆಗುವ ಎಲ್ಲಾ ಕುರುಹುಗಳು ಆಲ್‌ರೆಡಿ ಸಿಕ್ಕಿಬಿಟ್ಟಿವೆ! ಕುಬೇರ ಚಿತ್ರದಲ್ಲಿ ಕತೆ, ಚಿತ್ರಕತೆಯೇ ಹೈಲೈಟ್! ಪೂರ್ತಿ ಹೇಳಿಬಿಟ್ರೆ ಮಜಾ ಇರೋಲ್ಲ, ಸಿಂಪಲ್ ಆಗಿ ಹೇಳಿಬಿಡ್ತೇನೆ... ಭ್ರಷ್ಟ ವ್ಯವಸ್ಥೆ, ಧಕ್ಷ ಅಧಿಕಾರಿ, ಸ್ವಿಸ್ ಬ್ಯಾಂಕ್, ಸಹಸ್ರಾರು ಕೋಟಿ ಕೊಳ್ಳೆ..... ಇದರ ನಡುವೆ 'ಭಿಕ್ಷುಕ'ನ ಖದರ್!! ಒಟ್ಟಾರೆ, ಕಮ್ಮುಲ, ಧನುಷ್, ನಾಗಾರ್ಜುನರಿಂದ ಮತ್ತೊಂದು ಬ್ಲಾಕ್ ಬಸ್ಟರ್ ಬಂದಾಗಿದೆ ಎನ್ನಬಹುದು!!! ☯

# 'ಡಿ ಬಾಸ್' ಅಡ್ಡಾದಲ್ಲಿ ಪವಿತ್ರ ಪಾಪಿ ಸುತ್ತಾಟ!

ಬೆಂಗಳೂರಿನ ರಾಜರಾಜೇಶ್ವರಿ ನಗರದಲ್ಲಿರುವ ಸ್ಟೋನಿ ಬ್ರೂಕ್ ರೆಸ್ಟೋರೆಂಟ್ ಅನ್ನು ನಟ ದರ್ಶನ್ ಅವರ ಅಡ್ಡಾ ಎಂದೇ ಕರೆಯಲಾಗುತ್ತದೆ. ಏಕೆಂದರೆ ದರ್ಶನ್ ಅವರು ಈ ರೆಸ್ಟೋರೆಂಟ್‌ಗೆ ಹೆಚ್ಚಾಗಿ ಭೇಟಿ ನೀಡಿ, ಸ್ನೇಹಿತರೊಂದಿಗೆ ಪಾರ್ಟಿಗಳನ್ನು ಮಾಡುತ್ತಿದ್ದರು. ಮತ್ತೊಂದು ವಿಶೇಷ ಅಂದ್ರೆ ಇದೇ ರೆಸ್ಟೋರೆಂಟ್‌ನಲ್ಲಿ ದರ್ಶನ್ ಅವರ ನೆನಪಿನಲ್ಲಿ ಡಿ'ಬಾಸ್ ಸಫಾರಿ ಎನ್ನುವ ವಿಶೇಷ ಮಿನಿ ಮ್ಯೂಸಿಯಂ ಕೂಡ ಇದೆ. ಇದರಲ್ಲಿ ಪ್ರಾಣಿಪ್ರಿಯರೂ ಆದ ದರ್ಶನ್ ಅವರು ಸೆರೆಹಿಡಿದಿದ್ದ ಅಪರೂಪದ ವನ್ಯಜೀವಿ ಫೋಟೋಗಳನ್ನು ಪ್ರದರ್ಶನಕ್ಕೆ ಇಡಲಾಗಿದೆ. ಇದನ್ನು ದರ್ಶನ್ ಅವರೇ ಉದ್ಘಾಟಿಸಿದ್ದರು.



ಈ ಡಿ'ಬಾಸ್ ಸಫಾರಿಗೆ ಪವಿತ್ರಾ ಗೌಡ ಭೇಟಿ ನೀಡಿರುವ ವಿಡಿಯೋವನ್ನು ವ್ಯಕ್ತಿಯೊಬ್ಬರು ಇನ್‌ಸ್ಟಾಗ್ರಾಂನಲ್ಲಿ ಪೋಸ್ಟ್ ಮಾಡಿದ್ದಾರೆ. ದರ್ಶನ್ ಕ್ಲಿಕ್ಕಿಸಿರುವ ಫೋಟೋಗಳನ್ನು ನೋಡಿ ಪವಿತ್ರಾ ಗೌಡ ಫುಲ್ ಖುಷ್ ಆಗಿದ್ದಾರೆ. ಡಿಬಾಸ್ ಸಫಾರಿ ಎಂಬ ಬೋರ್ಡ್ ಮುಂದೆ ನಿಂತು ಜೋರಾಗಿ ನಕ್ಕಿದ್ದಾರೆ. ಈ ವಿಡಿಯೋ ಹಂಚಿಕೊಂಡಿರುವ ಅವರು ಅಕ್ಕಾ ನೀವು ಯಾವಾಗಲೂ ಖುಷಿಯಾಗಿರಬೇಕು ಎಂದು ಬರೆದುಕೊಂಡಿದ್ದಾರೆ. ಸದ್ಯ ಈ ವಿಡಿಯೋ ವೈರಲ್ ಆಗಿದೆ. ಈ ವಿಡಿಯೋ ಅನ್ನು ಪವಿತ್ರಾ ಗೌಡ ಕೂಡ ರೀ-ಪೋಸ್ಟ್ ಮಾಡಿಕೊಂಡು ಥ್ಯಾಂಕ್ಯು ಪ್ರದೀಪ್ ಎಂದು ಬರೆದುಕೊಂಡಿದ್ದಾರೆ. ಇವಳು ರಾಣಿ, ಅವನು ಪಿಂಪ್ ಎನ್ನಬಹುದೇ?! ☯





# ಪೊಲೀಸ್, ಕೋರ್ಟ್ ಹಾಗೂ ಮಾಧ್ಯಮ ಸಹಾಯವಾಣಿ

- ಗಂಡನಿಂದ ತೊಂದರೆಯೇ? ಪತ್ನಿಯಿಂದ ಕಿರುಕುಳವೇ?
- ಪ್ರೇಮಿಯಿಂದ ಬ್ಲ್ಯಾಕ್‌ಮೇಲ್ ಆಗುತ್ತಿದೆಯೇ?
- ಹೊಸದಾಗಿ ಮದುವೆಯಾಗಿ ಪತಿ ಪತ್ನಿ ಹೊಂದಾಣಿಕೆ ಇಲ್ಲದೆ ನಿಮಗೆ ಕೌನ್ಸಿಲಿಂಗ್ ಅಗತ್ಯವಿದೆಯೇ?
- ಅಣ್ಣ ತಮ್ಮಂದಿರ ನಡುವೆ, ಅಕ್ಕ ತಂಗಿಯರ ನಡುವೆ ಅಥವಾ ದಾಯದಿಗಳ ನಡುವೆ ಜಮೀನು-ಕೋರ್ಟ್ ವ್ಯಾಜ್ಯಗಳಿವೆಯೇ? ಪೊಲೀಸರು ನಿಮ್ಮ ದೂರರ್ಜಿ ತೆಗೆದುಕೊಳ್ಳುತ್ತಿಲ್ಲವೇ? ಅಥವಾ ಅರ್ಜಿಗೆ ಸರಿಯಾಗಿ ಸ್ಪಂಧಿಸುತ್ತಿಲ್ಲವೇ?
- ಪೋಷಕರೇ, ನಿಮ್ಮ ಮಕ್ಕಳು ನಿಮ್ಮ ಆಸ್ತಿ ಪಾಸ್ತಿ ಹೊಡೆದುಕೊಂಡು ಊಟ ಹಾಕದೆ ಮನೆಯಿಂದ ಹೊರ ಹಾಕಿದ್ದಾರೆಯೇ?
- ಅಪರಿಚಿತ ಪುರುಷ/ಮಹಿಳೆ ಯಿಂದ ತೊಂದರೆ (ಬ್ಲ್ಯಾಕ್ ಮೇಲ್) ಆಗುತ್ತಿದೆಯೇ?
- ಮಹಿಳೆಯರೇ/ ಪುರುಷರೇ ಮಹಿಳಾ ಪೊಲೀಸ್ ಠಾಣೆ ಹಾಗೂ ಮಹಿಳಾ ಆಯೋಗದಿಂದ ನಿಮಗೇನಾದರೂ ಸಹಾಯ ಆಗಬೇಕೇ?
- ಹಣ ಕಾಸು ವ್ಯವಹಾರದಲ್ಲಿ ಮೋಸವಾಗಿ ವಸೂಲಿ ಮಾಡಲಾಗದೆ ಪರದಾಡುತ್ತಿದ್ದೀರಾ? ಅಥವಾ ಯಾರಾದರೂ ಸಾಲ ಕೊಟ್ಟು ಬಡ್ಡಿ ಚಕ್ರಬಡ್ಡಿ ವಿಧಿಸಿ ನಿಮ್ಮ ನೆಮ್ಮದಿ ಹಾಳುಗೆಡವಿದ್ದಾರ? ತಾಲೂಕು ಕಚೇರಿ, ನಾಡ ಕಚೇರಿ, ಸಬ್-ರಿಜಿಸ್ಟ್ರಾರ್ ಕಚೇರಿಯಲ್ಲಿ ನಿಮ್ಮ ಜಮೀನಿಗೆ ಸಂಬಂಧಪಟ್ಟ ಕೆಲಸವಾಗಬೇಕೆ?
- ಯಾರಾದರೂ ಪುಂಡ ಪೋಕರಿಗಳಿಂದ, ರೌಡಿಗಳಿಂದ, ರಾಜಕಾರಣಿಗಳಿಂದ ನಿಮಗೆ ತೊಂದರೆ ಇದೆಯೇ?

ಚಿಂತಿಸಬೇಡಿ – ಹೆದರಬೇಡಿ! ಯಾವುದೇ ಸಮಸ್ಯೆ ಇರಲಿ, ಈ ಎಲ್ಲಾ ಸಮಸ್ಯೆಗಳಿಗೆ 'ಕಾನೂನು' ಪರಿಧಿಯೊಳಗೆ ಹೋರಾಡಲು ಮತ್ತು ಗೆಲ್ಲಲು ನಿಮಗೆ ಸಲಹೆ ನೀಡಲು **'ಪೊಲೀಸ್ ನ್ಯೂಸ್ ಸಹಾಯವಾಣಿ'** ಸಿದ್ದವಿದೆ. ಸಂಬಂಧಪಟ್ಟ ಅಧಿಕಾರಿಗಳು/ ವಕೀಲರು/ ವ್ಯಕ್ತಿಗಳು/ಇಲಾಖೆಯೊಂದಿಗೆ ಮಾತನಾಡಿ ನಿಮ್ಮ ಸಮಸ್ಯೆಗಳ ಪರಿಹಾರಕ್ಕಾಗಿ ಕಾನೂನು ಹೋರಾಟ ಮಾಡಲು ಬೇಕಾದ ಅತ್ಯುತ್ತಮ ಸಲಹೆ ಸೂಚನೆಗಳನ್ನು ಇಲ್ಲಿ ಕೊಡಲಾಗುತ್ತದೆ.

ಸಂಪರ್ಕಕ್ಕಾಗಿ

9513892666, 8884452699 policenewsreporter@gmail.com


Vol. 41 No. 04 Edited, Printed, Published & Owned by M. RAHUL, Printed by him at Shri Omkar Printers, # 4/1, Mahimappa Industrial Estate, Near PIA Bhavan, 100ft Road, Jalahalli Cross, Chokkasandra, T. Dasarahalli Post, BANGALORE-560 057. ☎ 080-23588510, 9513892666
Email: policenewsreporter@gmail.com